بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 27–28

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07–14 ಜುಲೈ 2022, 07–14 ಇಹ್ಸಾನ್ 1401 ಹಿಜರಿ ಶಮ್‌ಸಿ,
07–14 ಧಿಲ್ ಹಜ್ಜ 1443 ಹಿಜರಿ ಖಮರಿ.


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

اِنَّ اللّٰهَ وَمَلٰٓئِكَتَهٗ
يُصَلُّوْنَ عَلَى النَّبِيِّ ؕ
يٰۤاَيُّهَا الَّذِيْنَ اٰمَنُوْا
صَلُّوْا عَلَيْهِ وَسَلِّمُوْا تَسْلِيْمًا

**(ಅಲ್ ಅಹ್‌ಝಾಬ್ : 57)**

**ಅಂದರೆ: ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.**

# ಪ್ರವಾದಿ ಮುಹಮ್ಮದ್(ಸ) ವಿಶೇಶ ಸಂಚಿಕೆ

**ದೇವನಿಗೆ ತಮ್ಮ ಜೀವವನ್ನು ಅರ್ಪಿಸಲು ಸದಾ ಸನ್ನದ್ಧರಾಗಿದ್ದರು. ಅವರು ಜನರ ಬಗ್ಗೆ ಭಯ ಮತ್ತು ಪ್ರತೀಕ್ಷೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದು ಅಲ್ಲಾಹನ ಮೇಲೆ ಮಾತ್ರ ಭರವಸೆಯಿಡುವವರಾಗಿದ್ದರು. ಅವರು ದೇವನ ನಿರ್ಧಾರಗಳಿಗೆ ಮತ್ತು ಇಚ್ಛೆಗಳಿಗೆ ತನ್ನನ್ನು ಅಡಿಯಾಳನ್ನಾಗಿ ಮಾಡಿ, ಏಕದೇವವಿಶ್ವಾಸದ ಘೋಷಣೆಯಿಂದ ತನ್ನ ತಲೆಯ ಮೇಲೆ ಏನೆಲ್ಲ ಗಂಡಾಂತರ ಬರಬಹುದು ಮತ್ತು ಬಹುದೇವಾರಾಧಕರ ಕೈಗಳಿಂದ ಏನೆಲ್ಲ ದುಃಖ ಮತ್ತು ನೋವು ಅನುಭವಿಸಬೇಕಾಗಿ ಬರಬಹುದು ಎಂಬುದರ ಬಗ್ಗೆ ಸ್ವಲ್ಪವೂ ಲಕ್ಷಿಸದೆ ಕಾರ್ಯಪ್ರವೃತ್ತರಾಗಿದ್ದರು.**

## *ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅಧ್ಯಾಪನೆಗಳು*

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪ್ರವಾದಿಗಳಲ್ಲಿ ಶ್ರೇಷ್ಠರಾದ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಸಂಭವಗಳನ್ನು ಅಧ್ಯಯನ ಮಾಡಿದರೆ ಅವರು ಆಂತರಿಕ ಪರಿಶುದ್ಧಿಯನ್ನು ಹೊಂದಿದವರಾಗಿದ್ದರೆಂದೂ ಒಳಗೊಂದು ಹೊರಗೊಂದು ಎಂಬ ದ್ವಿಗುಣವನ್ನು ಹೊಂದಿದವರಾಗಿರಲಿಲ್ಲವೆಂದೂ ಬಹಳ ಸ್ಪಷ್ಟವಾಗಿಯೂ ಪ್ರಕಾಶಮಾನವಾಗಿಯೂ ಎದ್ದು ತೋರುತ್ತದೆ. ಅವರು ದೇವನಿಗೆ ತಮ್ಮ ಜೀವವನ್ನು ಅರ್ಪಿಸಲು ಸದಾ ಸನ್ನದ್ಧರಾಗಿದ್ದರು. ಅವರು ಜನರ ಬಗ್ಗೆ ಭಯ ಮತ್ತು ಪ್ರತೀಕ್ಷೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದು ಅಲ್ಲಾಹನ ಮೇಲೆ ಮಾತ್ರ ಭರವಸೆಯಿಡುವವರಾಗಿದ್ದರು. ಅವರು ದೇವನ ನಿರ್ಧಾರಗಳಿಗೆ ಮತ್ತು ಇಚ್ಛೆಗಳಿಗೆ ತನ್ನನ್ನು ಅಡಿಯಾಳನ್ನಾಗಿ ಮಾಡಿ, ಏಕದೇವವಿಶ್ವಾಸದ ಘೋಷಣೆಯಿಂದ ತನ್ನ ತಲೆಯ ಮೇಲೆ ಏನೆಲ್ಲ ಗಂಡಾಂತರ ಬರಬಹುದು ಮತ್ತು ಬಹುದೇವಾರಾಧಕರ ಕೈಗಳಿಂದ ಏನೆಲ್ಲ ದುಃಖ ಮತ್ತು ನೋವು ಅನುಭವಿಸಬೇಕಾಗಿ ಬರಬಹುದು ಎಂಬುದರ ಬಗ್ಗೆ ಸ್ವಲ್ಪವೂ ಲಕ್ಷಿಸದೆ ಕಾರ್ಯಪ್ರವೃತ್ತರಾಗಿದ್ದರು. ತನ್ನ ಭಗವಂತನ ಆಜ್ಞೆಯನ್ನು ಪಾಲಿಸುವಾಗ, ಅವರು ಎಲ್ಲಾ ದುಃಖಗಳು, ಕ್ಲೇಶ ಕಷ್ಟ ಮತ್ತು ತೊಂದರೆಗಳನ್ನು ಸ್ವೀಕರಿಸಿದರು. ಬೆದರಿಕೆಗಳಿಗೆ ಹೆದರಿಕೆಯಿಲ್ಲದ ಅವರು ಆಧ್ಯಾತ್ಮಿಕ ಪರಿಶ್ರಮದ ಎಲ್ಲಾ ಅವಶ್ಯಕತೆಗಳನ್ನು ಬೋಧಿಸಿದರು, ಮತ್ತು ಆಧ್ಯಾತ್ಮಿಕ ಉಪದೇಶವನ್ನು ಪೂರೈಸಿದರು. ಇತಿಹಾಸದುದ್ದಕ್ಕೂ ಇತರ ಎಲ್ಲಾ ಪ್ರವಾದಿಗಳು ದೇವನ ಮೇಲೆ ಅಂತಹ ನಂಬಿಕೆಯನ್ನು ತೋರಿಸಿದ, ಆತನ ಏಕತೆಯನ್ನು ಬೋಧಿಸಿದ, ವಿಗ್ರಹಾರಾಧನೆಯನ್ನು ತುಂಬಾ ಅಪಾಯದ ಸಂದರ್ಭದಲ್ಲಿ ನಿಷೇಧಿಸಿದ, ಮತ್ತು ಅನೇಕ ಶತ್ರುಗಳನ್ನು ಎದುರಿಸುವಾಗ ಸದಾ ಅಚಲ ಮತ್ತು ದೃಢವಾಗಿ ಉಳಿದುಕೊಂಡ ಯಾವ ಪ್ರವಾದಿಗಳು ಸಹ ಇಲ್ಲ ಎಂದು ನಾನು ನಿಮಗೆ ನಿಜವಾಗಿ ಹೇಳುತ್ತೇನೆ. ಈ ಘಟನೆಗಳ ಬಗ್ಗೆ ಯಾವುದೇ ಮಟ್ಟದ ಪ್ರಾಮಾಣಿಕತೆಯೊಂದಿಗೆ ಆಲೋಚಿಸುವ ಯಾರಾದರೂ ಪವಿತ್ರ ಪ್ರವಾದಿಯ(ಸ) ಆಂತರಿಕ ಸತ್ಯಕ್ಕೆ ಸಾಕ್ಷಿಯಾಗುತ್ತಾರೆ. ಆಳವಾದ ಅಧ್ಯಯನದ ನಂತರ, ಪವಿತ್ರ ಪ್ರವಾದಿ(ಸ)ರು ಕಾಣಿಸಿಕೊಂಡ ಕಾಲವನ್ನು ಬಹಳ ಅಗತ್ಯವಾದ ಕಾಲ ಎಂದು ಸಮಂಜಸವಾದ ವ್ಯಕ್ತಿಯು ಅರಿತುಕೊಳ್ಳುತ್ತಾನೆ. ಅವರು ತಂದ ಬೋಧನೆಗಳು ನಿಸ್ಸಂಶಯವಾಗಿ ನಿಜ ಮತ್ತು ಆ ಸಮಯದ ಎಲ್ಲಾ ಅಗತ್ಯಗಳನ್ನು ಮತ್ತು ಆ ಕಾಲದ ಅವರ ಬೋಧನೆಯು ಎಷ್ಟು ಪರಿಣಾಮಕಾರಿ ಮತ್ತು ಶಕ್ತಿಯುತವಾಗಿತ್ತು ಎಂದರೆ ಸಾವಿರಾರು ಜನರು ಸತ್ಯದತ್ತ ಆಕರ್ಷಿತರಾದರು ಮತ್ತು **ಲಾ ಇಲಾಹ ಇಲ್ಲಲ್ಲಾಹ್** (ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ) ಎಂಬ ಪದಗಳನ್ನು ಅವರ ಹೃದಯದಲ್ಲಿ ಕೆತ್ತಲಾಗಿದೆ. ಪ್ರವಾದಿಯ ಅಂತಿಮ ಗುರಿ ಮೋಕ್ಷಕ್ಕೆ ಕಾರಣವಾಗುವ ಬೋಧನೆಗಳನ್ನು ನೀಡುವುದು ಪರಿಪೂರ್ಣತೆಯನ್ನು ಸಾಧಿಸುವುದು. ಅವರ ಪವಿತ್ರತೆ, ಇತರ ಪ್ರವಾದಿಗಳಿಗಿಂತ ಹೆಚ್ಚುಎಂಬುದನ್ನು ಸಾಬೀತುಪಡಿಸುತ್ತದೆ. ಆದರೆ ಬೇರೆ ಯಾವುದೇ ಪ್ರವಾದಿಯವರ ಜೀವನದಲ್ಲಿ, ಪವಿತ್ರ ಪ್ರವಾದಿ(ಸ)ಜೀವನದಲ್ಲಿ ಕಂಡುಬರುವ ಸತ್ಯದ ಆ ಚಿಹ್ನೆಗಳಲ್ಲಿ ಒಂದನ್ನು ಸಹ ತೋರಿಸುವುದು ಅಸಾಧ್ಯ.

**(ಬರಾಹೀನೆ ಅಹ್ಮದೀಯ, ರೂಹಾನಿ ಖಝಾಇನ್, ಸಂಪುಟ–1, ಪುಟ–111)**

☆ ☆ ☆ ☆

## ಈ ಸಂಚಿಕೆಯಲ್ಲಿರುವ ವಿಷಯಗಳು


| | | |
|---|---|---|
| * | ಸಂಪಾದಕೀಯ | 2 |
| * | ಪವಿತ್ರ ಖುರ್‌ಆನ್ ಹಾಗೂ ಹದೀಸ್‌ನ ಬೋಧನೆಗಳು | 3 |
| * | ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು | 4 |
| * | ಹುಝೂರ್ ಅನ್ವರ್(ಅತಬಿಅ) ಅವರು 03-06-2022ಗೆ ನೀಡಿದ ಖುತ್‌ಬ ಜುಮುಅ | 5 |
| * | ದೇಶವನ್ನಾಳುವವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಮಾದರಿ. | 10 |
| * | “ಪ್ರವಾದಿ ಮುಹಮ್ಮದ್(ಸ)ರವರ ಸಹಾಬ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸಲ್ಲಾಮ್‌ರವರ ಜೀವನ ಚರಿತ್ರೆಯ ಬೆಳಕಿನಲ್ಲಿ ಸಾಂಪತ್ತಿಕ ತ್ಯಾಗದ ಮಹತ್ವ” | 15 |
| * | ಹಝ್ರತ್ ಇಮಾಮ್ ಹಸನ್ ರಝಿಯಲ್ಲಾಹುತಾಲ ಅನ್ಹು ಮತ್ತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ರಝಿಯಲ್ಲಾಹು ಅನ್ಹು ರವರ ಜೀವನ ಚರಿತ್ರೆ | 20 |


لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

# ದುರೂದ್ ಶರೀಫ್‌ನಲ್ಲಿ ಹಝ್ರತ್ ಇಬ್ರಾಹಿಂ(ಅ) ರವರ ಹೆಸರು ಸೇರಿಸಲಿರುವ ಬುದ್ಧಿವಂತಿಕೆ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ನುಡಿಯುತ್ತಾರೆ. ಅದಕ್ಕೆ ಏನು ಕಾರಣ ನಾನು ಹೇಳಲಾರೆ. ಆದರೆ ಅದೊಂದು ವಾಸ್ತವವಾಗಿದೆ. ನನಗೆ ಬಾಲ್ಯದಿಂದಲೇ ಎಲ್ಲಾ ಗತಿಸಿದ ಪ್ರವಾದಿಗಳಲ್ಲಿ ಅಬುಲ್ ಅಂಬಿಯಾ (ಪ್ರವಾದಿಗಳ ಪಿತಾಮಹಾ) ಹಝ್ರತ್ ಇಬ್ರಾಹಿಂ(ಅ) ರವರೊಂದಿಗೆ ಎಲ್ಲರಿಗಿಂತ ಹೆಚ್ಚು ಪ್ರೀತಿ ಹೊಂದಿರುವೆನು. ಆದರೆ ಹಾಗೆ (ಆತ್ಮಾರ್ಪಣೆ ಇರಲಿ) ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಮೇಲಿರುವ ಪ್ರೀತಿ ಸರ್ವ ಪ್ರೀತಿಗಳ ಮೇಲೆ ಮೇಲುಗೈ ಪಡೆದಿದೆ. ಸಾದಾರಣ ಮೇಲುಗೈಯಲ್ಲ ಬದಲು ಎಷ್ಟ್ರರ ಮಟ್ಟಿಗೆ ಮೇಲುಗೈ ಪಡೆದಿದೆ ಎಂದರೆ ಇತರರಿಂದ ಅದರ ಹೋಲಿಕೆಯೇ ಸಾಧ್ಯವಿಲ್ಲ. ಹಝ್ರತ್ ಇಬ್ರಾಹಿಂ(ಅ) ರವರ ಹೋಲಿಕೆಯು ಸಾಧ್ಯವಿಲ್ಲ. ಆದುದರಿಂದ ಹಝ್ರತ್ ಇಬ್ರಾಹಿಂ(ಅ) ರವರ ಮೇಲೆ ವಿಶೇಷ ಪ್ರೀತಿಯಿದ್ದರೂ ನನಗೆ ದುರೂದ್‌ನ ಈ ಅಂಶ **ಕಮಾ ಸಲ್ಲೈತ ಅಲಾ ಇಬ್ರಾಹಿಂ** (ಅಂದರೆ ಓ ಅಲ್ಲಾಹ್, ನೀನು ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಹಝ್ರತ್ ಇಬ್ರಾಹಿಂ(ಅ) ರವರಿಗೆ ನೀಡಿದ ಅನುಗ್ರಹಗಳ ರೀತಿಯಲ್ಲಿ ಆಶೀರ್ವರ್ಧಿಸು) ಎಂಬುದು ಮನಸ್ಸಿಗೆ ಕುಟುಕುತ್ತಿರುತಿತ್ತು. ಮತ್ತು ಭಾವಿಸುತ್ತಿದ್ದೆ ಈ ಪದಗಳಿಂದ ಮೇಲ್ನೋಟಕ್ಕೆ ಹಝ್ರತ್ ಇಬ್ರಾಹಿಂ(ಅ) ರವರ ಮಹಾನತೆ ಸಾಬೀತಾಗುತ್ತದೆ. ಏಕೆಂದರೆ ಈ ಪ್ರಾರ್ಥನೆಯಲ್ಲಿ ಹಝ್ರತ್ ಇಬ್ರಾಹಿಂ(ಅ) ರವರ ನಮೂನೆ ವ್ಯಕ್ತಪಡಿಸುವುದರಿಂದ ಸ್ಪಷ್ಟವಾಗುತ್ತದೆ. ಹಝ್ರತ್ ಇಬ್ರಾಹಿಂ(ಅ) ರವರಿಗೆ ಅಂತಹದೊಂದು ವಿಶೇಷ ರೀತಿಯ ಅನುಗ್ರಹ ಲಭಿಸಿರುತ್ತದೆ. ಅದು ಇಲ್ಲಿಯವರೆಗೆ ನಮ್ಮ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಲಭಿಸಿಲ್ಲ. ಈ ಭಾವನೆಯ ಕಾರಣ ನಾನು ಅಧಿಕವಾಗಿ ದುರೂದ್ ಪಠಿಸುವಾಗ ಅಸಮಾಧಾನ ಪಡೆಯುತ್ತಿದ್ದೆ. ಓ ಅಲ್ಲಾಹ್! ಇದೇನು ಮರ್ಮವಾಗಿದೆ. ನಮ್ಮ ನಬಿ ಸರ್ವಶ್ರೇಷ್ಠ ನಬಿಗಳು ಮತ್ತು ಆದಮರ ಸರದಾರರು ಅದರೆ ದುರೂದ್‌ನಲ್ಲಿ ಈ ಪದಗಳು ಸೇರಿಸಲಾಗಿದೆ. ಮುಹಮ್ಮದ್(ಸ) ರವರ ಮೇಲೆ ಇಬ್ರಾಹಿಂ(ಅ) ರವರ ಮೇಲೆ ಅವತರಿಸಿದಂತಹ ಅನುಗ್ರಹಗಳನ್ನು ಅವತರಿಸು.

ಕೊನೆಯದಾಗಿ ಯೋಚಿಸಿ ವ್ಯಾಖ್ಯಾನಿಸಲು ಈ ಮಾರ್ಗ ಹಿಡಿದಿರುವೆನು. ಹಝ್ರತ್ ಇಬ್ರಾಹಿಂ(ಅ) ರವರ ಉದಾಹರಣೆ ನೀಡಲು ಅನುಗ್ರಹಗಳ ಕಾರಣದಿಂದ ಉದಾಹರಿಸಿದ್ದಲ್ಲ. ಬದಲು ಅದರ ರೂಪಗಳ ಬಗ್ಗೆ ಉದಾಹರಿಸುವ ಉದ್ದೇಶ ಹೊಂದಿದೆ. ಮತ್ತು ಹಝ್ರತ್ ಇಬ್ರಾಹಿಂ(ಅ) ರವರ ಜನಾಂಗಕ್ಕೆ ಬಾಹುಳ್ಯದ ಅಸಾಮಾನ್ಯ ದೃಷ್ಟಾಂತ ಲಭಿಸಿದೆ. ಅವರ ಜನಾಂಗಕ್ಕೆ ಈ ವಿಶೇಷತೆಯು ಲಭ್ಯವಿದೆ. ಅವರಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಪ್ರವಾದಿಗಳು ಆಗಮಿಸಿರುತ್ತಾರೆ. ಆದುದರಿಂದ ನಾನು ಭಾವಿಸುತ್ತಿದ್ದೆ. ಬಹುಶಃ ಅದೇ ಕಾರಣದಿಂದ ಹಝ್ರತ್ ಇಬ್ರಾಹಿಂ(ಅ) ರವರ ಉದಾಹರಣೆ ವಿವರಿಸಿ ಹಝ್ರತ್ ರಸೂಲುಲ್ಲಾಹ್(ಸ) ರವರಿಗಾಗಿ ದುರೂದ್ ಪಠಿಸಲಾಗುತ್ತದೆ. ಆದರೆ ಇನ್ನೂ ಸಹ ನನ್ನ ಮನಸ್ಸು ಪೂರ್ಣ ರೀತಿಯಲ್ಲಿ ತೃಪ್ತಿಪಡಿಸಲಾಗುತ್ತಿರಲಿಲ್ಲ ಮತ್ತು ದುರೂದ್‌ನ ಈ ಪದಗಳು **ಕಮಾ ಸಲ್ಲೈತ ಅಲಾ ಇಬ್ರಾಹಿಂ** ನನಗೆ ಯಾವಾಗಲೂ ಆಂತರಿಕವಾಗಿ ಒಂದು ದುಗುಡ ಬರುತಿತ್ತು ಮತ್ತು ನನ್ನ ಆತ್ಮ ಒಂದು ರೀತಿಯ ಅಡ್ಡಿಯಾಗಿ ಭಾವಿಸುತ್ತಿತ್ತು. ಅದರ ಜೊತೆ ನನ್ನ ಮನಸ್ಸು ಪೂರ್ಣ ಭರವಸೆ ಹೊಂದಿತ್ತು. ಇದು ಅಲ್ಲಾಹನಿಂದ ಅವತರಿಸಿದ ಪ್ರಾರ್ಥನೆ ಆಗಿದೆ. ಅವಶ್ಯವಾಗಿ ಅದರಲ್ಲಿ ಏನಾದರೂ ಬುದ್ಧಿವಂತಿಕೆ ಇರಲೇಬೇಕು. ಅದು ಹಲವು ಜನರ ಮೇಲೆ ಅದರ ಬುದ್ಧಿವಂತಿಕೆ ಸ್ಪಷ್ಟವಾಗಿರಬೇಕು. ಇನ್‌ಶಾಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ ನನ್ನ ಮೇಲೆಯೂ ಒಂದು ದಿನ ಆ ರಹಸ್ಯ ತಿಳಿದೀತು. ಕೊನೆಗೆ ಕೆಲ ಅವದಿ ನಂತರ ಅಲ್ಲಾಹನು ನನಗೂ ಸಹ ಅದರ ಬುದ್ಧಿವಂತಿಕೆಯಿಂದ ತಿಳಿಯಪಡಿಸಿದನು. ಇದೀಗ ನನಗೆ ಅಲ್ಲಾಹನ ಅನುಗ್ರಹದಿಂದ ಈ ವ್ಯಾಖ್ಯಾನ ನನ್ನ ಮನಸ್ಸಿನಲ್ಲಿ ಬಂದು ಪೂರ್ಣ ತೃಪ್ತಿ ಹೊಂದಿದ್ದೇನೆ. ಅದರ ಅರ್ಥ ದುರೂದ್‌ನಲ್ಲಿ ಹಝ್ರತ್ ಇಬ್ರಾಹಿಂ(ಅ) ರವರ ಹೆಸರು ಸೇರಿಸುವ ಆ ಬುದ್ಧಿವಂತಿಕೆ ಕೇವಲ ನನ್ನ ಮನಸ್ಸಿನಲ್ಲಿ ಬಂದಿದೆ. ಅಲ್ಲಾಹನಲ್ಲದೇ ರಸೂಲರ ಮಾತುಗಳಲ್ಲಿ ತುಂಬಾ ವೈಶಾಲ್ಯಗಳಿರುತ್ತವೆ. ಕೆಲ ಸಂದರ್ಭಗಳಲ್ಲಿ ಒಂದೇ ಕಾಲಕ್ಕೆ ಹಲವು ವಿಭಿನ್ನ ಅರ್ಥಗಳು ಮುಂದಿರುತ್ತವೆ. ನನ್ನ ಮನಸ್ಸಿನಲ್ಲಿ ಬಂದಿರುವಂತಹ ವ್ಯಾಖ್ಯಾನ, ಬೇರೆಯವರು ಅದಕ್ಕಿಂತ ಹೆಚ್ಚು ಬುದ್ಧಿವಂತಿಕೆ ಹೊಂದಿರುವ ಸಾಧ್ಯತೆ ಇದೆ. ಆದರೆ ಈಗ ಕನಿಷ್ಠ ಮಟ್ಟ ನನಗೆ ಈ ಸಮಾಧಾನ ಅವಶ್ಯವಾಗಿದೆ, ಯಾವ ಅರ್ಥ ನನ್ನಲ್ಲಿ ಬಂದಿವೆಯೋ ಅವು ಅಲ್ಲಾಹನ ಅನುಗ್ರಹದಿಂದ ಕೇವಲ ಸರಿಯಾದುದಲ್ಲ. ಬದಲು ನನ್ನ ಬಯಕೆಯ ಅನ್ವಯ ಸೂಕ್ಷ್ಮವೂ ಆಗಿವೆ. **ಅಲ್ಲಾಹು ಅಅ್‌ಲಮು ಬಿಸ್ಸವಾಬಿ,** ನಾನು ಆ ಅರ್ಥಗಳು ಮಿತ್ರರ ಅವಗಾಹನೆಗೆ ತರಲು ಈ ಕೆಳಗೆ ನಮೂದಿಸುತ್ತೇನೆ.

ಮಿತ್ರರು ಈ ಮಾತು ತಿಳಿಸಿದವರೇ ಆಗಿದ್ದಾರೆ. ವಾಸ್ತವದಲ್ಲಿ ಇದು ಇಸ್ಲಾಮಿ ಇತಿಹಾಸದಲ್ಲಿ ಒಂದು ಸುಪ್ರಸಿದ್ಧ ಘಟನೆಯಾಗಿದೆ. ಅದನ್ನು ಮುಸಲ್ಮಾರ ಒಂದು ಮಗು ಸಹ ತಿಳಿದಿರುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ಹಝ್ರತ್ ಇಬ್ರಾಹಿಂ ರವರ ವಂಶದವರಾಗಿದ್ದಾರೆ. ಅದು ಹಝ್ರತ್ ಇಸ್ಮಾಯಿಲ್(ಅ) ರವರ ಮೂಲಕ ಅರಬರಲ್ಲಿ ವಾಸವಾದರು ಮತ್ತು ಕಅಬ ನಿರ್ಮಾಣದ ಕಾರ್ಯವು ಹಝ್ರತ್ ಇಬ್ರಾಹಿಂ ಮತ್ತು ಹಝ್ರತ್ ಇಸ್ಮಾಯಿಲ್‌ರವರ ಶುಭಹಸ್ತಗಳಿಂದ ಆಗಿತ್ತು. ಅದರ ಒಂದೊಂದು ಕಲ್ಲು ಸಹ ಆ ಪವಿತ್ರ ತಂದೆ ಮಗನ ಸಾವಿರಾರು ಪ್ರಾರ್ಥನೆಗಳೊಂದಿಗೆ ಸ್ಥಾಪಿಸಲಾಗಿತ್ತು. ಮತ್ತವರು ಆ ಸಂದರ್ಭದಲ್ಲಿ ಈ ಪ್ರಾರ್ಥನೆಯೂ ಸಹ ಮಾಡಿದ್ದರು. ಅವರ ವಂಶದಿಂದ ಸದಾಕಾಲಕ್ಕೂ ಅಲ್ಲಾಹನ ಪವಿತ್ರ ದಾಸರು ಜನ್ಮ ತಾಳುವರು. ಅವರ ಗುರಿ ಅಲ್ಲಾಹನ ಧರ್ಮಕ್ಕಾಗಿ ಸಮರ್ಪಣೆ ಆಗಿರುತ್ತದೆ. ಆ ಸಂದರ್ಭದಲ್ಲಿ ಹಝ್ರತ್ ಇಬ್ರಾಹಿಂ ಮತ್ತು ಹಝ್ರತ್ ಇಸ್ಮಾಯಿಲ್ ಆ ವಿಶೇಷ ರೀತಿಯ ಪ್ರಾರ್ಥನೆ ಸಹ ಮಾಡಿದರು. ಅದರ ಪರಿಣಾಮವಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವ ಆಗಮಿಸಿತು. ಅಂದ ಹಾಗೆ ಪವಿತ್ರ ಖುರ್‌ಆನ್‌ನಲ್ಲಿ ಆ ಐತಿಹಾಸಿಕ ಪ್ರಾರ್ಥನೆಯನ್ನು ಈ ಪ್ರಬಲ ಪದಗಳಲ್ಲಿ ವಿವರಿಸಲಾಗಿದೆ.

**“ರಬ್ಬನಾ ವಬ್‌ಅಸ ಫೀಹಿಮ್ ರಸೂಲಮ್ಮಿನ್‌ಹುಮ್ ಯತ್‌ಲೂ ಅಲೈಹಿಮ್ ಆಯಾತಿಕ ವ ಯುಅಲ್ಲಿಮುಹುಮುಲ್ ಕಿತಾಬ ವಲ್ ಹಿಕ್‌ಮತ ವಯುಝುಕ್ಕೀಹಿಮ್; ಇನ್ನಕ ಅನ್ತಲ್ ಅಝೀಝುಲ್ ಹಕೀಮ್”** ಅಂದರೆ, ನಮ್ಮ ಪ್ರಭೂ, ನಿನ್ನ ವಚನಗಳನ್ನು ಅವರಿಗೆ ಓದಿ ಹೇಳುವ, ನನ್ನ ಗ್ರಂಥವನ್ನೂ, ಜ್ಞಾನವನ್ನೂ ಕಲಿಸುವ ಹಾಗೂ ಅವರನ್ನು ಪರಿಶುದ್ಧರನ್ನಾಗಿ ಮಾಡುವ ಒಬ್ಬ ಪ್ರವಾದಿಯನ್ನು ಅವರೆಡೆಯಲ್ಲಿ ಅವರಿಂದಲೇ ನೀನು ನಿಯೋಜಿಸು. ನಿಶ್ಚಯವಾಗಿಯೂ ನೀನು ಪ್ರತಾಪವಂತನೂ, ಅಗಾಧ ಜ್ಞಾನಿಯೂ ಆಗಿರುವೆ.

ಈ ಪ್ರಾರ್ಥನೆಯ ಪದಗಳು ತುಂಬಾ ಅನುಗ್ರಹಗಳನ್ನು ಹೊಂದಿವೆ. ಆದರೆ ನನಗೆ ಈಗ ಈ ಪ್ರಾರ್ಥನೆಯ ವ್ಯಾಖ್ಯಾನ ವಿಶ್ಲೇಷಣೆಯಲ್ಲಿ ಹೋಗುವ ಉದ್ದೇಶವಿಲ್ಲ. ಬದಲು ಕೇವಲ ಈ ಮಾತು ಮನವರಿಕೆ ಮಾಡಿಸುವ ಉದ್ದೇಶವಿದೆ. ಹಝ್ರತ್ ಇಬ್ರಾಹಿಂ(ಅ) ಮತ್ತು ಹಝ್ರತ್ ಇಸ್ಮಾಯಿಲ್(ಅ) ರವರು ಕಅಬ ನಿರ್ಮಿಸುತ್ತಿರುವ ವೇಳೆ ಮಕ್ಕದವರಲ್ಲಿ ಓರ್ವ ಎಂತಹ ವಿಶೇಷ ನಬಿಯ ಆಗಮನಕ್ಕಾಗಿ ಪ್ರಾರ್ಥಿಸಿದ್ದರು ಎಂದರೆ ಅವರು ತನ್ನ ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿ ನೀಡುವ ಜೊತೆಯಲ್ಲಿ ಅದ್ವಿತೀಯ ಅರ್ಹತೆ ಪಡೆದಿರುವಂತಹ ವ್ಯಕ್ತಿಯಾಗಿರಬೇಕು. ಹಝ್ರತ್ ರಸೂಲುಲ್ಲಾಹ್(ಸ) ಹದೀಸಿನಲ್ಲಿ ನುಡಿಯುತ್ತಾರೆ. ನನ್ನ ಆಗಮನ ಆ ಪ್ರಾರ್ಥನೆಯ ಫಲವೇ ಆಗಿದೆ. ಹಾಗೆ ಅವರ ಈ ಪದಗಳು ಹೀಗಿವೆ:

**“ಅನಾ ದಾವತು ಇಬ್ರಾಹಿಮ್”**

ಅಂದರೆ ನಾನು ಇಬ್ರಾಹಿಮರ ಪ್ರಾರ್ಥನೆಯ ಫಲವಾಗಿದ್ದೇನೆ.

ಇದೀಗ ಮೂರು ಮಾತುಗಳು ನಮ್ಮ ಕೈ ಸೇರಿವೆ.

**ಪ್ರಥಮ:** ಹಝ್ರತ್ ರಸೂಲುಲ್ಲಾಹ್(ಸ) ರವರು ಇಬ್ರಾಹಿಂರ ವಂಶದವರಾಗಿದ್ದಾರೆ.

**ದ್ವಿತೀಯ:** ಹಝ್ರತ್ ಇಬ್ರಾಹಿಂ(ಅ) ಕಅಬ ನಿರ್ಮಾಣ ಸಮಯದಲ್ಲಿ ಮಕ್ಕದವರಲ್ಲಿ ಓರ್ವ ಮಹೋನ್ನತ ಪ್ರವಾದಿಯ ಆಗಮನಕ್ಕಾಗಿ ಪ್ರಾರ್ಥಿಸಿದ್ದರು.

**ಮೂರನೆಯದು:** ಹಝ್ರತ್ ರಸೂಲುಲ್ಲಾಹ್(ಸ) ರವರ ಆಗಮನ ಅದೇ ಪ್ರಾರ್ಥನೆಯ ಫಲವಾಗಿತ್ತು.

ಈಗ ನಾವು ಈ ಮೂರೂ ವಿಷಯಗಳನ್ನು ಮುಂದಿಟ್ಟುಕೊಂಡು ದುರೂದ್ ಪದಗಳ ಮೇಲೆ ಗಮನಹರಿಸಿದರೆ ಸ್ಪಷ್ಟವಾಗುತ್ತದೆ. ದುರೂದಿನಲ್ಲಿರುವುದು **“ಕಮಾ ಸಲ್ಲೈತ ಅಲಾ ಇಬ್ರಾಹಿಮ”** ಅಥವಾ **“ಕಮಾ ಬಾರಕ್ತ ಅಲಾ ಇಬ್ರಾಹಿಂ”** ಪದಗಳು ಕೇವಲ ಹಝ್ರತ್ ರಸೂಲುಲ್ಲಾಹ್(ಸ) ರವರ ದರ್ಜೆಯಲ್ಲಿ ಯಾವುದೇ ಕೊರತೆಯನ್ನು ವ್ಯಕ್ತಪಡಿಸುವಂತಹದ್ದಲ್ಲ. ಬದಲು ವಾಸ್ತವರೂಪದಲ್ಲಿ ಈ ಸಾಕ್ಷ್ಯವನ್ನು ಒದಗಿಸುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಸ್ಥಾನ ಅತ್ಯುನ್ನತವಾದುದಾಗಿದೆ ಮತ್ತು ಅವರ ಸಮುದಾಯ ಅಸಾಮಾನ್ಯ ಪ್ರಗತಿ ಹೊಂದುವುದೆಡೆ ಸಂಕೇತಿಸಲು ದುರೂದಿನಲ್ಲಿ ಆ ಪದಗಳನ್ನು ಸೇರಿಸಲಾಗಿದೆ. **ಕಮಾ ಸಲ್ಲೈತ ಅಲಾ ಇಬ್ರಾಹಿಂ** ಎಂಬ ಪದಗಳ ಉದ್ದೇಶ ಮುಹಮ್ಮದ್ ರಸೂಲುಲ್ಲಾಹ್(ಸ) ಅದೇ ರೀತಿಯ ಅನುಗ್ರಹಗಳನ್ನು ಅವತರಿಸುವ ಯಾವ ರೀತಿಯ ಅನುಗ್ರಹಗಳನ್ನು ಇಬ್ರಾಹಿಂ(ಅ) ಮೇಲೆ ಅವತರಿಸಲಾಗಿತ್ತು.) ಹಝ್ರತ್ ಇಬ್ರಾಹಿಂ(ಅ) ರವರ ಆ ವಿಶೇಷತೆಯ ಕಡೆ ಬೊಟ್ಟು ಮಾಡಲಾಗಿದೆ. (ಅದು ಅವರು ಕಅಬ ನಿರ್ಮಾಣದ ಸಮಯ ಮಾಡಿದ್ದರು ಮತ್ತು ಅದರ ಪರಿಣಾಮವಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರು ಆಗಮಿಸಿದ್ದರು.) ಉದ್ದೇಶವೇನೆಂದರೆ – ಓ ಪ್ರಭೂ! ಯಾವ ರೀತಿ ನೀನು ಇಬ್ರಾಹಿಂರ(ಅ) ಪ್ರಾರ್ಥನೆಯ ಪರಿಣಾಮವಾಗಿ ಇಬ್ರಾಹಿಂರ ವಂಶದಲ್ಲಿ ಓರ್ವ ಮಹೋನ್ನತ ಪ್ರವಾದಿಗೆ ಜನ್ಮ ನೀಡಿದೆಯೋ ಅದೇ ರೀತಿ ಈಗ ಮುಹಮ್ಮದ್

*(ಪುಟ 14 ರಲ್ಲಿ ಮುಂದುವರಿಸಲಾಗಿದೆ)*

**ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.**

## ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ ಮತ್ತು ಮುಮಿನ್‌ಗಳಿಗೆ ಪ್ರವಾದಿ(ಸ)ರವರ ಮೇಲೆ ದರೂದ್ ಮತ್ತು ಸಲಾಮ್ ಸಲ್ಲಿಸುವ ಆಜ್ಞೆ

إِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِيِّ ۚ يٰٓاَيُّهَا الَّذِيْنَ اٰمَنُوْا صَلُّوْا عَلَيْهِ وَسَلِّمُوْا تَسْلِيْمًا

(ಅಲ್‌ಅಹ್‌ಝಾಬ್:57)

ಅಂದರೆ: ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.

ಈ ಆಯತ್‌ನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಪ್ರವಾದಿ(ಸ) ಅವರ ಕಾರ್ಯಗಳು ಹೇಗಿದ್ದವು ಎಂದರೆ ಸರ್ವಶಕ್ತನಾದ ಅಲ್ಲಾಹನು ಅದನ್ನು ಪ್ರಶಂಸಿಸಲು ಅಥವಾ ಅವರ ಗುಣಲಕ್ಷಣಗಳನ್ನು ವ್ಯಾಖ್ಯಾನಿಸಲು ಯಾವುದೇ ವಿಶೇಶ ಪದವನ್ನು ಹೇಳಲಿಲ್ಲ ಎಂದು ಈ ಆಯತ್ ತೋರಿಸುತ್ತದೆ. ಪದಗಳನ್ನು ಕಂಡುಹಿಡಿಯಬಹುದಿತ್ತು ಆದರೆ ಅವುಗಳನ್ನು ಸ್ವತಃ ಬಳಸಲಿಲ್ಲ. ಅಂದರೆ ಪ್ರವಾದಿ(ಸ) ರವರ ಉತ್ತಮ ನಡತೆಯ ಪ್ರಶಂಸೆ, ವ್ಯಾಖ್ಯಾನದಿಂದ ಹೊರಗಿತ್ತು. ಈ ರೀತಿಯ ಆಯತ್ ಅನ್ನು ಅನ್ಯ ಪ್ರವಾದಿಗಳಿಗೆ ಬಳಸಲಿಲ್ಲ. ಪ್ರವಾದಿ(ಸ)ರವರ ಆತ್ಮದಲ್ಲಿ ಪ್ರಾಮಾಣಿಕತೆ ಮತ್ತು ಪರಿಶುದ್ಧತೆ ಇತ್ತು ಮತ್ತು ಅವರ(ಸ) ಕರ್ಮಗಳು ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಸಂತೋಷಕರವಾಗಿದ್ದವು ಎಂದರೆ ಸರ್ವಶಕ್ತನಾದ ಅಲ್ಲಾಹನು ಮುಂದಿನ ಜನರಿಗೆ ಕೃತಜ್ಞತೆಯಾಗಿ ದರೂದ್ ಕಳುಹಿಸಲು ಮುಂದಿನ ಜನರಿಗೆ ಆಜ್ಞಾಪಿಸಿದನು." (ಮಲ್‌ಫೂಝಾತ್, ಸಂಪುಟ–1, ಪುಟ–32, 2018 ಖಾದಿಯಾನ್)

## ಪ್ರವಾದಿ ಮುಹಮ್ಮದ್(ಸ) ಎಲ್ಲಾ ಜನರಿಗೆ ಅನುಗ್ರಹವಾಗಿಯೇ ಕಳುಹಿಸಲಾಗಿದೆ

وَمَآ اَرْسَلْنٰكَ اِلَّا رَحْمَةً لِّلْعٰلَمِيْنَ ○ (ಅಂಬಿಯಾ: 108)

ಅಂದರೆ: ಲೋಕದ ಎಲ್ಲ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ.

## ಸಕಲ ಮನುಷ್ಯರಿಗೆ ಪ್ರವಾದಿಯಾಗಿದ್ದಾರೆ

وَمَآ اَرْسَلْنٰكَ اِلَّا كَآفَّةً لِّلنَّاسِ بَشِيْرًا وَّنَذِيْرًا وَّلٰكِنَّ اَكْثَرَ النَّاسِ لَا يَعْلَمُوْنَ ○ (ಸಬಾ: 29)

ಅಂದರೆ: ನಾವು ನಿನ್ನನ್ನು ಸಕಲ ಮನುಷ್ಯರಿಗೆ ಶುಭವಾರ್ತೆ ನೀಡುವವನಾಗಿಯೂ ಮುನ್ನೆಚ್ಚರಿಕೆಗಾರನಾಗಿಯೂ ಕಳುಹಿಸಿದ್ದೇವೆ. ಆದರೆ ಹೆಚ್ಚಿನ ಜನರು ಮನವರಿಕೆ ಮಾಡುವುದಿಲ್ಲ.

## ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯದಲ್ಲಿ ಏಕೈಕ ಪ್ರವಾದಿ

اَللّٰهُ نُوْرُ السَّمٰوٰتِ وَالْاَرْضِ ۭ مَثَلُ نُوْرِهٖ كَمِشْكٰوةٍ فِيْهَا مِصْبَاحٌ ۭ اَلْمِصْبَاحُ فِيْ زُجَاجَةٍ ۭ اَلزُّجَاجَةُ كَاَنَّهَا كَوْكَبٌ دُرِّيٌّ يُّوْقَدُ مِنْ شَجَرَةٍ مُّبٰرَكَةٍ زَيْتُوْنَةٍ لَّا شَرْقِيَّةٍ وَّلَا غَرْبِيَّةٍ ۙ يَّكَادُ زَيْتُهَا يُضِيْۗءُ وَلَوْ لَمْ تَمْسَسْهُ نَارٌ ۭ نُوْرٌ عَلٰي نُوْرٍ ۭ يَهْدِي اللّٰهُ لِنُوْرِهٖ مَنْ يَّشَاۗءُ ۭ وَيَضْرِبُ اللّٰهُ الْاَمْثَالَ لِلنَّاسِ ۭ وَاللّٰهُ بِكُلِّ شَيْءٍ عَلِيْمٌ ○ (ಅನ್ನೂರ್: 36)

ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ಅವನ ಪ್ರಕಾಶದ ಉಪಮೆ ಒಂದು (ಹೊಳಪುಳ್ಳ) ಗೋಡೆಗೂಡು ಇದ್ದು ಅದರೊಳಗೆ ಒಂದು ದೀಪವಿಟ್ಟ ಹಾಗೆ. ಆ ದೀಪ ಒಂದು ಗಾಜಿನ ಬುರುಡೆಯೊಳಗಿದೆ; ಆ ಗಾಜಿನ ಬುರುಡೆ ಪ್ರಕಾಶಮಾನವಾದ ನಕ್ಷತ್ರದಂತೆ ಹೊಳೆಯುತ್ತದೆ. ಅದು (ಆ ದೀಪ) ಪೌರ್ವಾತ್ಯವಾಗಲಿ ಪಾಶ್ಚಿಮಾತ್ಯವಾಗಲಿ ಅಲ್ಲದ350 ಅನುಗ್ರಹೀತವಾದೊಂದು ಓಲಿವ್ ವೃಕ್ಷದ ತೈಲದಿಂದ ಉರಿಸಲ್ಪಡುತ್ತದೆ; ಅಗ್ನಿ ಆ ತೈಲವನ್ನು ಸ್ಪರ್ಶಿಸಿಲ್ಲವಾದರೂ ಅದು ತನ್ನಿಂತಾನೇ ಪ್ರಕಾಶಿಸುವುದು; ಪ್ರಕಾಶದ ಮೇಲೆ ಪ್ರಕಾಶ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನ ಪ್ರಕಾಶದ ಕಡೆಗೆ ಕೊಂಡೊಯ್ಯುತ್ತಾನೆ. ಜನರಿಗೋಸ್ಕರ ಅಲ್ಲಾಹನು ಉಪಮೆಗಳನ್ನು ನೀಡುತ್ತಾನೆ. ಅಲ್ಲಾಹನು ಎಲ್ಲ ವಿಚಾರಗಳನ್ನು ಬಲ್ಲವನಾಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ) ಅವರು ನೋಟದಲ್ಲಿ ವಿಸ್ಮಯ ಮತ್ತು ಸೂಕ್ಷ್ಮತೆಯನ್ನು ಹೊಂದಿದ್ದರು, ಶುಭ್ರಬಿಳಿಬಣ್ಣ, ಅಗಲವಾದ ಹಣೆ, ಪರಿಶುದ್ಧ ಮುಖ ಚಹರೆಯು ಪೂರ್ಣಚಂದ್ರನಂತೆ ಹೊಳೆಯುತ್ತಿತ್ತು

ಹಝ್ರತ್ ಹಸನ್ ಬಿನ್ ಅಲಿ(ರ) ವರದಿ ಮಾಡುತ್ತಾರೆ ನಾನು ನನ್ನ ಚಿಕ್ಕಪ್ಪ ಹಿಂದ್ ಇಬ್ನು ಅಬಿ ಹಾಲ ಅವರಿಂದ ಪ್ರವಾದಿ(ಸ) ಅವರ ರೂಪದ ಬಗ್ಗೆ ಪ್ರಶ್ನಿಸಿದೆ, ಅವರು ಪ್ರವಾದಿ(ಸ) ಅವರ ರೂಪ ವಿವರಣೆಯಲ್ಲಿ ತುಂಬ ಪರಿಣತಿ ಹೊಂದಿದ್ದರು. ನಾನು ಅದನ್ನು ಗ್ರಹಿಸಿಕೊಳ್ಳುವ ರೀತಿಯಲ್ಲಿ ಅವರು ವಿವರಿಸಲಿ ಎಂದು ಬಯಸುತ್ತಿದ್ದ. ಅಂದ ಹಾಗೆ ಹಿಂದ್ ಅವರು ಹೇಳಿದರು– ಪ್ರವಾದಿ(ಸ) ಅವರ ನೋಟವು ವಿಸ್ಮಯ ಮತ್ತು ಪೂರ್ಣ ಚಂದ್ರನಂತೆ ಹೊಳೆಯುತ್ತಿತ್ತು. ಪರಿಶುದ್ಧ ಮುಖ ಚಹರೆಯು ಪೂರ್ಣ ಚಂದ್ರನಂತೆ ಹೊಳೆಯುತ್ತಿತ್ತು. ಅವರ ಎತ್ತರವು ಮಧ್ಯಸ್ತಿತಿಯದ್ದಾಗಿತ್ತು ಅಂದರೆ ಉದ್ದವು ಅಲ್ಲ ಗಿಡ್ಡವೂ ಅಲ್ಲ, ಶಿರ ದೊಡ್ಡ, ಕೊಂಕಿದ ಕೂದಲು ಮತ್ತು ತಲೆತುಂಬ ಕೂದಲು ಅದು ಕಿವಿಗಳ ತುದಿಯವರೆಗೂ ತಲುಪುತ್ತಿತ್ತು, ಶುಭ್ರ ಬಾಚಣಿಕೆ, ಶುಭ್ರ ಬಿಳಿಬಣ್ಣ, ಅಗಲವಾದ ಹಣೆ, ಕಣ್ಣಿನ ಪೊರೆಗಳು ಉದ್ದವಾಗಿ ತೆಳುವಾಗಿದ್ದವು ಮತ್ತು ದಟ್ಟವಾಗಿದ್ದವು ಅದು ಪೇಚು ಹಾಕಿಕೊಂಡಿರಲಿಲ್ಲ ಬದಲು ಮಧ್ಯದಲ್ಲಿ ಬಳಿಯಾದ ಜಾಗ ಕಾಣುತ್ತಿತ್ತು ಅದು ಕೋಪದ ಸಮಯ ಎದ್ದು ಕಾಣುತ್ತಿದ್ದವು. ಮೂಗು ತೆಳುವಾಗಿ ಅದರ ಮೇಲೆ ಪ್ರಕಾಶ ಮಿನುಗುತ್ತಿತ್ತು ಅದು ಸಾಮಾನ್ಯವಾಗಿ ನೋಡಿದರೆ ಎದ್ದು ನಿಂತಂತೆ ಕಾಣುತ್ತಿತ್ತು. ಕೂದಲು ದಟ್ಟವಾಗಿದ್ದವು, ಮೃದುವಾದ ಕೆನ್ನೆಗಳು ಮತ್ತು ಸಮವಾಗಿದ್ದವು ಹಲ್ಲುಗಳು ಬಿಳಿ ಮತ್ತು ಹೊಳವುಳ್ಳವಾಗಿದ್ದವು, ಕುತ್ತಿಗೆ ಹೂಜಿಯ ರೀತಿ ಬೆಳ್ಳಿಯಂತೆ ನೇರವಾಗಿರುತ್ತಿತ್ತು ಅದರ ಮೇಲೆ ತೆಳು ಕೆಂಪಾದ ಬಣ್ಣ ಹೊಳೆಯುತ್ತಿತ್ತು, ಮಧ್ಯಸ್ತಿಕೆಯ ದೇಹದಾಢ್ಯ, ಶರೀರ ಅಚ್ಚುರಚ್ಚು ಅತ್ಯಂತ ಸುಂದರ, ಹೊಟ್ಟೆ ಮತ್ತು ಎದೆ ಸಮವಾಗಿದ್ದವು, ಸದರ್ (ಎದೆಗೂಡು) ವ್ಯಾಪಕ ಮತ್ತು ವಿಶಾಲವಾಗಿದ್ದವು, ಕೀಲುಗಳು ಬಲಯುತ ಮತ್ತು ಪೂರ್ಣತೆ ಹೊಂದಿದ್ದವು ಚರ್ಮವು ಮಿಂಚುತ್ತಿತ್ತು, ಸೂಕ್ಷ್ಮ ಮತ್ತು ಮೃದುವಾಗಿತ್ತು, ಎದೆಯಿಂದ ಹೊಕ್ಕಳದವರೆಗೆ ಇರುವ ಒಂದೆ ಪಟ್ಟಿಯನ್ನು ಹೊರತುಪಡಿಸಿ ಎದೆ ಮತ್ತು ಹೊಟ್ಟೆಯು ಕೂದಲಿನಿಂದ ಸಂಪೂರ್ಣವಾಗಿ ಸ್ವಚ್ಛವಾಗಿತ್ತು, ಎರಡು ಕೈಗಳು ಮತ್ತು ಭುಜಗಳ ಮೇಲೆ ಸ್ವಲ್ಪ ಕೂದಲು ಮೊಣಕ್ಕೆ ಉದ್ದವಾಗಿದ್ದವು, ಅಂಗೈಗಳು ಅಗಲ ಮತ್ತು ಮಾಂಸದಿಂದ ತುಂಬಿದ್ದವು, ಬೆರಳುಗಳು ಉದ್ದ ಮತ್ತು ಸಮ್ಮತಿಯಾಗಿದ್ದವು. ಪಾದದ ಅಡಿಭಾಗ ಸ್ವಲ್ಪ ದಪ್ಪವಾಗಿತ್ತು ಹೆಜ್ಜೆಗಳು ಮೃದು ಸಮವಾಗಿದ್ದವು ನೀರು ಕೂಡ ಜಾರುವಂತಿತ್ತು ಅವರು ಒಂದು ಹೆಜ್ಜೆ ಮುಂದೆ ಹಾಕಿದರೆ ಪೂರ್ಣ ಪ್ರಮಾಣದಲ್ಲಿ ಮುಂದು ಹಾಕುತ್ತಿದ್ದರು, ವೇಗವು ಘನತೆಯಿಂದ ಕೂಡಿತ್ತು ಆದರೆ ಒಂದಿಷ್ಟು ವೇಗವಾಗಿ ನಡೆಯುತ್ತಿದ್ದರು, ಎತ್ತರದಿಂದ ಇಳಿದಂತೆ ಭಾಸವಾಗುತ್ತಿತ್ತು. ನೀವು ಒಬ್ಬರ ಕಡೆ ಮುಖ ಮಾಡಿದರೆ ಪೂರ್ಣ ರೀತಿಯಲ್ಲಿ ಮುಖ ಮಾಡುತ್ತಿದ್ದರು. ಯಾವಾಗಲೂ ಕೆಳಗೆ ನೋಡುತ್ತಿದ್ದರು, ನಿಮ್ಮ ನೋಟವು ವಾತಾವರಣಕ್ಕಿಂತ ಭೂಮಿಯ ಮೇಲೆ ಹೆಚ್ಚಿರುತ್ತಿತ್ತು. ಅವರು(ಸ) ಹೆಚ್ಚಾಗಿ ಅರ್ಧ ಮುಚ್ಚಿದ ಕಣ್ಣುಗಳಿಂದ ನೋಡುತ್ತಿದ್ದರು. ತನ್ನ ಅನುಯಾಯಿಗಳ (ಸಹಾಬರ) ಹಿಂದೆ ಹಿಂದೆಯೇ ನಡೆಯುತ್ತಿದ್ದರು, ಅವರ ಕಡೆ ಗಮನ ನೀಡುತ್ತಿದ್ದರು ಪ್ರತಿಯೊಬ್ಬ ಭೇಟಿ ಮಾಡುವವನಿಗೆ ಮೊದಲಾಗಿ ಸಲಾಮ್ ಮಾಡುತ್ತಿದ್ದರು.

**(ಶಮಾಇಲೆ ತಿರ್ಮಿಝಿ, ಬಾಬ್ ಫೀ ಖಿಲ್ಕ್ರಸೂಲುಲ್ಲಾಹ್(ಸ), ಹದೀಖತುಸ್ಸಾಲಿಹೀನ್, ಹದೀಸ್ ಸಂಖ್ಯೆ–22)**

## ಪ್ರವಾದಿ(ಸ.ಅ)ರವರನ್ನು ಪ್ರಾಮಾಣಿಕವಾಗಿ ಅನುಸರಿಸುವುದು ಮತ್ತು ಅವರನ್ನು ಪ್ರೀತಿಸುವುದು ಅಂತಿಮವಾಗಿ ಮನುಷ್ಯನನ್ನು ಅಲ್ಲಾಹನಿಗೆ ಪ್ರಿಯನನ್ನಾಗಿ ಮಾಡುತ್ತದೆ ಎಂಬುದು ನನ್ನ ವೈಯಕ್ತಿಕ ಅನುಭವವಾಗಿದೆ

### *ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅಧ್ಯಾಪನೆಗಳು*

**ದೇವನಲ್ಲಿ ತನ್ನನ್ನು ಲೀನಗೊಳಿಸಿದ ಒಬ್ಬ ದೇವಭಕ್ತನು ಅಂಧಕಾರಮಯ ರಾತ್ರಿಗಳಲ್ಲಿ ಮಾಡುತ್ತಿದ್ದ ಪ್ರಾರ್ಥನೆಗಳೇ ಈ ಪರಿವರ್ತನೆಗಳನ್ನು ಉಂಟುಮಾಡಿದುವು. ಆ ಪ್ರಾರ್ಥನೆಗಳು ಲೋಕದಲ್ಲಿ ಉಂಟುಮಾಡಿದ ಅಲ್ಲೋಲ ಕಲ್ಲೋಲಗಳು ಮತ್ತು ಅವು ತೋರಿಸಿಕೊಟ್ಟ ಅತ್ಯಾಶ್ಚರ್ಯಕರ ಸಂಗತಿಗಳು ಆ ನಿರಕ್ಷರಿ ನಿಸ್ಸಹಾಯಕ ವ್ಯಕ್ತಿಯಿಂದ ಸಾಧಿಸಲ್ಪಡುವುದು ಅಸಾಧ್ಯವೆಂದೇ ತೋರುತ್ತಿದ್ದುವು.**

ಮರುಭೂಮಿಗಳಿಂದ ಕೂಡಿದ ಅರಬ್ ದೇಶದಲ್ಲಿ ಒಂದು ಆಶ್ಚರ್ಯಕರ ವಿದ್ಯಮಾನವುಂಟಾಯಿತು. ಲಕ್ಷಾಂತರ(ಆಧ್ಯಾತ್ಮಿಕವಾಗಿ) ಮೃತರಾದವರು ಕೆಲವೇ ದಿನಗಳಲ್ಲಿ ಜೀವಂತರಾದರು. ಹಲವಾರು ಪೀಳಿಗೆಗಳಿಂದ ಕೆಡುತ್ತಾ ಬಂದಿದ್ದವರು ದೈವಿಕ ವರ್ಣ ಪಡೆದರು. ಕಣ್ಣು ಕಾಣದ ಕುರುಡರು ದೃಷ್ಟಿಯನ್ನು ಪಡೆದರು. ಮೂಗರ ನಾಲಗೆಗಳಲ್ಲಿ ದೈವಿಕ ಜ್ಞಾನ ಪ್ರವಹಿಸಲು ತೊಡಗಿತು. ಹಿಂದೆಂದೂ ಯಾವುದೇ ಕಣ್ಣು ಕಂಡಿರದ, ಯಾವುದೇ ಕಿವಿ ಕೇಳಿರದ ಪರಿವರ್ತನೆ ಲೋಕದಲ್ಲಿ ಥಕ್ಕನೆ ಉಂಟಾಯಿತು. ಅದು ಉಂಟಾದುದಾದರೂ ಹೇಗೆಂದು ನೀವು ತಿಳಿದಿರುವಿರಾ? ದೇವನಲ್ಲಿ ತನ್ನನ್ನು ಲೀನಗೊಳಿಸಿದ ಒಬ್ಬ ದೇವಭಕ್ತನು ಅಂಧಕಾರಮಯ ರಾತ್ರಿಗಳಲ್ಲಿ ಮಾಡುತ್ತಿದ್ದ ಪ್ರಾರ್ಥನೆಗಳೇ ಈ ಪರಿವರ್ತನೆಗಳನ್ನು ಉಂಟುಮಾಡಿದುವು. ಆ ಪ್ರಾರ್ಥನೆಗಳು ಲೋಕದಲ್ಲಿ ಉಂಟುಮಾಡಿದ ಅಲ್ಲೋಲ ಕಲ್ಲೋಲಗಳು ಮತ್ತು ಅವು ತೋರಿಸಿಕೊಟ್ಟ ಅತ್ಯಾಶ್ಚರ್ಯಕರ ಸಂಗತಿಗಳು ಆ ನಿರಕ್ಷರಿ ನಿಸ್ಸಹಾಯಕ ವ್ಯಕ್ತಿಯಿಂದ ಸಾಧಿಸಲ್ಪಡುವುದು ಅಸಾಧ್ಯವೆಂದೇ ತೋರುತ್ತಿದ್ದುವು. **ಅಲ್ಲಾಹುಮ್ಮ ಸಲ್ಲಿ ವ ಸಲ್ಲಿಮ್ ವ ಬಾರಿಕ್ ಅಲೈಹಿ ವ ಆಲಿಹಿ ವ ಗಮ್ಮಿಹೀ ವ ಹಝ್ನಿಹೀ ಲಿ ಹಾಝಿಹಿಲ್ ಉಮ್ಮತಿ ವ ಅನ್‌ಝುಲ ಅಲೈಹಿ ಅನ್ವಾರಿ ರಹ್ಮತಿಕ ಇಲಲ್‌ಅಬದ್** ಅಲ್ಲಾಹನೇ, ನೀನು ನಿನ್ನ ಇಷ್ಟಾಶೀರ್ವಾದಗಳನ್ನೂ ಶಾಂತಿಯನ್ನೂ ಅನುಗ್ರಹಗಳನ್ನೂ ಅವರ ಮೇಲೆಯೂ ಅವರ ಕುಟುಂಬದ ಮೇಲೆಯೂ ಅವರ ಅನುಯಾಯಿಗಳ ಮೇಲೆಯೂ ಅವರು ಈ ಸಮುದಾಯದ ಬಗ್ಗೆ ಹೊಂದಿದ್ದ ಕಾಳಜಿ ಮತ್ತು ಅದಕ್ಕಾಗಿ ಅನುಭವಿಸಿದ ದುಃಖ ಮತ್ತು ಕಷ್ಟದ ಪ್ರಮಾಣಕ್ಕನುಸಾರವಾಗಿ ಸುರಿಸು ಮತ್ತು ನೀನು ನಿನ್ನ ಕೃಪೆಯ ಪ್ರಕಾಶವನ್ನು ಅನಂತವಾಗಿ ಅವರ ಮೇಲೆ ಸುರಿಸುತ್ತಿರು. **(ಬರಕಾತುದ್ದುಆ; ರೂಹಾನಿ ಖ಼ಝಾಇನ್, ಸಂಪುಟ-6, ಪುಟ 10 – 11)**

### ಪೈಗಂಬರ್ ಮುಹಮ್ಮದ್ ಸಲ್ಲಾಹು ಅಲೈಹಿ ವ ಸಲ್ಲಮರ ಸಹನೆ

ನಮ್ಮ ಪೈಗಂಬರ್ ಮುಹಮ್ಮದ್ ಸಲ್ಲಾಹು ಅಲೈಹಿ ವ ಸಲ್ಲಮರು ತನ್ನ ಕಾಲದಲ್ಲಿ ಸ್ವತಃ ಮೊದಲು ಖಡ್ಗವನ್ನು ಖಂಡಿತವಾಗಿಯೂ ಹಿಡಿಯುವವರಾಗಿರಲಿಲ್ಲ ಅವರು ದೀರ್ಘ ಕಾಲ ಅವಿಶ್ವಾಸಿಗಳಿಂದ ಕಷ್ಟ ಅನುಭವಿಸಿದರು. ಅವರು ಎಷ್ಟು ಸಹನೆ ದೋರಿದ ಹಾಗೆ ಸಹನೆ ತೋರಲು ಪ್ರತಿಯೊಬ್ಬನಿಗೆ ಸಾಧ್ಯವಾಗದು. ಅದೇ ರೀತಿ ಅವರ ಶಿಷ್ಯರು ಅವರಿಗೆ ಆಜ್ಞೆ ನೀಡಲ್ಪಟ್ಟ ಹಾಗೆ ಇದೇ ಆಜ್ಞೆಗೆ ಬದ್ಧರಾದರು. ಕಷ್ಟ ಅನುಭವಿಸಿರಿ ಸಹನೆ ದೋರಿರಿ ಎಂದು ಅವರಿಗೆ ಆಜ್ಞಾಪಿಸಲಾಗಿತ್ತು. ಅದೇ ರೀತಿ ಅವರು ಸತ್ಯವನ್ನು ಸಹನೆಯನ್ನು ಪ್ರದರ್ಶಿಸಿದರು. ಶತ್ರುಗಳ ಪದಗಳಿಂದ ತುಳಿಯಲ್ಪಟ್ಟರೂ ಅವರು ಧ್ವನಿ ಎತ್ತಲಿಲ್ಲ. ಅವರ ಮಕ್ಕಳನ್ನು ಅವರ ಎದುರು ತುಂಡು ತುಂಡು ಮಾಡಲಾಯಿತು. ಅವರಿಗೆ ಬೆಂಕಿ ಮತ್ತು ನೀರಿನಿಂದ ಹಿಂಸೆ ನೀಡಲಾಯಿತು. ಅವರು ಕೆಡುಕನ್ನು ಎದುರಿಸುವುದರಿಂದ ಹೇಗೆ ಹೇಗೆ ಸರಿದರೆಂದರೆ ಅವರು ಹಾಲು ಕುಡಿಯುವ ಬೆಕ್ಕು ಶಿಶುಗಳೋ ಎಂಬಂತೆ ಲೋಕದಲ್ಲಿ ಆಗಮಿಸಿದ ಎಲ್ಲಾ ಪ್ರವಾದಿಗಳ ಅನುಯಾಯಿಗಳಲ್ಲಿ ಯಾವುದಾದರೂ ಒಬ್ಬ ಪ್ರವಾದಿಯ ಅನುಯಾಯಿಗಳ ತಮಗೆ ಪ್ರತೀಕಾರ ಮಾಡುವ ಶಕ್ತಿ ಇದ್ದರೂ ಅಲ್ಲಾಹನ ಆಜ್ಞೆ ಅನುಸರಿಸಿ ತಮ್ಮನ್ನು ಪ್ರತಿಕಾರದಿಂದ ತಗೆದುಗೊಂಡರು, ಈ ನಮ್ಮ ಪೈಗಂಬರರ(ಸ) ಅನುಯಾಯಿಗಳು ತಮ್ಮನ್ನು ತಗೆಡುಕೊಂಡ ಹಾಗೆ ಎಂದು ಸಾಬೀತುಗೊಳಿಸಲು ಯಾರಿಗೆ ತಾನೆ ಸಾಧ್ಯ?

ಶೌರ್ಯ, ಜನಸಂಖ್ಯೆ, ತೋಳ್ಬಲ, ಎದುರಿಸುವ ಶಕ್ತಿ ಹೊರಿದಿದ್ದರೂ ಎಲ್ಲಾ ರೀತಿಯ ಧೈರ್ಯ ಸ್ಥೈರ್ಯಗಳನ್ನು ಹೊಂದಿದ್ದರೂ ರಕ್ತ ಪಿಪಾಸು, ಶತ್ರು ನೀಡುತ್ತಿದ್ದ ಕ್ಷಟ ಮತ್ತು ಗಾಯಗಳನ್ನು ಹದಿಮೂರು ವರ್ಷಗಳ ಸಹಿಸಿದಂತಹ ಬೇರೆ ಯಾವುದಾದರೂ ಗುಂಪು ಇತ್ತು ಎನ್ನುವುದರ ಬಗ್ಗೆ ಸಾಕ್ಷ್ಯ ಯಾರ ಬಳಿ ಇದೆ? ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ತೋರಿಸಿದ ಸಹನೆ ಯಾವುದೇ ನಿರ್ಬಂಧಿತಾವಸ್ಥೆಯಲ್ಲಿ ಆಗಿರಲ್ಲಿಲ್ಲ. ಸಹನೆ ದೋರಿದ ಕಾಲದಲ್ಲಿ ಅವರಿಗೆ ಜೀವಾರ್ಪಣೆ ಮಾಡಲು ಸಿದ್ಧರಾಗಿದ್ದ ಶಿಷ್ಯರು ಕೈ ಮತ್ತು ತೋಳುಗಳು ಅವರು ಜಿಹಾದಿನ ಆಜ್ಞೆ ದೊರೆತ ನಂತರ ತೋರಿಸಿದ ಹಾಗೆ ಆಗ ಸಹ ಇದ್ದತ್ತು. ಕೆಲವು ಸಾರಿ ಒಂದು ಸಾವಿರ ಸತ್ಯವಿಶ್ವಾಸಿಗಳಾದ ಯುವಕರು ವಿರೋಧಿಗಳ ಒಂದು ಲಕ್ಷ ಸೈನಿಕರನ್ನು ಯುಧದಲ್ಲಿ ಸೋಲಿಸಿದರು. ಹೀಗೆ ಸಂಭವಿಸಿದರು ಜನರಿಗೆ ತಿಳಿಯಲಿಕ್ಕಾಗಿದೆ. ಮಕ್ಕದಲ್ಲಿ ಶತ್ರುಗಳ ಹಿಂಸಾಚಾರವನ್ನು ಮುಸ್ಲಿಮರು ಸಹಿಸಿದು ಹೇಡಿತನದಿಂದಾಗಿರಲಿಲ್ಲವೆಂದು ತೋರಿಸಿ ಆಡುಗಳ ಹಾಗೆಯೂ ಕುರಿಗಳ ಹಾಗೆಯೂ ವಧಿಸಲ್ಪಡಲು ಸಿದ್ಧರಾದರು. ನಿಶ್ಚಯವಾಗಿಯೂ ಇಂತಹ ಸಹನೆ ಮನುಷ್ಯನ ಸಾಮರ್ಥ್ಯಕ್ಕೆ ಅತೀತಲಾಗಿದೆ. ನಾವು ಲೋಕದ ಎಲ್ಲಾ ಪ್ರವಾದಿಗಳ ಚರಿತ್ರೆಗಳನ್ನು ಓದಿದರೂ ನಾವು ಯಾವುದೇ ಪ್ರವಾದಿಯ ಸಮುದಾಯದಲ್ಲಿ ಇಂತಹ ಉನ್ನತ ನೈತಿಕ ಗುಣವನ್ನು ಕಾಣವಾದೆವು. ಹಿಂದಿನ ಕಾಲದವರ ಸಹನೆಯ ಘಟನೆಗಳನ್ನು ನಾವು ಆಲಿಸುವಾಗ ಕೂಡಲೆ ನಮ್ಮ ಹೃದಯದಲ್ಲಿ ಉಂಟಾಗುವ ಭಾವನೆ ಏನೆಂದರೆ ಅದಕ್ಕೆ ಕಾರಣವಾದುದು ಅಂಜು ಬುರುಕುತನ ಮತ್ತು ಪ್ರತೀಕಾರ ಮಾಡುವ ಶಕ್ತಿ ಹೀನತೆ ಎಂದು. ಆದರೆ ಒಂದು ಸಮುದಾಯ ಸೈನಕ ನೈಪುಣ್ಯತೆ ತನ್ನಲ್ಲಿ ಹೊಂದಿರುವಾಗ ಶೌರ್ಯಯುತವಾದ ಬಲಿಷ್ಠ ಹೃದಯಗಳ ಒಡೆಯದಾಗಿರುವಾಗ ಅವರಿಗೆ ಶತ್ರುಗಳು ಕಷ್ಟ ನೀಡಿದಾಗ ಅವರು ಮಕ್ಕಳು ಕೊಲ್ಲಲ್ಪಡುವಾಗ ಅವರನ್ನು ಈಟೆಯಿಂ ಶತ್ರುಗಳು ಕಿವಿಯುತ್ತರುವಾಗ ಅವರು ಕೆಡುಕನ್ನು ಎದುರಿಸದೆ ಇದ್ದರು ಅವರ ಪೌರಷ ಭರಿತ ಗುಣವಾಗಿದೆ. ಹದಿಮೂರು ವರ್ಷಗಳ ಕಾಲ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಮತ್ತು ಅವರ ಶಿಷ್ಯರು ಇಂತಹ ಗುಣವನ್ನು ಪ್ರಕಟಿಸಿದರು. ಪ್ರತಿಕ್ಷಣ ವಿಪತ್ತುಗಳನ್ನು ಎದುರಿಸಿ ಹದಿಮೂರು ವರ್ಷಗಳ ದೀರ್ಘ ಕಾಲದಲ್ಲಿ ಪ್ರಕಟಿಸಿದ ಸಹನೆ ಅಪ್ರತಿಮವಾಗಿದೆ. ಇದರ ಬಗ್ಗೆ ಯಾರಿಗಾದರೂ ಸಂಶಯವಿದ್ದರೆ ಹಿಂದಿನ ಕಾಲದ ಸಾತ್ವಿಕ ಸಮುದಾಯಗಳಲ್ಲಿ ಇಂತಹ ಸಹನೆಯ ಯದಾಹರಣೆ ಎಲ್ಲಿದೆ ಎಂದು ತೋರಿಕೊಡಲಿ. **(ರೂಹಾನಿ ಖಝಾಇನ್, ಸಂಪುಟ-17, ಗೋರಮೆಂಟ್ ಅಂಗ್ರೇಝಿ ಔರ್ ಜಿಹಾದ್, ಪುಟ-10-11)**

### ಪ್ರವಾದಿ(ಸ.ಅ)ರವರನ್ನು ಪ್ರಾಮಾಣಿಕವಾಗಿ ಅನುಸರಿಸುವುದು ಮತ್ತು ಅವರನ್ನು ಪ್ರೀತಿಸುವುದು ಅಂತಿಮವಾಗಿ ಮನುಷ್ಯನನ್ನು ಅಲ್ಲಾಹನಿಗೆ ಪ್ರಿಯನನ್ನಾಗಿ ಮಾಡುತ್ತದೆ ಎಂಬುದು ನನ್ನ ವೈಯಕ್ತಿಕ ಅನುಭವವಾಗಿದೆ

"ಸರ್ವಶಕ್ತನಾದ ಅಲ್ಲಾಹನು ಪ್ರವಾದಿ(ಸ) ಅವರನ್ನು ಅನುಸರಿಸುವ ಅಂತಹ ವ್ಯಕ್ತಿಗೆ ಷರತ್ತುಬದ್ಧವಾಗಿ ಯಾರೊಂದಿಗಾದರೂ ಪ್ರೀತಿಯನ್ನು ಮಾಡಿದ್ದಾನೆ. ಆದ್ದರಿಂದ, ಪ್ರವಾದಿ (ಸ) ಅವರನ್ನು ಪ್ರಾಮಾಣಿಕವಾಗಿ ಅನುಸರಿಸುವುದು ಮತ್ತು ಅವರನ್ನು ಪ್ರೀತಿಸುವುದು ಅಂತಿಮವಾಗಿ ಮನುಷ್ಯನನ್ನು ಅಲ್ಲಾಹನಿಗೆ ಪ್ರಿಯನನ್ನಾಗಿ ಮಾಡುತ್ತದೆ ಎಂಬುದು ನನ್ನ ವೈಯಕ್ತಿಕ ಅನುಭವವಾಗಿದೆ. ಅದು ಹೇಗೆ ಎಂದರೆ ಅವನ ಮನಸ್ಸಿನಲ್ಲಿ ದೈವಿಕ ಪ್ರೀತಿಯ ಉರಿಯೂತವನ್ನು ಸೃಷ್ಟಿಸುವ ಮೂಲಕವಾಗಿದೆ. ಅಂತಹ ವ್ಯಕ್ತಿಯು ಎಲ್ಲ ವಸ್ತುಗಳನ್ನು ದ್ವೇಶಿಸುತ್ತಾನೆ ಮತ್ತು ಅಲ್ಲಾಹನಿಗೆ ವಿಧೇಯನಾಗುತ್ತಾನೆ ಮತ್ತು ಅವನ ಪ್ರೀತಿ ಮತ್ತು ಉತ್ಸಾಹವು ಸರ್ವಶಕ್ತ ಅಲ್ಲಾಹನಲ್ಲಿ ಮಾತ್ರ ಉಳಿಯುತ್ತದೆ, ಆಗ ದೈವಿಕ ಪ್ರೀತಿಯ ವಿಶೇಷ ಅಭಿವ್ಯಕ್ತಿ ಅವನ ಮೇಲೆ ಬೀಳುತ್ತದೆ ಮತ್ತು ಅವನು ಪ್ರೀತಿಯ ಪೂರ್ಣ ಬಣ್ಣವನ್ನು ಪಡೆಯುತ್ತಾನೆ ಮತ್ತು ಪ್ರೀತಿಯನ್ನು ನೀಡುವ ಮೂಲಕ ಬಲವಾದ ಉತ್ಸಾಹದಿಂದ ಅವನು ಆಕರ್ಷಿಸುತ್ತಾನೆ. ನಂತರ ಅವನು ತನ್ನ ಮನಸ್ಸಿನ ಭಾವನೆಗಳನ್ನು ಜಯಿಸುತ್ತಾನೆ ಮತ್ತು ಅವನ ಬೆಂಬಲ ಮತ್ತು ಸಹಾಯದಲ್ಲಿ ಪ್ರತಿಯೊಂದು ಅಂಶದಿಂದ ಸರ್ವಶಕ್ತನಾದ ಅಲ್ಲಾಹನ ಅಲೌಕಿಕ ಕ್ರಿಯೆಗಳು ಚಿಹ್ನೆಗಳ ಬಣ್ಣದಲ್ಲಿ ಕಾಣಿಸಿಕೊಳ್ಳುತ್ತವೆ."

**(ರೂಹಾನಿ ಖಝಾಇನ್, ಸಂಪುಟ-22, ಹಖೀಖತುಲ್ ವಹಿ, ಪುಟ-66)**

# ಖುತ್‌ಬ ಜುಮುಅ

**ಈ ಯುದ್ಧದಲ್ಲಿ ಅತುಲ್ಯವಾದ ಸಹನೆ ಮತ್ತು ಸ್ಥೈರ್ಯವನ್ನು ಸಹಾಬಿಯರು ತೋರಿಸಿದರು. ನಿರಂತರವಾಗಿ ಶತ್ರುಗಳ ಕಡೆಗೆ ಧಾವಿಸಿದರು. ಕೊನೆಗೆ ಅಲ್ಲಾಹನು ಶತ್ರುಗಳ ಮೇಲೆ ವಿಜಯ ನೀಡಿದನು ಮತ್ತು ಸತ್ಯನಿಷೇಧಿಗಳು ಬೆನ್ನು ತಿರುಗಿಸಿ ಪರಾರಿಯಾಗಲು ಶುರುಮಾಡಿದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಯಮಾಮ ಮುದ್ಧದ ಪರಿಸ್ಥಿತಿಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

**ಮುಸೈಲಮ ಕದ್ದಾಬ್‌ನ ಕೊಲೆಯ ಘಟನೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06-05-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಮುಸೈಲಿಮ ಕದ್ದಾಬಿನ ವಿರುದ್ಧ ಖಾಲಿದ್ ಬಿನ್ ವಲೀದ್(ರ) ನಡೆಸಿದ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಈ ಯುದ್ಧದಲ್ಲಿ ಅನ್ಸಾರರ ಧ್ವಜ ಹಝ್ರತ್ ಸಾಬಿತ್ ಬಿನ್ ಖೈಸ್‌ರ ಬಳಿಯಿತ್ತು. ಮುಹಾಜಿರರ ಬಾವುಟ ಹಝ್ರತ್ ಝೈದ್ ಬಿನ್ ಖತ್ತಾಬ್‌ರ ಬಳಿಯಿತ್ತು. ಝೈದ್ ಬಿನ್ ಖತ್ತಾಬ್ ಜನರೊಡನೆ ಹೀಗೆ ಹೇಳಿದರು: ಎಲೈ ಜನರೇ, ಸುದೃಢವಾಗಿ ನಿಲ್ಲಿರಿ, ಶತ್ರುಗಳ ಮೇಲೆ ದಾಳಿ ನಡೆಸಿರಿ ಮತ್ತು ಮುಂದಕ್ಕೆ ಹೆಜ್ಜೆ ಹಾಕಿರಿ. ಅನಂತರ ಅವರು ಹೀಗೆ ಹೇಳಿದರು: ಅಲ್ಲಾಹನಾಣೆ, ಅಲ್ಲಾಹನು ಶತ್ರುಗಳನ್ನು ಪರಾಜಿತಗೊಳಿಸುವ ತನಕ ಅಥವಾ ನಾನು ಅಲ್ಲಾಹನನ್ನು ಭೇಟಿಯಾಗುವ ತನಕ ನಾನು ಯಾರೊಡನೆಯೂ ಮಾತನಾಡುವುದಿಲ್ಲ. ಅನಂತರ ಅವರು ಸಹ ಶಹೀದ್ ಆದರು. (ಅಲ್‌ಬಿದಾಯ ವನ್ನಹಾಯ, ಸಂಪುಟ-3, ಭಾಗ-6, ಪುಟ-320, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಝೈದ್ ಬಿನ್ ಖತ್ತಾಬ್(ರ) ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರ ಮಲಸಹೋದರರಾಗಿದ್ದರು. ಆರಂಭ ಕಾಲದಲ್ಲಿ ಇಸ್ಲಾಂ ಸ್ವೀಕಾರ ಮಾಡಿದವರಲ್ಲಿ ಅವರು ಒಬ್ಬರಾಗಿದ್ದರು. ಅವರು ಬದ್ರ್ ಮತ್ತು ಅನಂತರದ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಹಿಜ್ರತಿನ ನಂತರ ಅವರು ಮತ್ತು ಮಅನ್ ಬನ್ ಅದ್ದಿ ಅನ್ಸಾರಿ(ರ)ರ ನಡುವೆ ಹಝ್ರತ್ ಪೈಗಂಬರ್(ಸ) ಸಹೋದರ ಸಂಬಂಧವನ್ನು ಸ್ಥಾಪಿಸಿದ್ದರು. ಇಬ್ಬರೂ ಯಮಾಮದ ಯುದ್ಧದಲ್ಲಿ ಶಹೀದ್ ಆದರು. ಯಮಾಮ ಯುದ್ಧದಲ್ಲಿ ಹಝ್ರತ್ ಖಾಲಿದ್(ರ) ಸೈನ್ಯವನ್ನು ಕ್ರಮಪಡಿಸಿದಾಗ ಹಝ್ರತ್ ಝೈದ್ ಬಿನ್ ಖತ್ತಾಬ್(ರ)ರನ್ನು ಒಂದು ಭಾಗದ ಸೇನಾಧಿಪತಿಯನ್ನಾಗಿ ಮಾಡಿದ್ದರು. ಅದೇ ರೀತಿಯಲ್ಲಿ ಮುಹಾಜಿರರ ಧ್ವಜವೂ ಅವರ ಕೈಯಲ್ಲಿ ಇತ್ತು. ಅವರು ಧ್ವಜವನ್ನು ಹಿಡಿದು ಮುಂದಕ್ಕೆ ಧಾವಿಸುತ್ತಿದ್ದರು ಮತ್ತು ಬಹಳ ಕೆಚ್ಚೆದೆಯಿಂದ ಹೋರಾಡಿ ಶಹೀದ್ ಆದಾಗ ಧ್ವಜ ಕೆಳಗೆ ಬಿತ್ತು. ಸಾಲಿಮ್ ಮೌಲಾ ಅಬೀ ಹುಧೈಫ(ರ) ಧ್ವಜವನ್ನು ಎತ್ತಿಕೊಂಡರು. ಈ ಯುದ್ಧದಲ್ಲಿ ಮುಸೈಲಿಮನ ಸಹಾಯಕ ಮತ್ತು ಒಬ್ಬ ಶೂರ ಕುದುರೆ ಸವಾರನಾದ ರಿಜಾಲ್ ಬಿನ್ ಅನ್‌ಫುಹ್‌ನನ್ನು ಝೈದ್(ರ) ವಧಿಸಿದರು. ಝೈದ್(ರ)ರನ್ನು ಮರ್‌ಯಮ್ ಹನ್‌ಫಿ ಎಂಬವನು ಶಹೀದ್ ಮಾಡಿದ್ದನು. ಅನಂತರ ಅವನು ಮುಸ್ಲಿಮನಾದನು. ನೀನು ನನ್ನ ಸಹೋದರನನ್ನು ವಧಿಸಿದ್ದೀಯ ಎಂದು ಒಂದು ಬಾರಿ ಹಝ್ರತ್ ಉಮರ್(ರ) ಅವನೊಡನೆ ಹೇಳಿದಾಗ ಅವನು ಹೇಳಿದನು: ಹೇ ಅಮೀರಲ್ ಮೂಅ್‌ಮಿನೀನ್, ಅಲ್ಲಾಹನು ನನ್ನ ಕೈಗಳಿಂದ ಝೈದ್ ಬಿನ್ ಹಾರಿಸಿಗೆ ಶಹೀದ್ ಪದವಿ ನೀಡಿದನು ಮತ್ತು ಅವರ ಕೈಗಳಿಂದ ನನ್ನನ್ನು ನಿಂದಿತನನ್ನಾಗಿ ಮಾಡಲಿಲ್ಲ. ಎಂದರೆ ಅವರು ಶಹಾದತಿನ ಮರಣವನ್ನು ಪಡೆದರು ಮತ್ತು ನನಗೆ ಇಸ್ಲಾಂ ಸ್ವೀಕಾರದ ಸೌಭಾಗ್ಯ ಲಭಿಸಿತು.

ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರ ಪುತ್ರನಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ಕೂಡ ಯಮಾಮ ಯುದ್ಧದಲ್ಲಿ ಭಾಗಿಯಾಗಿದ್ದರು. ಅವರು ಮರಳಿ ಮದೀನಕ್ಕೆ ಬಂದಾಗ, ಹಝ್ರತ್ ಉಮರ್(ರ) ತನ್ನ ಸಹೋದರನು ಶಹೀದ್ ಆದ ದುಃಖದಿಂದ ಮಗನೊಡನೆ ಹೀಗೆ ಕೇಳಿದರು: ನಿನ್ನ ಚಿಕ್ಕಪ್ಪ ಶಹೀದ್ ಆಗಿರುವಾಗ ನೀನೇಕೆ ಮರಳಿ ಬಂದೆ. ಏಕೆ ನಿನ್ನ ಮುಖವನ್ನು ನನ್ನಿಂದ ಮರೆಸಲಿಲ್ಲ. ಝೈದ್(ರ) ಶಹೀದ್ ಆದ ಸುದ್ದಿ ಹಝ್ರತ್ ಉಮರ್(ರ)ರಿಗೆ ಲಭಿಸಿದಾಗ ಅವರು ಹೇಳಿದರು: ಝೈದ್ ಎರಡು ಒಳಿತುಗಳಲ್ಲಿ ನನಗಿಂತ ಮುಂದಾದರು. ಎಂದರೆ, ಅವರು ನನಗಿಂತ ಮುಂಚೆ ಇಸ್ಲಾಂ ಸ್ವೀಕಾರ ಮಾಡಿದರು ಮತ್ತು ನನಗಿಂತ ಮುಂಚಿತವಾಗಿ ಶಹೀದ್ ಆದರು. ಮಾಲಿಕ್ ಬಿನ್ ನುವೇರನನ್ನು ಹಝ್ರತ್ ಖಾಲಿದ್(ರ) ವಧಿಸಿದಾಗ ಅವನ ಸಹೋದರ ಮುತಮ್ಮಿಮ್ ಬಿನ್ ನುವೇರ ತನ್ನ ಸಹೋದರ ಮಾಲಿಕಿನ ಕೊಲೆಯ ಕುರಿತು ಕವನ ರಚಿಸಿದರು. ಅವನಿಗೆ ತನ್ನ ಸಹೋದರನೊಡನೆ ಬಹಳ ಪ್ರೀತಿಯಿತ್ತು. ಹೆಚ್ಚಾಗಿ ಅವರ ಅಗಲುವಿಕೆಯ ಕಾರಣದಿಂದ ಅಳುತ್ತಿದ್ದರು ಮತ್ತು ಕವಿತೆ ರಚಿಸುತ್ತಿದ್ದರು. ಒಂದು ಬಾರಿ ಅವನ ಭೇಟಿ ಹಝ್ರತ್ ಉಮರ್(ರ)ರೊಂದಿಗೆ ಆಯಿತು. ಸಹೋದರನ ಬಗ್ಗೆ ರಚಿಸಿದ ಶೋಕಗೀತೆಯನ್ನು ಹಝ್ರತ್ ಉಮರ್(ರ)ರಿಗೆ ಓದಿ ಹೇಳಿದರು. ಆಗ ಹಝ್ರತ್ ಉಮರ್(ರ) ಅವನೊಡನೆ ಹೇಳಿದರು: ನನಗೆ ಕವನ ರಚಿಸಿಲು ಗೊತ್ತಿರುತ್ತಿದ್ದರೆ, ನಿನ್ನ ಹಾಗೆ ನಾನು ಕೂಡ ನನ್ನ ಸಹೋದರ ಝೈದ್‌ಗಾಗಿ ಕವನ ರಚಿಸುತ್ತಿದ್ದೆ. ಆಗ ಮುತಮ್ಮಿಮ್ ಹೇಳಿದನು: ನನ್ನ ಸಹೋದರನ ಮರಣ ನಿಮ್ಮ ಸಹೋದರನ ಮರಣದ ಹಾಗೆ ಆಗಿದ್ದರೆ, ಎಂದರೆ ಶಹಾದತಿನ ಮೃತ್ಯು ಆಗಿದ್ದರೆ ನಾನು ಎಂದಿಗೂ ನನ್ನ ಸಹೋದರನ ಬಗ್ಗೆ ದುಃಖಿತನಾಗುತ್ತಿರಲಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಎಷ್ಟು ಸುಂದರವಾದ ಶೈಲಿಯಲ್ಲಿ ನೀನು ನನ್ನ ಸಹೋದರನಿಗೆ ಶ್ರದ್ಧಾಂಜಲಿ ಅರ್ಪಿಸಿದೆಯೋ ಆ ರೀತಿಯಲ್ಲಿ ಯಾರೂ ಅರ್ಪಿಸಿಲ್ಲ. ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ವಸಂತದ ಗಾಳಿ ಬೀಸುವಾಗ ಝೈದಿನ ನೆನಪು ತಾಜಾ ಆಗುತ್ತದೆ. (ಸಯ್ಯದುನಾ ಸಬುಬಕ್ಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ-362-363, ಅಲಿ ಮುಹಮ್ಮದ್ ಅಸ್ಸಲಾಬಿ. ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ್) (ತಾರೀಖ್ ಅತ್ತಬರಿ, ಸಂಪುಟ-2, ಪುಟ-280, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ಅಲ್‌ಇಕ್ತಿಫಾ, ಭಾಗ-2, ಪುಟ-111, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1420ಹಿ)

ಯುದ್ಧದ ಪ್ರಸ್ತಾಪ ನಡೆಯುತ್ತಿದೆ. ಮುಸೈಲಿಮ ಕದ್ದಾಬ್ ಆಗಲೂ ಸ್ಥಿರನಾಗಿದ್ದನು ಮತ್ತು ಸತ್ಯನಿಷೇಧಿಗಳ ಯುದ್ಧ ಕೇಂದ್ರವಾಗಿದ್ದನು. ಎಲ್ಲಿಯ ವರೆಗೆ ಮುಸೈಲಿಮನನ್ನು ಕೊಲ್ಲಲಾಗುವುದಿಲ್ಲವೋ ಅಲ್ಲಿಯ ವರೆಗೂ ಯುದ್ಧ ಕೊನೆಗೊಳ್ಳಲಾರದು ಎಂದು ಹಝ್ರತ್ ಖಾಲಿದ್(ರ) ಅಂದಾಜು ಮಾಡಿದರು. ಏಕೆಂದರೆ, ಬನೂ ಹನೀಫದವರಲ್ಲಿ ಯಾರಾದರೂ ಕೊಲ್ಲಲ್ಪಟ್ಟರೆ ಅದರ ಪ್ರಭಾವ ಮುಸೈಲಿಮರ ಜೊತೆಗಾರರ ಮೇಲೆ ಆಗುತ್ತಿರಲಿಲ್ಲ. ಆದ್ದರಿಂದ ಅವರು ಏಕಾಂಗಿಯಾಗಿ ಮುಂದೆ ಬಂದರು. ಏಕಾಂಗಿಯಾಗಿ ಯುದ್ಧ ಮಾಡಲು ಪ್ರತಿಯೊಬ್ಬರನ್ನು ಕರೆದರು. ಎದುರಾಗಿ ಬಂದವರನ್ನೆಲ್ಲ ಹಝ್ರತ್ ಖಾಲಿದ್(ರ) ವಧಿಸಿದರು. ಮುಖಾಮುಖಿಯಾಗಿ ಬರಲು ಹಝ್ರತ್ ಖಾಲಿದ್(ರ) ಮುಸೈಲಿಮನೊಡನೆ ಹೇಳಿದರು. ಅವನು ಅದನ್ನು ಸ್ವೀಕಾರ ಮಾಡಿದನು. ಹಝ್ರತ್ ಖಾಲಿದ್(ರ) ಮುಸೈಲಿಮನ ಇಚ್ಛೆ ಪ್ರಕಾರ ಕೆಲವು ಸಂಗತಿಗಳನ್ನು ಮುಂದಿರಿಸಿದರು. ಅನಂತರ ಹಝ್ರತ್ ಖಾಲಿದ್(ರ) ಅವನ ಮೇಲೆ ದಾಳಿ ನಡೆಸಿದಾಗ ಅವನು ಓಡಿಹೋದನು. ಅವನ ಜೊತೆಗಾರರು ಕೂಡ ಓಡಿಹೋದರು. ಹಝ್ರತ್ ಖಾಲಿದ್(ರ) ಜನರಿಗೆ ಕರೆ ನೀಡುತ್ತಾ ಹೇಳಿದರು: ಎಚ್ಚರ, ಈಗ ತಪ್ಪು ಮಾಡಬೇಡಿರಿ. ಮುಂದಕ್ಕೆ ಹೋಗಿರಿ ಮತ್ತು ಯಾರನ್ನೂ ಪರಾರಿಯಾಗಲು ಬಿಡಬೇಡಿರಿ. ಆಗ ಮುಸ್ಲಿಮರು ಅವರ ಮೇಲೆ ದಾಳಿ ನಡೆಸಲು ಓಡಿ ಹೋದರು. (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ-2, ಪುಟ-221, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಈ ಯುದ್ಧದಲ್ಲಿ ಅತುಲ್ಯವಾದ ಸಹನೆ ಮತ್ತು ಸ್ಥೈರ್ಯವನ್ನು ಸಹಾಬಿಯರು ತೋರಿಸಿದರು. ನಿರಂತರವಾಗಿ ಶತ್ರುಗಳ ಕಡೆಗೆ ಧಾವಿಸಿದರು. ಕೊನೆಗೆ ಅಲ್ಲಾಹನು ಶತ್ರುಗಳ ಮೇಲೆ ವಿಜಯ ನೀಡಿದನು ಮತ್ತು ಸತ್ಯನಿಷೇಧಿಗಳು ಬೆನ್ನು ತಿರುಗಿಸಿ ಪರಾರಿಯಾಗಲು ಶುರುಮಾಡಿದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ವಧಿಸುತ್ತಾ ಹೋದರು ಹಾಗೂ ಖಡ್ಗಗಳನ್ನು ಅವರ ಕೊರಳುಗಳ ಮೇಲೆ ಚಲಾಯಿಸುತ್ತಾ ಹೋದರು. ಕೊನೆಗೆ ಅವರು ಒಂದು ತೋಟದಲ್ಲಿ ಅಭಯ ಪಡೆಯುವಂತಾದರು. ಇದು ಬಹಳ ದೊಡ್ಡ ತೋಟವಾಗಿತ್ತು. ಅದರ ಸುತ್ತ ಗೋಡೆಗಳು ಇದ್ದುವು. ಈ ತೋಟ ಯುದ್ಧ ಮೈದಾನದ ಸಮೀಪವೇ ಇತ್ತು. ಅದು ಮುಸೈಲಿಮನ ತೋಟವಾಗಿತ್ತು. ಮುಸೈಲಿಮನನ್ನು ರಹ್ಮಾನುಲ್ ಯಮಾಮ ಎಂದು ಕರೆಯಲಾಗುತ್ತಿದ್ದ ಹಾಗೆಯೇ ಆ ತೋಟವನ್ನು ಹದೀಖತುರ್ರಹ್ಮಾನ್ ಎಂದು ಕರೆಯಲಾಗುತ್ತಿತ್ತು. ಆದರೆ ಈ ಯುದ್ಧದಲ್ಲಿ ಈ ತೋಟದೊಳಗೆ ಬಹಳವಾಗಿ ಶತ್ರುಗಳು ಕೊಲ್ಲಲ್ಪಟ್ಟ ಕಾರಣದಿಂದ ಆ ತೋಟವನ್ನು ಹದೀಖತುಲ್ ಮೌತ್ ಎಂದರೆ ಮೃತ್ಯುವಿನ ತೋಟವೆಂದು ಕರೆಯಲಾಯಿತು. ಮುಸೈಲಿಮ ಕದ್ದಾಬ್ ತನ್ನ ಸಂಗಡಿಗರ ಜೊತೆಗೆ ಆ ತೋಟದೊಳಗೆ ಹೋದನು. ಶತ್ರುಗಳು ತೋಟದ ಬಾಗಿಲನ್ನು ಮುಚ್ಚಿದರು. ಸಹಾಬಿಯರು ನಾಲ್ಕೂ ಕಡೆಯಿಂದ ಆ ತೋಟವನ್ನು ಸುತ್ತುವರೆದರು. ಯಾವುದಾದರೂ ರೀತಿಯಲ್ಲಿ ಆ ತೋಟದೊಳಗೆ ನುಗ್ಗಲು ಮುಸ್ಲಿಮರು ನಾಲ್ಕೂ ಕಡೆಯಿಂದ ದಾರಿ ಹುಡುಕುತ್ತಿದ್ದರು. ಆದರೆ ಅದು ಕೋಟೆಯ ರೂಪದ ತೋಟವಾಗಿತ್ತು. ಹುಡುಕಿದರು ಕೂಡ ಅದರೊಳಗೆ ಹೋಗಲು ಯಾವುದೇ ಮಾರ್ಗವಿರಲಿಲ್ಲ. ಕೊನೆಗೆ ಅನಸ್ ಬಿನ್ ಮಾಲಿಕ್‌ರ ಸಹೋದರನಾದ ಹಝ್ರತ್ ಬರಾಅ್ ಬಿನ್ ಮಾಲಿಕ್ ಅಲ್ಲಿದ್ದರು. ಅವರು ಉಹದ್ ಮತ್ತು ಖಂದಕ್ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಭಾಗವಹಿಸಿದ್ದರು. ಅವರು ಬಹಳ ಶೂರರಾಗಿದ್ದರು. ಅವರು ಹೀಗೆ ಹೇಳಿದರು: ಎಲೈ ಮುಸ್ಲಿಮರೇ, ಈಗಿರುವ ಒಂದೇ ಒಂದು ಮಾರ್ಗವೆಂದರೆ, ನೀವು ನನ್ನನ್ನು ಎತ್ತಿ ತೋಟದೊಳಗೆ ಹಾಕಿರಿ. ನಾನು ಒಳಗೆ ಹೋಗಿ ಬಾಗಿಲು ತೆರೆಯುವೆನು. ಆದರೆ ಮುಸ್ಲಿಮರಲ್ಲಿ ಉನ್ನತ ಪದವಿಯ ಸಹಾಬಿಯಾಗಿದ್ದ ಅವರು ಸಾವಿರಾರು ಶತ್ರುಗಳ ನಡುವೆ ತನ್ನ ಜೀವವನ್ನು ತೊರೆಯುವುದನ್ನು ಮುಸ್ಲಿಮರಿಗೆ ಸಹಿಸಲು ಆಗುತ್ತಿರಲಿಲ್ಲ. ಆದರೆ ಹಝ್ರತ್ ಬರಾಅ್ ಬಿನ್ ಮಾಲಿಕ್(ರ) ಒತ್ತಾಯ ಪಡಿಸಲು ಶುರುಮಾಡಿದರು ಮತ್ತು ಹೀಗೆ ಹೇಳಿದರು: ನನ್ನನ್ನು ತೋಟದೊಳಗೆ ಬಿಸಾಕಿರಿ ಎಂದು ನಾನು ಅಲ್ಲಾಹನ ಹೆಸರಲ್ಲಿ ಆಣೆಯಿಟ್ಟು ಹೇಳುತ್ತೇನೆ. ಕೊನೆಗೆ ನಿರ್ಬಂಧಿತರಾಗಿ ಮುಸ್ಲಿಮರು ಅವರನ್ನು ತೋಟದ ಗೋಡೆಯ ಮೇಲಕ್ಕೆ ಎತ್ತಿದರು. ಗೋಡೆಯ ಮೇಲೇರಿ ಶತ್ರುಗಳ ದೊಡ್ಡ ಸಂಖ್ಯೆಯನ್ನು ಕಂಡಾಗ ಹಝ್ರತ್ ಬರಾಅ್ ಬಿನ್ ಮಾಲಿಕ್ ಒಂದು ಕ್ಷಣಕ್ಕೆ ತಡೆದು ನಿಂತರು. ಆದರೆ ಕೊನೆಗೆ ಅಲ್ಲಾಹನ ಹೆಸರನ್ನು ಉಚ್ಚರಿಸುತ್ತಾ ಬಾಗಿಲಿನ ಮುಂದಕ್ಕೆ ಜಿಗಿದರು. ಶತ್ರುಗಳೊಡನೆ ಹೋರಾಡುತ್ತಾ ಮತ್ತು ವಧಿಸುತ್ತಾ ಬಾಗಿಲಿನ ಕಡೆಗೆ ಧಾವಿಸಿದರು. ಕೊನೆಗೆ ಅವರು ಬಾಗಿಲಿನ ತನಕ ತಲುಪುವುದರಲ್ಲಿ ಸಫಲರಾದರು ಮತ್ತು ತೋಟದ ಬಾಗಿಲನ್ನು ತೆರೆದರು. ಮುಸ್ಲಿಮರು ಹೊರಗೆ ನಿಂತು ಬಾಗಿಲು ತೆರೆಯುದನ್ನೇ ಕಾಯುತ್ತಿದ್ದರು. ಬಾಗಿಲು ತೆರೆದ ಕೂಡಲೆ ಅವರು ತೋಟವನ್ನು ಪ್ರವೇಶಿಸಿದರು ಮತ್ತು ಶತ್ರುಗಳನ್ನು ವಧಿಸಲು ಆರಂಭಿಸಿದರು. ಬನೂ ಹನೀಫದ ಜನರು ಮುಸ್ಲಿಮರ ಮುಂದಿನಿಂದ ಪರಾರಿಯಾಗಲು ಆರಂಭಿಸಿದರು. ಆದರೆ ತೋಟದಿಂದ ಹೊರಗೆ ಹೋಗಲು ಅವರಿಂದ ಸಾಧ್ಯವಾಗಲಿಲ್ಲ. ಹೀಗೆ ಸಾವಿರಾರು ಜನರು ಮುಸ್ಲಿಮರ ಕೈಗಳಲ್ಲಿ ಕೊಲ್ಲಲ್ಪಟ್ಟರು. ಕೇವಲ ಹಝ್ರತ್ ಬರಾಅ್ ಬಿನ್ ಮಾಲಿಕ್ ಮಾತ್ರವಲ್ಲ, ಇತರ ಕೆಲವು ಮುಸ್ಲಿಮರು ಕೂಡ ಗೋಡೆಯನ್ನು ಹತ್ತಿ ಬಾಗಿಲಿನ ಹತ್ತಿರ ಹೋಗಿದ್ದರು ಎಂದು ಒಂದು ವರದಿಯಲ್ಲಿ ಇದೆ. (ಹಝ್ರತ್ ಅಬುಬಕ್ಕರ್ ಸಿದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕ್ಲ, ಪುಟ–200–201) (ಅಲ್‌ಬಿದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–321, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಲ್‌ಬಿದಾಯ ವನ್ನಹಾಯ, ಸಂಪುಟ–7, ಪುಟ–256, ದಾರ್ ಹಿಜರ್ 1998) (ಮುಜಮುಲ್ ಬಲದಾನ್, ಸಂಪುಟ–2, ಪುಟ–268, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಅಸದುಲ್‌ಗಾಬ, ಸಂಪುಟ–1, ಪುಟ–363–364, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಮುಸ್ಲಿಮರು ಧರ್ಮತ್ಯಾಗಿಗಳೊಡನೆ ಯುದ್ಧ ಮಾಡುತ್ತಾ ಮುಸೈಲಿಮ ಕದ್ದಾಬಿನ ತನಕ ತಲುಪಿದರು. ಅವನು ಒಂದು ಗೋಡೆಯ ಬಿರುಕಿನ ಬಳಿ ನಿಂತುಕೊಂಡಿದ್ದನು. ಮಣ್ಣಿನ ಬಣ್ಣದ ಒಂಟೆಯ ಮೇಲಿದ್ದನು. ರಕ್ಷಣೆ ಪಡೆಯಲು ಗೋಡೆಯನ್ನು ಏರಲು ಬಯಸುತ್ತಿದ್ದನು. ಕೋಪದಿಂದ ಹುಚ್ಚನಂತಾಗಿದ್ದನು. ಉಹದ್ ಯುದ್ಧದಲ್ಲಿ ಹಝ್ರತ್ ಹಂಝರನ್ನು ಶಹೀದ್ ಮಾಡಿದ್ದ ವಹ್‌ಶಿ ಬಿನ್ ಹರಬ್ ಮುಸೈಲಿಮನ ಕಡೆಗೆ ಧಾವಿಸಿದರು. ಹಝ್ರತ್ ಹಂಝರನ್ನು ಶಹೀದ್ ಮಾಡಿದ್ದ ಅದೇ ಈಟಿಯನ್ನು ಮುಸೈಲಿಮನ ಕಡೆಗೆ ಬಿಸಾಕಿದರು. ಅದು ಅವನಿಗೆ ತಗುಲಿತು ಮತ್ತದು ಅವನ ಶರೀರದ ಒಳಗಿನಿಂದ ಹಾದುಹೋಯಿತು. ಅನಂತರ ಬೇಗನೇ ಅಬೂದುಜಾನ ಸಿಮಾಕ್ ಬಿನ್ ಖರ್‌ಶ ಅವನ ಕಡೆಗೆ ಹೋಗಿ ಅವನ ಮೇಲೆ ಖಡ್ಗವನ್ನು ಚಲಾಯಿಸಿದರು. ಅವನು ನೆಲಕ್ಕೆ ಬಿದ್ದು ಪ್ರಾಣಬಿಟ್ಟನು. ಸುಂದರಿಗಳ ಅಮೀರನನ್ನು ಕಪ್ಪು ಬಣ್ಣದ ಒಬ್ಬ ಗುಲಾಮ ಕೊಂದುಹಾಕಿದನು ಎಂದು ಮಹಿಳೆಯೊಬ್ಬಳು ಜೋರಾಗಿ ಕೂಗಿದಳು. (ಅಲ್‌ಬಿದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–321, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–528, ದಾರುಲ್ ಕುತುಬ್ ಇಲ್‌ಮಿಯ 2001)

ಮುಸೈಲಿಮನನ್ನು ಯಾರು ಕೊಂದು ಹಾಕಿದರು ಎಂಬುದರ ಬಗ್ಗೆ ಬಿಲಾದರಿಯ ವರದಿ ಪ್ರಕಾರ ಬನೂ ಆಮಿರಿನ ಗೋತ್ರದ ಒಬ್ಬ ವ್ಯಕ್ತಿಯಾದ ಖದ್ದಾಶ್ ಬಿನ್ ಬಶೀರ್ ಕೊಂದು ಹಾಕಿದ್ದರು. ಅನ್ಸಾರರ ಗೋತ್ರವಾದ ಖಝ್ರಜಿನ ಅಬ್ದುಲ್ಲಾಹ್ ಬಿನ್ ಝೈದ್ ಅವನನ್ನು ಕೊಂದು ಹಾಕಿದ್ದರು ಎಂದು ಒಂದು ವರದಿಯಲ್ಲಿದೆ. ಹಝ್ರತ್ ಅಬೂದುಜಾನ ಕೊಂದುಹಾಕಿದ್ದರು ಎಂದು ಕೆಲವು ಹೇಳುತ್ತಾರೆ. ಮುಆವಿಯ ಬಿನ್ ಅಬೂಸುಫ್‌ಯಾನ್ ಅವನನ್ನು ಕೊಂದುಹಾಕಿದ್ದರು ಎಂದು ಅವರು ಹೇಳಿಕೆಯೂ ಇದೆ. ಎಲ್ಲರೂ ಅವನ ಕೊಲೆಯಲ್ಲಿ ಭಾಗಿಯಾಗಿರಲೂ ಬಹುದು. ಮುಸೈಲಿಮನನ್ನು ಒಬ್ಬ ಅನ್ಸಾರಿ ಮತ್ತು ವಹ್‌ಶಿ ಇಬ್ಬರೂ ಸೇರಿ ಕೊಂದುಹಾಕಿದ್ದರು ಎಂದು ತಬರಿ ಸಹಿತ ಕೆಲವು ಪುಸ್ತಕಗಳಲ್ಲಿ ಬರೆದಿದೆ. (ಅಸ್ಸಿದ್ದೀಖ್, ಪ್ರೊಫೇಸರ್ ಅಲಿ ಮುಹ್ಸಿನ್ ಸಿದ್ದೀಖಿ, ಪುಟ–102–103)

ಮುಸೈಲಿಮನನ್ನು ಕೊಂದುಹಾಕಿದ ಘಟನೆಯನ್ನು ವಹ್‌ಶಿ ಬಿನ್ ಹರಬ್ ಸ್ವತಃ ಹೇಳುತ್ತಾರೆ: ಉಹದ್ ಯುದ್ಧದಲ್ಲಿ ಹಝ್ರತ್ ಹಂಝರನ್ನು ಶಹೀದ್ ಮಾಡಿದ ನಂತರ ಜನರು ಮರಳಿ ಹೋದಾಗ ನಾನು ಕೂಡ ಅವರ ಜೊತೆಗೆ ಮರಳಿ ಹೋದೆನು. ಮಕ್ಕಾ ವಿಜಯದ ತನಕ ನಾನು ಮಕ್ಕಾದಲ್ಲೇ ತಂಗಿದ್ದೆ. ಮಕ್ಕದಲ್ಲಿ ಇಸ್ಲಾಂ ಧರ್ಮ ಹರಡಿತು. ನಾನು ತಾಯಿಫಿನ ಕಡೆಗೆ ಓಡಿಹೋದೆನು. ಜನರು ಹಝ್ರತ್ ಪೈಗಂಬರ್(ಸ)ರ ಕಡೆಗೆ ದೂತರನ್ನು ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ದೂತರಿಂದ ಮುಖ ತಿರುಗಿಸುವುದಿಲ್ಲವೆಂದು ಜನರು ನನ್ನೊಡನೆ ಹೇಳಿದರು. ನಾನು ಕೂಡ ಅವರ ಜೊತೆಗೆ ಹೋದೆನು. ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ತಲುಪಿದೆನು. ಹಝ್ರತ್ ಪೈಗಂಬರ್(ಸ) ನನ್ನನ್ನು ನೋಡಿದಾಗ, "ನೀನು ವಹ್‌ಶಿಯಲ್ಲವೇ" ಎಂದು ಕೇಳಿದರು. ಹೌದೆಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಕುಳಿತುಕೊಳ್ಳು ಮತ್ತು ನೀನು ಹಂಝರನ್ನು ಹೇಗೆ ವಧಿಸಿದೆ ಎಂದು ವಿಶದವಾಗಿ ಹೇಳಿಕೊಡು. ನಾನು ಹಝ್ರತ್ ಪೈಗಂಬರ್(ಸ)ರೊಂದಿಗೆ ಅದನ್ನು ವಿಶದವಾಗಿ ಹೇಳಿಕೊಟ್ಟೆ. ನಾನು ಮಾತನ್ನು ಮುಗಿಸಿದಾಗ ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ನನ್ನ ಮುಂದೆ ಬರದೇ ಇರಲು ನಿನಗೆ ಸಾಧ್ಯವಿದೆಯೇ? ಆಗ ನಾನು ಅಲ್ಲಿಂದ ಹೊರಟೆನು. ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ ಮುಸೈಲಿಮ ಕದ್ದಾಬ್ ದಂಗೆಯೆದ್ದಾಗ, ಹಝ್ರತ್ ಹಂಝರನ್ನು ವಧಿಸಿದಕ್ಕಾಗಿ ಪ್ರಾಯಶ್ಚಿತ್ತವಾಗಿ ನಾನು ಮುಸೈಲಿಮನನ್ನು ಕೊಲ್ಲಲು ಖಂಡಿತ ಹೊರಡುವೆನು ಎಂದು ನಾನು ನಿರ್ಧರಿಸಿದೆ. ವಹ್‌ಶಿ ಹೇಳುತ್ತಾರೆ: ನಾನು ಕೂಡ ಜನರ ಜೊತೆಗೆ ಯುದ್ಧಕ್ಕಾಗಿ ಹೊರಟೆನು. ಮುಸೈಲಿಮ ಗೋಡೆಯ ಬಿರುಕಿನ ಬಳಿ ನಿಂತಿರುವುದನ್ನು ನಾನು ಕಂಡೆನು. ಮಣ್ಣಿನ ಬಣ್ಣದ ಒಂಟೆಯ ಮೇಲೆ ಮುಸೈಲಿಮ ಇದ್ದನು. ನಾನು ನನ್ನ ಈಟಿಯನ್ನು ಅವನ ಎದೆಯ ಕಡೆಗೆ ಎಸೆದೆ. ಅದು ಅವನ ಎರಡು ತೋಳುಗಳ ನಡುವಿನಿಂದ ಹಾದುಹೋಯಿತು. ಅನಂತರ ಅನ್ಸಾರರ ಒಬ್ಬ ವ್ಯಕ್ತಿ ಅವನ ಕಡೆಗೆ ಧಾವಿಸಿದರು. ಅವನ ತಲೆಗೆ ಖಡ್ಗದಿಂದ ಹೊಡೆದರು.

ವಹ್‌ಶಿ ಹೇಳುತ್ತಾರೆ: ನಮ್ಮಿಬ್ಬರಲ್ಲಿ ಯಾರು ಮುಸೈಲಿಮನನ್ನು ಕೊಂದು ಹಾಕಿದೆವು ಎಂದು ಅಲ್ಲಾಹನೇ ಬಲ್ಲನು. ನಾನೇ ಅವನನ್ನು ಕೊಂದುಹಾಕಿದ್ದೇನೆ ಎಂದಾದರೆ, ಹಝ್ರತ್ ಪೈಗಂಬರ್(ಸ)ರ ನಂತರ ಅತ್ಯಂತ ಶ್ರೇಷ್ಠ ವ್ಯಕ್ತಿಯಾದ ಹಝ್ರತ್ ಹಂಝರನ್ನು ಕೂಡ ನಾನು ಕೊಂದು ಹಾಕಿದೆ ಮತ್ತು ಎಲ್ಲರಿಗಿಂತ ನೀಚ ವ್ಯಕ್ತಿಯಾದ ಮುಸೈಲಿಮನನ್ನು ಕೂಡ ನಾನು ಕೊಂದು ಹಾಕಿದಂತಾಯಿತು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–528, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ವರದಿ ಸಂಖ್ಯೆ–4072)

ಇದು ಬುಖಾರಿಯ ವರದಿಯಾಗಿದೆ. ನನ್ನ ಮುಂದೆ ಬರದೇ ಇರಲು ನಿನಗೆ ಸಾಧ್ಯವಿದೆಯೇ? ಎಂದು ಹಝ್ರತ್ ಪೈಗಂಬರ್(ಸ) ವಹ್‌ಶಿಯೊಡನೆ ಹೇಳಿದ ಸಹೀಹ್ ಬುಖಾರಿಯಲ್ಲಿ ವರದಿಯಾದ ಘಟನೆಯನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್‌ರು ಬರೆಯುತ್ತಾರೆ: ವಹ್‌ಶಿಯೊಳಗೆ ಉಂಟಾದ ಬದಲಾವಣೆಯು ಅವರ ನಿಷ್ಠೆಯ ಬಗ್ಗೆ ಸಾಕ್ಷ್ಯವಹಿಸುತ್ತದೆ. ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ ಮಾಡಬೇಕೆಂದು ವಹ್‌ಶಿಗೆ ಬಯಕೆಯಿತ್ತು. ಹೀಗೆ ಯಮಾಮದ ಘೋರ ಯುದ್ಧದಲ್ಲಿ ತನ್ನ ಬಯಕೆ ಮತ್ತು ಹರಕೆಯನ್ನು ಈಡೇರಿಸಿ ಸಂತುಷ್ಟಿಯನ್ನು ಪಡೆದರು. "ನನ್ನ ಮುಂದೆ ಬರದಿರಲು ನಿನಗೆ ಸಾಧ್ಯವಿದೆಯೇ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದು ಅವರ ಉನ್ನತ ನೈತಿಕಗುಣಕ್ಕೆ ಕನ್ನಡಿಯಾಗಿದೆ. ನನಗೆ ಸಾಧ್ಯವಿದ್ದರೆ ನನ್ನ ಮುಂದೆ ಬರಬೇಡ ಎಂಬ ಬಯಕೆಯನ್ನು ಅವರು ಪ್ರಕಟಪಡಿಸಿದರು. ಈ ಶೈಲಿ ಆಜ್ಞೆಯ ರೂಪದ್ದು ಅಲ್ಲ, ಬದಲಾಗಿ ವಿನಂತಿಯ ಶೈಲಿಯಾಗಿದೆ. ಹಝ್ರತ್ ಹಂಝ(ರ)ರೊಂದಿಗೆ

ಹಝ್ರತ್ ಪೈಗಂಬರ್(ಸ)ರಿಗೆ ಇದ್ದ ಪ್ರೀತಿ ಮತ್ತು ಗೌರವದ ಅಂದಾಜು ಇದರಿಂದ ಆಗುತ್ತದೆ. ಪ್ರತೀಕಾರ ಸ್ವಭಾವವುಳ್ಳ ವ್ಯಕ್ತಿ ಸೇಡು ತೀರಿಸಿಕೊಂಡು ತನ್ನ ಮನಸ್ಸನ್ನು ಸಮಾಧಾನಪಡಿಸಬಹುದು. ಆದರೆ ಹಝ್ರತ್ ಪೈಗಂಬರ್(ಸ) ಕ್ಷಮಾಪನೆ ಮಾಡಿದರು. ಹಝ್ರತ್ ಹಂಝ(ರ)ರ ವೇದನಾಜನಕ ಶಹಾದತಿನ ನೆನಪಿನಿಂದ ಮನಸ್ಸಿಗೆ ನೋವು ಉಂಟಾಗದಿರಲಿ ಎಂಬ ಕಾರಣದಿಂದ ವಹ್ಶಿಯೊಡನೆ ಮುಂದೆ ಬರಬೇಡ ಎಂದು ಮಾತ್ರ ಹಝ್ರತ್ ಪೈಗಂಬರ್(ಸ) ಹೇಳಿದ್ದರು. (ಸಹೀಹ್ ಬುಖಾರಿ, ಅನುವಾದ ಝೈನುಲ್ ಆಬಿದೀನ್ ಸಾಹಿಬ್, ಸಂಪುಟ–8, ಪುಟ–198–199)

ಯಮಾಮ ಯುದ್ಧದ ವಿವರಣೆ ಬೇರೊಂದೆಡೆ ಬಂದಿದೆ. ಅದರಲ್ಲಿ ಮುಸ್ಲಿಮರ ಧೈರ್ಯ ಮತ್ತು ಶೌರ್ಯದ ಪ್ರಸ್ತಾಪ ಹೀಗೆ ವರದಿಯಾಗಿದೆ: ಇರುಪಕ್ಷಗಳ ನಡುವೆ ತೀವ್ರತರದ ಯುದ್ಧ ನಡೆಯಿತು. ಎರಡೂ ಪಕ್ಷಗಳ ಅನೇಕ ಜನರು ಕೊಲ್ಲಲ್ಪಟ್ಟರು ಮತ್ತು ಗಾಯಾಳುವಾದರು. ಮುಸ್ಲಿಮರಲ್ಲಿ ಮೊತ್ತಮೊದಲು ಮಾಲಿಕ್ ಬಿನ್ ಔಸ್ ಶಹೀದ್ ಆದರು. ಅನೇಕ ಖುರ್ಆನ್ ಹಾಫಿಝ್‌ಗಳು ಶಹೀದ್ ಆದರು. ಎರಡೂ ಸೈನ್ಯಗಳ ನಡುವೆ ಘನಘೋರವಾದ ಯುದ್ಧ ನಡೆಯಿತು. ಹೀಗೆ ಮುಸ್ಲಿಮರು ಮುಸೈಲಿಮನ ಸೈನ್ಯದೊಂದಿಗೆ ಮತ್ತು ಮುಸೈಲಿಮನ ಸೈನ್ಯ ಮುಸ್ಲಿಮರ ಸೈನ್ಯದೊಂದಿಗೆ ಬಂದುಸೇರಿದುವು. ಸಾಲಿಂ ಮೌಲಾ ಅಬೂಹುದೈಫ ತನ್ನ ಮೊಣಕಾಲುಗಳ ತನಕ ಹೊಂಡವನ್ನು ಅಗೆದರು. ಅವರ ಬಳಿ ಮುಹಾಜಿರರ ಧ್ವಜವಿತ್ತು. ಸಾಬಿತ್(ರ) ಕೂಡ ಅದೇ ರೀತಿಯಲ್ಲಿ ತನಗಾಗಿ ಹೊಂಡವನ್ನು ಅಗೆದಿದ್ದರು. ಅವರ ಬಳಿ ಅನ್ಸಾರರ ಧ್ವಜವಿತ್ತು. ಅವರಿಬ್ಬರೂ ತಮ್ಮ ತಮ್ಮ ಧ್ವಜಗಳನ್ನು ತಮ್ಮ ಜೊತೆಗೆ ಸೇರಿಸಿ ಹಿಡಿದುಕೊಂಡಿದ್ದರು. ಕೊನೆಗೆ ಸಾಲಿಂ(ರ) ಮತ್ತು ಅಬೂಹುದೈಫ(ರ) ಇಬ್ಬರೂ ಶಹೀದ್ ಆದರು. ಹಝ್ರತ್ ಅಬೂಹುದೈಫ(ರ)ರ ತಲೆ ಸಾಲಿಮ್(ರ)ರ ಪಾದಗಳ ಬಳಿಯಿತ್ತು ಮತ್ತು ಸಾಲಿಮ್(ರ)ರ ತಲೆ ಹಝ್ರತ್ ಅಬೂಹುದೈಫ(ರ)ರ ಪಾದಗಳ ಬಳಿಯಿತ್ತು. ಸಾಲಿಂ(ರ) ಶಹೀದ್ ಆದಾಗ ಧ್ವಜ ಸ್ವಲ್ಪ ಸಮಯಕ್ಕೆ ಅದೇ ರೀತಿ ಬಿದ್ದುಕೊಂಡಿತ್ತು. ಅನಂತರ ಬದ್ರೀ ಸಹಾಬಿಯಾದ ಯಜೀದ್ ಬಿನ್ ಖೈಸ್(ರ) ಮುಂದಕ್ಕೆ ಧಾವಿಸಿದರು ಮತ್ತು ಧ್ವಜವನ್ನು ಎತ್ತಿಕೊಂಡರು. ಕೊನೆಗೆ ಅವರು ಕೂಡ ಶಹೀದ್ ಆದರು. ಅನಂತರ ಹಕಮ್ ಬಿನ್ ಸಈದ್ ಬಿನ್ ಆಸ್ ಆ ಧ್ವಜವನ್ನು ಎತ್ತಿಕೊಂಡರು. ಅದರ ಸಂರಕ್ಷಣೆ ಮಾಡುತ್ತಾ ಪೂರ್ತಿ ದಿನ ಹೋರಾಡಿದರು. ಅನಂತರ ಅವರು ಕೂಡ ಶಹೀದ್ ಆದರು. ವಹ್ಶಿ ಹೇಳುತ್ತಾರೆ: ಘೋರವಾದ ಯುದ್ಧ ನಡೆಯಿತು. ಮೂರು ಬಾರಿ ಮುಸ್ಲಿಮರು ಹಿಂದಕ್ಕೆ ಸರಿಯುವಂತಾಯಿತು. ನಾಲ್ಕನೇ ಬಾರಿ ಮುಸ್ಲಿಮರು ತಿರುಗಿ ದಾಳಿ ನಡೆಸಿದರು. ಅವರ ಹೆಜ್ಜೆಗಳು ಸ್ಥಿರವಾದುವು ಮತ್ತು ಖಡ್ಗಗಳ ಮುಂದೆ ಸ್ಥೈರ್ಯದಿಂದ ನಿಂತುಕೊಂಡರು. ಅಲ್ಲಾಹನು ನಮ್ಮ ಮೇಲೆ ತನ್ನ ಸಹಾಯವನ್ನು ಇಳಿಸಿದನು ಮತ್ತು ಬನೀ ಹನೀಫರನ್ನು ಅಲ್ಲಾಹನು ಪರಾಜಿತಗೊಳಿಸಿದನು ಹಾಗೂ ಅಲ್ಲಾಹನು ಮುಸೈಲಿಮನನ್ನು ವಧಿಸಿದನು. ನಾನು ಅಂದು ನನ್ನ ಖಡ್ಗವನ್ನು ಬಹಳಷ್ಟು ಚಲಾಯಿಸಿದೆ. ಎಷ್ಟರ ವರೆಗೆ ಎಂದರೆ, ನನ್ನ ಖಡ್ಗದ ಹಿಡಿಯ ತನಕ ರಕ್ತದಿಂದ ತುಂಬಿ ಹೋಯಿತು. ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಅಮ್ಮಾರ್ ಒಂದು ಪರ್ವತವನ್ನೇರುವುದನ್ನು ನಾನು ಕಂಡೆ. ಅವರು ಹೀಗೆ ಉಚ್ಚ ಸ್ವರದಲ್ಲಿ ಕರೆ ನೀಡುತ್ತಿದ್ದರು: ಎಲೈ ಮುಸ್ಲಿಮರ ಸಂಘವೇ, ನೀವು ಸ್ವರ್ಗದಿಂದ ಓಡಿಹೋಗುತ್ತಿದ್ದೀರಾ? ನಾನು ಅಮ್ಮಾರ್ ಬಿನ್ ಯಾಸಿರ್ ಆಗಿರುವೆನು. ನನ್ನ ಕಡೆಗೆ ಬನ್ನಿರಿ. ವರದಿಗಾರ ಹೇಳುತ್ತಾರೆ: ಅವರ ಕಿವಿ ತುಂಡಾಗಿ ತೂಗಾಡುತ್ತಿರುವುದನ್ನು ನಾನು ನೋಡುತ್ತಿದ್ದೆ. ಅಬೂಖಿಸೀಮ ನಜ್ಜಾರಿ ಹೇಳುತ್ತಾರೆ: ಯಮಾಮ ಯುದ್ಧದಂದು ಮುಸ್ಲಿಮರು ಚದುರಿಹೋದಾಗ ನಾನು ಒಂದು ಕಡೆಗೆ ಸರಿದೆ. ನನ್ನ ಕಣ್ಣುಗಳ ಮುಂದೆ ಆ ದೃಶ್ಯವಿದೆ. ನಾನು ಅಂದು ಹಝ್ರತ್ ಅಬೂದುಜಾನ(ರ)ರನ್ನು ನೋಡುತ್ತಿದ್ದೆ. ಅಬೂದುಜಾನ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಎಲ್ಲ ಯುದ್ಧಗಳಲ್ಲಿ ಭಾಗಿಯಾಗಿದ್ದ ಶ್ರೇಷ್ಠ ಸಹಾಬಿಯಾಗಿದ್ದರು. ಉಹದ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ) ಒಂದು ಖಡ್ಗವನ್ನು ಕೈಯಲ್ಲಿ ಎತ್ತಿಕೊಂಡು ಹೀಗೆ ಹೇಳಿದರು: ಇದರ ಹಕ್ಕನ್ನು ಯಾರು ಈಡೇರಿಸುವರು. "ನಾನು ಈಡೇರಿಸುತ್ತೇನೆ" ಎಂದು ಅಬೂದುಜಾನ ಹೇಳಿದರು. ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಅವರಿಗೆ ಕೊಟ್ಟರು. ಕೆಲವು ವರದಿಗಳಲ್ಲಿ ಹೀಗೆಯೂ ಬಂದಿದೆ: ಅದರ ಹಕ್ಕೇನು? ಎಂದು ಅಬುದುಜಾನ ಪ್ರಶ್ನಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಮುಸ್ಲಿಮರನ್ನು ಕೊಲ್ಲಬಾರದು ಮತ್ತು ಸತ್ಯನಿಷೇಧಿಗಳಿಗೆ ಹೆದರಿ ಓಡಿ ಹೋಗಬಾರದು. ಹಝ್ರತ್ ಅಬೂದುಜಾನ(ರ) ಮಾಮೂಲಿನಂತೆ ತಲೆಯಲ್ಲಿ ಕೆಂಪು ಬಟ್ಟೆಯನ್ನು ಕಟ್ಟಿದರು ಮತ್ತು ಗರ್ವದ ಶೈಲಿಯಲ್ಲಿ ಜಂಬಪಡುತ್ತಾ ಸೇನಾ ಪಂಕ್ತಿಗಳ ನಡುವೆ ಬಂದು ನಿಂತುಕೊಂಡರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಈ ರೀತಿಯ ನಡತೆ ಅಲ್ಲಾಹನಿಗೆ ಇಷ್ಟವುಳ್ಳದ್ದಲ್ಲವಾದರೂ ಯುದ್ಧದ ಸಂದರ್ಭಗಳಲ್ಲಿ ಹಾಗೆ ನಡೆಯುವುದರಲ್ಲಿ ತಪ್ಪಿಲ್ಲ. ಯುದ್ಧದಲ್ಲಿ ಅವರು ಅತ್ಯಂತ ಧೀರತೆಯಿಂದ ಹೋರಾಡಿದರು, ಅನೇಕ ಸತ್ಯನಿಷೇಧಿಗಳನ್ನು ವಧಿಸಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯಲ್ಲಿ ಬಹಳಷ್ಟು ಗಾಯಾಳುವಾದರು. ಆದರೆ ಯುದ್ಧ ಮೈದಾನದಿಂದ ಹಿಂದಕ್ಕೆ ಸರಿಯಲಿಲ್ಲ.

ಹೇಗಿದ್ದರೂ ಯಮಾಮ ಯುದ್ಧದ ಸಂದರ್ಭದಲ್ಲಿ ಅಬೂದುಜಾನರ(ರ)ರ ಮೇಲೆ ಬನೂ ಹನೀಫರ ಸಂಘ ದಾಳಿ ನಡೆಸಿದಾಗ ಅವರು ತನ್ನ ಮುಂದಿನಿಂದಲೂ ಬಲಗಡೆಯಿಂದಲೂ ಎಡಗಡೆಯಿಂದಲೂ ಖಡ್ಗವನ್ನು ಚಲಾಯಿಸುತ್ತಿದ್ದರು.

ಈಗ ನಾನು ಪಾಕಿಸ್ತಾನಕ್ಕಾಗಿ ದುಆ ಮಾಡಲು ಮನವಿ ಮಾಡುತ್ತೇನೆ. ಸಾಮಾನ್ಯವಾಗಿ ಅಲ್ಲಿ ಸ್ಥಿತಿಗತಿಗಳು ಕೆಟ್ಟುಹೋಗುತ್ತಿವೆ. ಇಂತಹ ಸ್ಥಿತಿಗಳಲ್ಲಿ ಅವರ ಗಮನ ಅಹ್ಮದಿಯರ ಕಡೆಗೆ ಆಗಿರುತ್ತದೆ. ವಿರೋಧಗಳು ವರ್ಧಿಸುತ್ತಿವೆ. ಹಳೆಯ ಖಬರ್‌ಗಳನ್ನು ಅಗೆಯುವುದರಿಂದಲೂ ಅವರು ಬಿಟ್ಟುನಿಲ್ಲುತ್ತಿಲ್ಲ. ಅತ್ಯಂತ ದುಷ್ಟ ಜನರಾಗಿರುವರು. ಅಲ್ಲಾಹನು ಅವರನ್ನು ಹಿಡಿಗೂಡಲಿ. ಅದೇ ರೀತಿಯಲ್ಲಿ ಅಲ್ಜೀರಿಯದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅವರು ಕೂಡ ಈಗ ಕಷ್ಟತೆಗಳಿಗೆ ಸಿಲುಕಿರುವರು. ಅಫ್ಘಾನಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲರ ಮೇಲೆ ತನ್ನ ಕೃಪೆ ವರ್ಷಿಸಲಿ.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ್ ಕೂಡ ನಿರ್ವಹಿಸುವೆನು. ಮೊದಲ ಪ್ರಸ್ತಾಪ ಮುಬಲ್ಲಿಗ್‌ರಾದ ನಸೀಂ ಮಹ್‌ದಿ ಸಾಹಿಬ್‌ರದ್ದಾಗಿದೆ. ಅವರು ಮೌಲಾನಾ ಅಹ್ಮದ್ ಖಾನ್ ನಸೀಮ್‌ರ ಮಗನಾಗಿದ್ದರು. ಕೆಲವು ದಿನಗಳಿಗೆ ಮುಂಚಿತವಾಗಿ 69ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಇವರು ಎರಡು ವಿವಾಹಗಳನ್ನು ಮಾಡಿದ್ದರು. ಮೊದಲ ಪತ್ನಿ ನಿಧನರಾದರು. ಅವರು ಎರಡನೇ ಪತ್ನಿಯನ್ನು ಮತ್ತು ನಾಲ್ವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ರಬ್ವದ ಜಾಮಿಆ ಅಹ್ಮದಿಯದಿಂದ 1976ರಲ್ಲಿ ತೇರ್ಗಡೆಯಾಗಿದ್ದರು. ಅನಂತರ ಇಸ್ಲಾಹೋ ಇರ್ಶಾದ್ ಮಖಾಮಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅನಂತರ 1983ರಲ್ಲಿ ಮುಬಲ್ಲಿಗ್ ಆಗಿ ಅವರನ್ನು ಸ್ವಿಟ್ಝರ್‌ಲೇಂಡಿಗೆ ಕಳುಹಿಸಲಾಗಿತ್ತು. ಅಲ್ಲಿ ಅವರಿಗೆ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. 1984ರಲ್ಲಿ ಅವರನ್ನು ವಕೀಲುತ್ತಬ್‌ಶೀರ್ ನಾಇಬ್ ಆಗಿ ನಿಶ್ಚಯಿಸಲಾಯಿತು. ಕೆಲವು ತಿಂಗಳುಗಳ ಕಾಲ ಖಾಇಮ್ ಮಖಾಂ ವಕೀಲುತ್ತಬ್‌ಶೀರ್ ಆಗಿಯೂ ಕೆಲಸ ಮಾಡಿದರು. 1984, ಡಿಸೆಂಬರ್‌ನಲ್ಲಿ ಲಂಡನಿಗೆ ಬಂದಿದ್ದರು. ಇಲ್ಲಿ ಲಂಡನಿನ ಪ್ರೈವೇಟ್ ಸೆಕ್ರಟರಿಯಾಗಿಯೂ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅನಂತರ 1985ರಲ್ಲಿ ಕೆಲವು ತಿಂಗಳುಗಳ ನಂತರ ಲಂಡನಿನಿಂದಲೇ ಕೆನಡಗೆ ಹೋದರು. 1985ರಿಂದ 2008ರ ತನಕ ಮುಬಲ್ಲಿಗ್ ಆಗಿ ಮತ್ತು ಕೆನಡದ ಮುಬಲ್ಲಿಗ್ ಇಂಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಆ ಕಾಲಾವಧಿಯಲ್ಲಿ ಕೆನಡ ಅಮೀರ್ ಆಗಿಯೂ ಇದ್ದರು. 2009ರಿಂದ 2016ರ ತನಕ ಅಮೇರಿಕದ ಮುಬಲ್ಲಿಗ್ ಇಂಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅನಂತರ ರೋಗಿಯಾದರು. ಅವರನ್ನು ಪುನಃ ಸ್ವಿಟ್ಝರ್‌ಲೇಂಡಿನಲ್ಲಿ ನಿಶ್ಚಯಿಸಲಾಯಿತು. ಹೆಚ್ಚಿನ ಜವಾಬ್ದಾರಿಯ ಕೆಲಸಗಳನ್ನು ಮಾಡಬಾರದು ಎಂದು ಡಾಕ್ಟರ್ ತಿಳಿಸಿದ ಕಾರಣದಿಂದ ಅವರು ರಜೆ ಪಡೆದುಕೊಂಡರು. ಹೇಗಿದ್ದರೂ ಡಾಕ್ಟರ್ ಹಾಗೆ ಹೇಳುತ್ತಿರುವರಾದರೆ ತನ್ನ ಆರೋಗ್ಯದ ಕಡೆಗೆ ಗಮನವಹಿಸಿರಿ, ಗುಣಮುಖವಾದರೆ ಹೇಳಿರಿ. ಅನಂತರ ಪುನಃ ಸೇವೆ ಪಡೆಯಲಾಗುವುದು ಇನ್‌ಶಾ ಅಲ್ಲಾಹ್ ಎಂದು ನಾನು ಅವರಿಗೆ ಪತ್ರ ಬರೆದೆ. ಆದರೆ ಅವರ ಕಾಯಿಲೆ ವರ್ಧಿಸುತ್ತಾ ಹೋಯಿತು.

ನಾನು ಹೇಳಿದಂತೆ, 1985ರಲ್ಲಿ ಅವರು ಕೆನಡಗೆ ಹೋಗಿದ್ದರು. 1986ರಲ್ಲಿ ಬೈತುಲ್ ಇಸ್ಲಾಂ ಮಿಶನ್ ಹೌಸಿಗಾಗಿ 24 ಏಕರೆ ಭೂಮಿಯನ್ನು ಖರೀದಿ ಮಾಡಲಾಯಿತು. ಅನಂತರ ಅಲ್ಲಿ ಜನವಸತಿಯ ಏರ್ಪಾಡು ಮಾಡಲಾಯಿತು. ಅವರ ಕಾಲದಲ್ಲಿ ಅನೇಕ ಅಹ್ಮದಿಯರು ಕೆನಡಗೆ ಬಂದು ನೆಲೆಸಿದರು. ಬಹಳವಾಗಿ ಅಂತಹ ಅಹ್ಮದಿಯರ ಸಹಾಯವನ್ನು ಅವರು ಮಾಡಿದರು. ಅನೇಕ ಇತರ ಜನರು ಅವರಿಗೆ ಇದಕ್ಕಾಗಿ ಕೃತಜ್ಞತೆ ಅರ್ಪಿಸುತ್ತಾರೆ. ಅವರು ಚಂದಾ ಮತ್ತು ತಜ್‌ನೀದಿನ ಸಿಸ್ಟಮನ್ನು ಕಂಪ್ಯೂಟರೈಸ್ಡ್ ಮಾಡಿದರು. ಟೊರೊಂಟೋ ಮತ್ತು ಕೇಲ್ಗರಿಯಲ್ಲಿ ಎರಡು ದೊಡ್ಡ ಮಸೀದಿಯ ನಿರ್ಮಾಣವನ್ನು ಅವರು ಮಾಡಿಸಿದರು. ಇತರ ಜಮಾಅತುಗಳಲ್ಲಿ ಸೆಂಟರ್‌ಗಳನ್ನು ಕೂಡ ಸ್ಥಾಪಿಸಿದರು. ಬಹುಶಃ ವೇಂಕೋವರಿನ ಮಸೀದಿ ಕೂಡ ಅವರ ಕಾಲಾವಧಿಯಲ್ಲಿ ನಿರ್ಮಾಣವಾಗಿತ್ತು. ಹೇಗಿದ್ದರೂ ಈ ಎರಡು ಮಸೀದಿಗಳ ನಿರ್ಮಾಣವಾಯಿತು. 2003ರಲ್ಲಿ ಅವರ ಕಾಲಾವಧಿಯಲ್ಲೇ ಅಲ್ಲಾಹನ ಅನುಗ್ರಹದಿಂದ ಜಾಮಿಆ ಅಹ್ಮದಿಯಾ ಕೆನಡದ ಉದ್ಘಾಟನೆಯಾಯಿತು. ಎಂ.ಟಿ.ಎ. ನಾರ್ತ್ ಅಮೇರಿಕದ ಸ್ಟೇಶನನ್ನು ಸ್ಥಾಪಿಸುವುದರಲ್ಲೂ ಅವರು ಬಹಳ ಕೆಲಸ ಮಾಡಿದ್ದರು. ಅಲ್ಲಾಹನು ಅವರ ಈ ಎಲ್ಲ ಕೆಲಸಗಳನ್ನು ಸ್ವೀಕಾರ ಮಾಡಲಿ.

ಅವರ ಪತ್ನಿಯಾದ ಅಮತುನ್ನಸೀರ್ ಸಾಹಿಬ ಬರೆಯುತ್ತಾರೆ: ನನ್ನ ಪತಿಯಾದ ನಸೀಂ ಮಹ್‌ದಿ ಸಾಹಿಬ್‌ರು ನನ್ನ ವೈವಾಹಿಕ ಜೀವಿತದ 26

ವರ್ಷಗಳಲ್ಲಿ ನನ್ನ ಪ್ರತಿ ದುಃಖ ಮತ್ತು ನೋವಿನಲ್ಲಿ ನನ್ನ ಜೊತೆಗಾರರಾಗಿದ್ದರು. ಬಹಳ ಪ್ರೀತಿಸುವ, ಗೌರವಿಸುವ ಪತಿಯಾಗಿದ್ದರು. ಮಕ್ಕಳಿಗೆ ವಾತ್ಸಲ್ಯಭರಿತ ತಂದೆಯಾಗಿದ್ದರು, ತ್ಯಾಗಶೀಲರಾದ ಸಹೋದರರಾಗಿದ್ದರು. ಮನುಷ್ಯರೊಂದಿಗೆ ಸಹಾನುಭೂತಿ ಹೊಂದಿದ್ದ ಮತ್ತು ಖಿಲಾಫತಿಗೆ ವಿಧೇಯರಾಗಿದ್ದ ವ್ಯಕ್ತಿಯಾಗಿದ್ದರು. ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಇರಿಸುವವರಾಗಿದ್ದರು. ಜನರ ಅಪರಿಮಿತವಾದ ಸೇವೆ ಮಾಡುವವರಾಗಿದ್ದರು. ಇತರರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಜಮಾಅತಿನ ವಿರುದ್ಧ ಯಾವುದೇ ಮಾತನ್ನು ಆಲಿಸಲು ಇಷ್ಟಪಡುತ್ತಿರಲಿಲ್ಲ. ಯಾರಿಗೂ ಅವರ ಮುಂದೆ ಹಾಗೆ ಹೇಳಲು ಧೈರ್ಯವಿರಲಿಲ್ಲ. ಬಹಳ ಹೆಚ್ಚಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರು. ದುರೂದ್ ಶರೀಫ್ ಹೇಳುವ ಕಡೆಗೆ ಬಹಳ ಗಮನವಿತ್ತು. ನಾವು ಉಮ್ರಾಗೆ ಹೋದಾಗ ನೀವು ಏನು ದುಆ ಮಾಡಿದ್ದೀರಿ ಎಂದು ಅವರೊಡನೆ ಕೇಳಿದೆ. ನಾನಂತು ಕೇವಲ ದುರೂದ್ ಶರೀಫ್ ಹೇಳುತ್ತಿದ್ದೆ ಎಂದು ಅವರು ಉತ್ತರಿಸಿದರು.

ಅವರ ಮಗಳಾದ ಸಾದಿಯ ಮಹ್‌ದಿ ಹೇಳುತ್ತಾರೆ: ನನ್ನ ತಂದೆ ಬಹಳ ದುಆ ಮಾಡುವ ವ್ಯಕ್ತಿಯಾಗಿದ್ದರು. ನಾನು ಅವರೊಡನೆ ದುಆ ಮಾಡಲು ಹೇಳಿದರೆ, ದುರೂದ್ ಶರೀಫ್ ಓದಲು ಹೇಳುತ್ತಿದ್ದರು. ಪ್ರತಿ ಮಾತಿಗೂ ನೀವು ಹೀಗೆ ಹೇಳುತ್ತೀರಲ್ಲವೇ ಎಂದು ನಾನೊಮ್ಮೆ ಅವರೊಡನೆ ಕೇಳಿದೆ. ಆಗ ಅವರು ಹೀಗೆ ಹೇಳಿದರು: ದುರೂದ್ ಶರೀಫ್ ಹೇಳಬೇಕು. ಅತ್ಯಂತ ಹಿರಿಯ ದುಆ ದುರೂದ್ ಶರೀಫ್ ಆಗಿದೆ. ಇದು ಸ್ವೀಕಾರವಾದರೆ, ಎಲ್ಲ ದುಆಗಳು ಸ್ವೀಕಾರವಾಗುವುವು.

ಅಸ್ಮಾ ಸಾಹಿಬ ಹೇಳುತ್ತಾರೆ: ಮಹ್‌ದಿ ಸಾಹಿಬ್ ನನ್ನ ಸಹೋದರಿಯ ಪತಿಯಾಗಿದ್ದರು. 22 ವರ್ಷಗಳ ಕಾಲ ಬಹಳ ಸಮೀಪದಿಂದ ನಾನು ಅವರನ್ನು ಕಂಡಿದ್ದೇನೆ. ಅತ್ಯಂತ ವಾತ್ಸಲ್ಯಹೊಂದಿದ್ದ, ಬಹಳ ಕಾಳಜಿವಹಿಸುತ್ತಿದ್ದ, ಬಹಳವಾಗಿ ಪ್ರೀತಿಸುತ್ತಿದ್ದ ವ್ಯಕ್ತಿಯಾಗಿದ್ದರು. ಖಲೀಫತುಲ್ ಮಸೀಹ್‌ರೊಂದಿಗೆ ಅಪರಿಮಿತವಾದ ನಂಬಿಕೆ ಹೊಂದಿದ್ದ ವ್ಯಕ್ತಿಯಾಗಿದ್ದರು.

ಅವರ ಸಹೋದರಿ ಹೇಳುತ್ತಾರೆ: ಅವರು ಸ್ವೀಟ್‌ಝರ್‌ಲೇಂಡಿನಲ್ಲಿ ಮುಬಲ್ಲಿಗ್ ಆಗಿದ್ದಾಗ ಒಬ್ಬಳು ಸ್ವೀಸ್ ಹುಡುಗಿ ಅಹ್ಮದಿಯಾಗಿ ಜಲ್ಸ ಸಾಲಾನ ರಬ್ವಗೆ ಬಂದಳು. ರಬ್ವದಲ್ಲಿರುವ ನಮ್ಮ ಮನೆಗೆ ಬಂದಳು. ಸ್ವಲ್ಪ ಕಾಲದಲ್ಲೇ ಇಷ್ಟೆಲ್ಲ ಭಾಷೆಗಳಲ್ಲಿ ನುರಿತರಾದ, ಯಾವುದೇ ಹಿಂಜರಿಕೆ ಇಲ್ಲದೇ ತಬ್ಲೀಗ್ ಮಾಡುವ ಮತ್ತು ಅಡೆತಡೆಯಿಲ್ಲದೇ ಪ್ರತಿಯೊಂದು ವಿಷಯದಲ್ಲಿ ಮಾತನಾಡುವ ಇಷ್ಟು ಬುದ್ಧಿವಂತ ಪುತ್ರನ ತಾಯಿಯನ್ನು ನೋಡಲು ನಾನು ಬಯಸುತ್ತೇನೆ ಎಂದು ಅವಳು ತನ್ನ ಬಯಕೆಯನ್ನು ಹೇಳಿಕೊಂಡಳು.

ಅವರ ಸೊಸೆ ಹೇಳುತ್ತಾಳೆ: ನಮ್ಮೊಡನೆ ಯಾವಾಗಲೂ ದುರೂದ್ ಶರೀಫಿನ ಪ್ರಾಮುಖ್ಯತೆ ಮತ್ತು ಅದರ ನೆರವಿನಿಂದ ದುಆಗಳ ಸ್ವೀಕಾರದ ಪ್ರಾಧಾನ್ಯತೆಯ ಬಗ್ಗೆ ಅವರು ಹೇಳುತ್ತಿದ್ದರು. ಅವರೊಮ್ಮೆ ಹೀಗೆ ಹೇಳಿದ್ದರು. ಅವರು ಒಂದು ಬಾರಿ ಏರ್‌ಪೋರ್ಟಿನ ಲೈನಿನಲ್ಲಿ ನಿಂತರು. ಅವರ ಪಾಸ್‌ಪೋರ್ಟಿನ ಕಾಲಾವಧಿ ಮುಕ್ತಾಯಗೊಂಡಿದೆ ಎಂದು ಅನಿಸುತ್ತಿತ್ತು. ಅದು ಗೊತ್ತಾದಾಗ ಬೇಗನೇ ದುರೂದ್ ಶರೀಫ್ ಓದಲು ಶುರುಮಾಡಿದರು. ಲೈನಿನಲ್ಲೇ ನಿಂತರು. ಕೌಂಟರಿನಲ್ಲಿ ಇದ್ದ ವ್ಯಕ್ತಿ ಪಾಸ್‌ಪೋರ್ಟನ್ನು ನೋಡದೇ ಮುಂದೆ ಹೋಗಲು ಹೇಳಿದರು.

ಅವರ ಅಳಿಯ ಬರೆಯುತ್ತಾರೆ: ನನ್ನ ವಿವಾಹವಾದ ಅಂದಿನಿಂದ ಬಹಳ ಪ್ರೀತಿ ಮತ್ತು ವಾತ್ಸಲ್ಯದಿಂದ ಅವರು ನನ್ನೊಡನೆ ವರ್ತಿಸುತ್ತಿದ್ದರು. ಸ್ವತಃ ಚಹಾ ತಯಾರಿಸಿ ಕೊಡುತ್ತಿದ್ದರು. ಫಜ್ರ್ ನಮಾಝಿನ ನಂತರ ನನ್ನ ಜೊತೆಗೆ ಕುಳಿತುಕೊಳ್ಳುತ್ತಿದ್ದರು. ಪವಿತ್ರ ಖುರ್‌ಆನಿನ ಯಾವುದಾದರೂ ವಚನ ಅಥವಾ ಘಟನೆಯನ್ನು ಹೇಳಿಕೊಟ್ಟು ಅದರ ವ್ಯಾಖ್ಯಾನವನ್ನು ಮುಂದಿರಿಸುತ್ತಿದ್ದರು. ಹೀಗೆ ಬಹಳ ಸೂಕ್ಷ್ಮವಾದ ರೀತಿಯಲ್ಲಿ ನಮ್ಮ ತರಬೇತಿ ಮಾಡುತ್ತಿದ್ದರು.

ಅವರ ಮಗಳಾದ ನವಾಲ್ ಮಹ್‌ದಿ ಹೇಳುತ್ತಾಳೆ: ಅವರಿಗೆ ಪವಿತ್ರ ಖುರ್‌ಆನಿನ ಕಡೆಗೆ ಬಹಳ ಗಮನ ಮತ್ತು ಆಸಕ್ತಿಯಿತ್ತು. ಪವಿತ್ರ ಖುರ್‌ಆನಿನ ಸತ್ಯಪ್ರೇಮಿಯಾಗಿದ್ದರು. ಬಹಳ ಗಮನವಿಟ್ಟು ಪವಿತ್ರ ಖುರ್‌ಆನ್ ಓದಲು, ಅದರ ಅರ್ಥ ಮತ್ತು ವ್ಯಾಖ್ಯಾನಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಬೇಕೆಂದು ಹೇಳುತ್ತಿದ್ದರು. ಹಾಗಾದರೆ ಅಲ್ಲಾಹನ ಸಾಮರ್ಥ್ಯದ ದೃಶ್ಯಗಳನ್ನು ನೋಡುವಿರಿ ಮತ್ತು ಪವಿತ್ರ ಖುರ್‌ಆನ್ ಓದುದರ ಆನಂದ ಕೂಡ ಲಭಿಸುವುದು ಎಂದು ಹೇಳುತ್ತಿದ್ದರು. ಬಹಳ ನಿಯತವಾಗಿ ತಹಜ್ಜುದ್ ನಮಾಝ್ ನಿರ್ವಹಿಸುವವರಾಗಿದ್ದರು. ನಮಾಝಿನಲ್ಲಿ ನಿಲ್ಲುವುದು, ಬಾಗುವುದು ಮತ್ತು ಸಾಷ್ಟಾಂಗ ಮಾಡುವುದು ಬಹಳ ದೀರ್ಘವಾಗುತ್ತಿತ್ತು. ಅವರ ನಮಾಝಿನಲ್ಲಿ ಬಹಳ ವಿನಮ್ರತೆ ಮತ್ತು ತನ್ಮಯತೆ ಇತ್ತು. ಅನುಗ್ರಹೀತ ರಮಝಾನ್ ಮಾಸದಲ್ಲಿ ಪವಿತ್ರ ಖುರ್‌ಆನಿನ ದರ್ಸ್ ನೀಡುವ ಏರ್ಪಾಡು ಮಾಡುತ್ತಿದ್ದರು. ಬಹಳ ಪರಿಶ್ರಮದಿಂದ ದರ್ಸ್ ತಯಾರು ಮಾಡುತ್ತಿದ್ದರು. ಇದರ ಬಗ್ಗೆ ಇತರ ಜನರು ಕೂಡ ಬರೆದಿರುವರು. ಪವಿತ್ರ ಖುರ್‌ಆನಿನ ಕಠಿನ ಶಬ್ಧಗಳ ಅರ್ಥ ಮತ್ತು ತಾತ್ಪರ್ಯವನ್ನು ಹೇಳಿಕೊಡುತ್ತಿದ್ದರು. ಜನರಿಗೆ ಸುಲಭವಾಗಿ ತಿಳಿಯುವಂತಾಗಲು ಅದಕ್ಕೆ ಸಮಾನಾರ್ಥವಾದ ಪದಗಳನ್ನು ಕೂಡ ಹೇಳಿಕೊಡುತ್ತಿದ್ದರು.

ಕೆನಡದ ಅಮೀರ್ ಆಗಿರುವ ಲಾಲ್ ಖಾನ್ ಸಾಹಿಬ್‌ರು ಹೇಳುತ್ತಾರೆ: ಮಾಜಿ ಅಮೀರ್ ಮತ್ತು ಮಿಶನರಿ ಇಂಚಾರ್ಜ್ ಆಗಿದ್ದ ಮಹ್‌ದಿ ಸಾಹಿಬ್‌ರ ಜೊತೆಗೆ ನಾನು 1987ರಿಂದ ಬಹಳ ದೀರ್ಘ ಕಾಲದ ವರೆಗೆ ಕೆಲಸ ಮಾಡಿದ್ದೆ. ಅಲ್ಲಾಹನು ಅವರಿಗೆ ಅನೇಕ ಗುಣವೈಶಿಷ್ಟ್ಯಗಳನ್ನು ಪ್ರದಾನ ಮಾಡಿದ್ದನು. ಆ ವೈಶಿಷ್ಟ್ಯಗಳನ್ನು ಅವರು ಜಮಾಅತಿನ ಸೇವೆಗಾಗಿ ಉಪಯೋಗಿಸಿದರು. ಸ್ನೇಹಿತರನ್ನಾಗಿ ಮಾಡುವ, ಅದನ್ನು ನಿಭಾಯಿಸುವ ಮತ್ತು ಆ ಸಂಪರ್ಕಗಳನ್ನು ಜಮಾಅತಿನ ಪ್ರಯೋಜನಕ್ಕಾಗಿ ಉಪಯೋಗಿಸಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಿದ್ದನು. ಕೆನಡ ಸೊಸೈಟಿಯ ಅನೇಕ ವಿಭಾಗಗಳೊಂದಿಗೆ ಅವರು ವೈಯಕ್ತಿಕ ಸಂಬಂಧವನ್ನು ಇರಿಸಿದ್ದರು. ಅವರಿಗೆ ಜಮಾಅತಿನ ಪರಿಚಯ ಮಾಡಿಸಿಕೊಟ್ಟರು. ಅವರಿಗೆ ಈ ನೈಪುಣ್ಯ ಬಹಳವಿತ್ತು. ಮಾಶಾ ಅಲ್ಲಾಹ್. ಅವರು ಇರಿಸಿದ ಸಂಬಂಧಗಳೆಲ್ಲವೂ ಬಹಳ ಉತ್ತಮ ಮತ್ತು ಆಳವುಳ್ಳದ್ದಾಗಿದ್ದುವು. ಅದೇ ರೀತಿಯಲ್ಲಿ ಅವರ ಮರಣದಲ್ಲಿ ಅನ್ಯರು ಬಹಳ ಶ್ರದ್ಧಾಂಜಲಿ ಅರ್ಪಿಸಿದರು. ಪಾಕಿಸ್ತಾನ ಮತ್ತು ಇತರ ರಾಜ್ಯಗಳಿಂದ ಬರುವ ಜನರಿಗೆ ಮತ್ತು ಕುಟುಂಬಗಳಿಗೆ ಮಾರ್ಗದರ್ಶನ ಹಾಗೂ ಸಹಾಯ ಮಾಡುವ ಜವಾಬ್ದಾರಿಯ ಸೌಭಾಗ್ಯ ಅಲ್ಲಾಹನು ಅವರಿಗೆ ದಯಪಾಲಿಸಿದ್ದನು. ಮಜ್ಲಿಸೇ ಆಮಿಲದ ಸದಸ್ಯರೊಂದಿಗೆ ಅವರ ಸಂಬಂಧ ಸ್ನೇಹಿತರಂತಾಗಿತ್ತು. ಅವರು ಅಮೀರ್ ಆಗಿದ್ದಾಗ ನನಗೆ ಸುಮಾರು 20 ವರ್ಷಗಳ ಕಾಲ ಅವರ ಜೊತೆಗೆ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ಅವರು ಅಮೀರ್ ಆಗಿರುವ ಕಾರಣದಿಂದ ನಾನು ಅವರ ಅಧೀನದಲ್ಲಿದ್ದೇನೆ ಎಂದು ಅನಿಸುವಂತೆ ಎಂದಿಗೂ ಅವರು ಮಾಡಿರಲಿಲ್ಲ. ಬದಲಾಗಿ ಅವರ ಸಂಬಂಧ ನನ್ನ ಜೊತೆಗೆ ಸ್ನೇಹಿತನಂತಾಗಿತ್ತು.

ಡಾಕ್ಟರ್ ಇಸ್ಫಂದರ್ ದಾವೂದ್ ಸಾಹಿಬ್ ಹೇಳುತ್ತಾರೆ: ನಸೀಂ ಮಹ್‌ದಿ ಸಾಹಿಬ್‌ರಿಗೆ ಆಡರ್ ಆಫ್ ಒಂಟಾರಿಯೋದ ಪದಕ 2009ರಲ್ಲಿ ಲಭಿಸಿತ್ತು. ಇದು ಒಬ್ಬ ಪ್ರಜೆಗೆ ಆ ರಾಜ್ಯದಲ್ಲಿ ಕೊಡಲಾಗುವ ಅತ್ಯಂತ ಶ್ರೇಷ್ಠ ಪದವಿಯಾಗಿದೆ. ಈ ಅವಾರ್ಡನ್ನು ಯಾವುದಾದರೂ ಫೀಲ್ಡಿನಲ್ಲಿ ಯಶಸ್ಸಿನ ಮತ್ತು ಉನ್ನತ ಸೇವೆಗಳನ್ನು ಮಾಡಲಾಗುವಾಗ ನೀಡಲಾಗುತ್ತದೆ. ಅವರು ಅಮೇರಿಕದಲ್ಲಿ ನೇಮಿತರಾದಾಗ ಒಂದು ಬಾರಿ ಜಲ್ಸ ಸಾಲಾನದಲ್ಲಿ ನನ್ನ ಭೇಟಿ ಅವರ ಜೊತೆಗೆ ಆಯಿತು. ಆಗ ಅವರು ನನಗೆ ಹೀಗೆ ಉಪದೇಶ ನೀಡಿದರು: ನೀವು ಈಗ ಇರುವ ಸ್ಥಾನದಲ್ಲಿ ಇದ್ದುಕೊಂಡು ನಿಮಗೆ ಆಗುವಷ್ಟು ಜನರ ಸೇವೆಯನ್ನು ಮಾಡಿರಿ. ನಿಮ್ಮ ಬಳಿಗೆ ಜಮಾಅತಿನ ಯಾವನಾದರೂ ಬಂದರೆ, ಅವರ ಸಹಾಯ ಮಾಡಿರಿ. ಎಂದಿಗೂ ಅವರನ್ನು ದೂರಮಾಡಬೇಡಿರಿ. ನಿಮಗೆ ಮಾಡಲು ಸಾಧ್ಯವಾದುದನ್ನು ಮಾಡಿಕೊಡಿರಿ. ಕೆಲವರು ಸರಿಯಾಗಿ ತಮ್ಮ ಸ್ಥಿತಿಗತಿಗಳ ಬಗ್ಗೆ ಹೇಳುವುದಿಲ್ಲ. ಅವರ ಬಗ್ಗೆ ರಹಸ್ಯವಾಗಿ ಗೊತ್ತುಮಾಡಿ ಅವರ ಸಹಾಯವನ್ನು ಮಾಡಬೇಕು. ಅವರು ನಿರ್ಗತಿಕರ ಸಹಾಯವನ್ನು ಮಾಡುತ್ತಿರುವುದಾಗಿ ನಾನು ಯಾವಾಗಲೂ ನೋಡಿದ್ದೇನೆ. ನಿರ್ಗತಿಕರು ಯಾವುದೇ ರೀತಿಯಲ್ಲಿ ಲಜ್ಜಿತರಾಗದಂತೆ ಅವರ ಸಹಾಯವನ್ನು ರಹಸ್ಯವಾಗಿ ಮಾಡುತ್ತಿದ್ದರು.

ಮುಬಲ್ಲಿಗ್‌ರಾದ ಶುಕೂರ್ ಸಾಹಿಬ್ ಹೇಳುತ್ತಾರೆ: ಅವರ ಅನೇಕ ಉಪದೇಶಗಳಲ್ಲಿ ನನಗೆ ನೀಡಿದ ಒಂದು ಉಪದೇಶವೇನೆಂದರೆ, ನಾನು ಜಾಮಿಅ ಅಹ್ಮದಿಯಾದ ಆರಂಭ ಕಾಲದಲ್ಲಿ ದರ್ಜಾ ಸಾನಿಯ ಕ್ಲಾಸಿನಲ್ಲಿ ಕಲಿಯುತ್ತಿದ್ದಾಗ, ಒಂದು ಬಾರಿ ಅಸರ್ ನಮಾಝಿಗೆ ಮಸೀದಿಗೆ ಹೋಗುವಾಗ ಚಪ್ಪಲ್ ಧರಿಸಿ ಹೋದೆನು. ಆಗ ಅವರು ಹೇಳಿದರು: ವಖ್ಫೇ ಝಿಂದಗಿಯಾದ ವ್ಯಕ್ತಿ ಎಲ್ಲ ಸ್ಥಿತಿಗಳಿಗಾಗಿಯೂ ತಯಾರಾಗಿಕೊಂಡು ಮನೆಯಿಂದ ಹೊರಡಬೇಕು. ಯಾವುದಾದರೂ ಆದೇಶ ಲಭಿಸಿದರೆ, ಅಲ್ಲಿಂದಲೇ ತಯಾರಾಗಿಕೊಂಡು ಹೊರಡುವಂತಾಗಿರಬೇಕು. ಮನೆಗೆ ಹೋಗಿ ತಯಾರಾಗಿ ಬರುತ್ತೇನೆ ಎಂದು ಹೇಳುವಂತಾಗಿರಬಾರದು. ಮಾನಸಿಕವಾಗಿ ತಯಾರಾಗಿರುವಂತೆಯೇ ದೈಹಿಕವಾಗಿಯೂ ತಯಾರಾಗಿರಬೇಕು.

ಅದೇ ರೀತಿಯಲ್ಲಿ ಅಮೇರಿಕದ ಮುರಬ್ಬಿಯಾದ ಫರಾಸತ್ ಖಮರ್ ಸಾಹಿಬ್ ಹೇಳುತ್ತಾರೆ: ನನ್ನ ಜಾಮಿಅದ ಇಂಟರ್‌ವ್ಯೂ ನಡೆದಾಗ ಮಹ್‌ದಿ ಸಾಹಿಬ್‌ರು ಒಂದು ಪ್ರಶ್ನೆಯನ್ನು ಕೇಳಿದರು. ಮಿಶನರಿಯಾಗಿ ನಿನ್ನನ್ನು ಆಫ್ರಿಕಾಗೆ ಕಳುಹಿಸಿದರೆ, ಅಲ್ಲಿ ಪ್ರಾದೇಶಿಕ ಜನರಿಂದ ವಿರೋಧ ಉಂಟಾದರೆ, ನೀನು ಮೊದಲು ಯಾರನ್ನು ಸಂಪರ್ಕಿಸುತ್ತೀಯಾ. ತಾಯಿಯನ್ನು ಅಥವಾ ಖಲೀಫತುಲ್ ಮಸೀಹ್‌ರನ್ನು. ಯೋಚಿಸಿದ ನಂತರ ಖಲೀಫತುಲ್ ಮಸೀಹ್ ಎಂದು ನಾನು ಹೇಳಿದೆ. ಆಗ ಮಹ್‌ದಿ ಸಾಹಿಬ್‌ರು ಹೇಳಿದರು: ಇದೇ ಆಧಾರದಲ್ಲಿ ನಿನ್ನನ್ನು ಜಾಮಿಅದಲ್ಲಿ ದಾಖಲು ಮಾಡಲು ನಾನು ಶಿಫಾರಸ್ಸು ಮಾಡುತ್ತೇನೆ. ಇದೇ ಸರಿಯಾದ ಉತ್ತರವಾಗಿದೆ.

ಸೆಕ್ರಟರಿ ಮಿಶನ್ ಹೌಸ್ ಆಗಿರುವ ಕರ್ನಲ್ ದೀದಾರ್ ಸಾಹಿಬ್ ಹೇಳುತ್ತಾರೆ: ಮಹ್‌ದಿ ಸಾಹಿಬ್‌ರಲ್ಲಿ ಖಿಲಾಫತಿನ ಅನುಸರಣೆಯ ಭಾವನೆ ಬಹಳವಿತ್ತು. ಅವರ ಕೆಲಸಗಳಲ್ಲಿ ಒಂದು, ಪೀಸ್ ವಿಲೇಜಿನ ಸ್ಥಾಪನೆಯಾಗಿದೆ. ಕೆನಡದ ಜಲ್ಸ ಸಾಲಾನ ಮಸ್ಜಿದ್ ಬೈತುಲ್ ಇಸ್ಲಾಮಿನ ಜೊತೆಗೆ ಇರುವ ಮೈದಾನದಲ್ಲಿ ಆಗುತ್ತಿತ್ತು. ಜಲ್ಸದ ಗದ್ದಲದಿಂದ ನನಗೆ ಹೆದರಿಕೆ ಆಗುತ್ತದೆ

ಮತ್ತು ಲಂಗರಿನ ವಾಸನೆಯನ್ನು ನನಗೆ ಸಹಿಸಲು ಸಾಧ್ಯವಾಗುತ್ತಿಲ್ಲವೆಂದು ಆಗ ಅದರ ಜೊತೆಗೆ ಇದ್ದ ಕೃಷಿಭೂಮಿಯ ಯಜಮಾನಿ ಮಹಿಳೆ ದೂರುತ್ತಿದ್ದಳು. ಹೇಗಿದ್ದರೂ ಕೆಲವು ಕಾಲದ ನಂತರ ಸರ್ಕಾರ ಆ ಕೃಷಿಭೂಮಿಯ ಜೋನಿಂಗ್ ಮಾಡಿತು ಮತ್ತು ಅದನ್ನು ವಸತಿ ಸ್ಥಳವನ್ನಾಗಿ ಬದಲಾಯಿಸಿತು. ಈ ಯಜಮಾನಿ ಮಹಿಳೆ ದೂರುತ್ತಿದ್ದಳು, ಈಗಂತು ಅನೇಕ ಮಾಲಿಕರು ಬರುವರು ಎಂದು ಯೋಚಿಸಿ ನಸೀಂ ಮಹ್‌ದಿ ಸಾಹಿಬ್‌ರು ಚಿಂತಿತರಾದರು. ಆಗ ಈದಿನ ಸಂದರ್ಭದಲ್ಲಿ ಅವರೊಂದು ಸ್ಕೀಂ ಜಮಾಅತಿನ ಮುಂದಿಟ್ಟರು. ಯಾಕೆ ಇಲ್ಲಿ ಅಹ್ಮದಿಯರೆಲ್ಲರು ಮನೆಗಳನ್ನು ಮಾಡಬಾರದು ಮತ್ತು ಅಹ್ಮದಿಯರು ಈ ಜಾಗವನ್ನು ಏಕೆ ಖರೀದಿ ಮಾಡಬಾರದು? ಜಮಾಅತಿನ ಸಹೋದರರು ಇದಕ್ಕೆ ತಯಾರಾದರು ಮತ್ತು ಅಲ್ಲಾಹನ ಅನುಗ್ರಹದಿಂದ ಪೀಸ್ ವಿಲೇಜಿನ ಸ್ಥಾಪನೆಯಾಯಿತು.

ಮುಬಲ್ಲಿಗ್ ಆದ ಜೀಶಾನ್ ಗೋರಾಯಿಯ ಸಾಹಿಬ್ ಹೇಳುತ್ತಾರೆ: ಮಹ್‌ದಿ ಸಾಹಿಬ್‌ರಿಂದ ಅನೇಕ ಯುವಕರು ತರಬೇತಿ ಪಡೆದಿದ್ದರು. ಇಂದು ಈ ತರಬೇತಿಯ ಕಾರಣದಿಂದ ಲೋಕದ ಅನೇಕ ದೇಶಗಳಲ್ಲಿ ಯುವಕರು ಜಮಾಅತಿನ ಸೇವೆಯ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ. ಅವರ ತರಬೇತಿಯ ಕಾರಣದಿಂದ ನಾವು ಖಿಲಾಫತನ್ನು ಪ್ರೀತಿಸಲು ಕಲಿತೆವು, ಅನುಸರಣೆಯ ಚೈತನ್ಯವನ್ನು ನಮ್ಮೊಳಗೆ ಬೆಳೆಯುವುದಾಗಿ ನೋಡಿದೆವು.

ಅದೇ ರೀತಿಯಲ್ಲಿ ಕೆನಡದ ಸೆಕ್ರಟರಿ ಉಮೂರೆ ಖಾರಿಜ ಆಗಿರುವ ಆಸಿಫ್ ಖಾನ್ ಸಾಹಿಬ್ ಹೇಳುತ್ತಾರೆ: ನಾನು 13ನೇ ವಯಸ್ಸಿನಲ್ಲಿ ವಾನಿಗೆ ಬಂದಿದ್ದೆ. ಆಗ ಮಿಶನ್ ಹೌಸಿನ ಆಸುಪಾಸಿನಲ್ಲಿ ಹತ್ತಿಪ್ಪತ್ತು ಅಹ್ಮದಿಯರು ಇದ್ದರು. ನನಗೆ ಆಗ ಜಮಾಅತಿನ ಅರಿವು ಅಷ್ಟು ಇರಲಿಲ್ಲ. ಮಹ್‌ದಿ ಸಾಹಿಬ್‌ರು ನನ್ನೊಡನೆ ಮಗನಂತೆ ವರ್ತಿಸಿದರು. ನನ್ನ ಗುರುವಾದರು. ಬಾಸ್ಕಟ್ ಬಾಲ್ ಆಡುತ್ತಿದ್ದರು ಮತ್ತು ನಮಗೆ ಜಮಾಅತಿನ ಶಿಕ್ಷಣ ನೀಡುತ್ತಿದ್ದರು. ನಾನು ದೊಡ್ಡವನಾದಾಗ ನನಗೆ ಅನೇಕ ರಾಜಕೀಯ ನಾಯಕರೊಂದಿಗೆ ಸಂಪರ್ಕ ಮಾಡುವ ಜಮಾಅತಿನ ಕೆಲಸವನ್ನು ಕೊಡುತ್ತಿದ್ದರು. ಅದೇ ರೀತಿಯಲ್ಲಿ ಈಗಲೂ ಅಲ್ಲಾಹನ ಅನುಗ್ರಹದಿಂಧ ಕೆಲಸ ಮಾಡುತ್ತಿದ್ದೇವೆ. ಎಲ್ಲ ತರಬೇತಿಯನ್ನು ನಾನು ಅವರಿಂದ ಗಳಿಸಿದೆ.

ಅಮೇರಿಕದ ಅಮೀರ್ ಆಗಿರುವ ಮಿರ್ಝಾ ಮಗ್‌ಫೂರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: 2016ರಲ್ಲಿ ಮಿಶನರಿ ಇಂಚಾರ್ಜ್ ಆಗಿ ಮತ್ತು ಅಮೇರಿಕದ ನಾಇಬ್ ಅಮೀರ್ ಆಗಿ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಅಮೇರಿಕದಲ್ಲಿ ಅವರು ಬಹಳ ಉತ್ತಮ ಕೆಲಸ ಮಾಡಿದ್ದರು. ಪರ್ಯಟನೆಗಳನ್ನು ಮಾಡಿದರು. ಅನೇಕ ರಾಜ್ಯಗಳಿಗೆ ಹೋದರು. ಪರ್ಯಟನೆಯಲ್ಲಿ ತಬ್ಲೀಗಿನ ಕೆಲಸವನ್ನು ಪ್ರಭಾವಶಾಲಿಯಾಗಿ ಆರಂಭಿಸಲು ಪ್ರಯತ್ನಿಸಿದರು. ಈ ಕಾಲಾವಧಿಯಲ್ಲಿ ಅವರಿಗೆ ಮೀಡಿಯ ಮತ್ತು ಅನೇಕ ಕ್ಯಾಂಪಸಿನ ಮೂಲಕ ಇಸ್ಲಾಂ ಅಹ್ಮದಿಯ್ಯತಿನ ಸಂದೇಶವನ್ನು ಅಮೇರಿಕದಲ್ಲಿ ಹರಡಲು ಸೌಭಾಗ್ಯ ಲಭಿಸುತ್ತಿತ್ತು. ಅನಂತರ ಮೆಕ್ಸಿಕೊದಲ್ಲಿ ಜಮಾಅತಿನ ಸ್ಥಾಪನೆಯ ಬಗ್ಗೆ ಕೇಂದ್ರದ ನಿರ್ದೇಶನ ಪ್ರಕಾರ ಅಲ್ಲಿ ಮಿಶನ್ ಹೌಸ್ ಸ್ಥಾಪಿಸಲು ಅವರಿಗೆ ಸೌಭಾಗ್ಯ ಲಭಿಸಿತು.

ಅಮೇರಿಕದ ಸೆಕ್ರಟರಿ ತಬ್ಲೀಗ್ ವಸೀಂ ಸಯ್ಯದ್ ಸಾಹಿಬ್ ಹೇಳುತ್ತಾರೆ: ಪ್ರತಿಯೊಬ್ಬರೊಂದಿಗೂ ಪ್ರೀತಿ ಮತ್ತು ಪ್ರೇಮದ ಸಂಬಂಧವನ್ನು ಇರಿಸುವವರಾಗಿದ್ದರು. ಅದರಲ್ಲಿ ಮುಂದಾಗುತ್ತಿದ್ದರು. ಇಸ್ಲಾಮಿನ ಸೇವೆಯಲ್ಲಿ ಪ್ರತಿಯೊಬ್ಬರನ್ನು ಜೊತೆಗೆ ಸೇರಿಸುವ ಮಾರ್ಗವನ್ನು ಅರಿತಿದ್ದರು. ಅಮೇರಿಕದಲ್ಲಿ ಬಂದ ನಂತರ ದಿವಂಗತರು ಪ್ರತಿ ವರ್ಷ ಸೆಪ್ಟಂಬರ್ 11ರಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಇಸ್ಲಾಮಿನ ಅಧ್ಯಾಪನೆಗಳನ್ನು ಹರಡಲು ಪ್ರಭಾವಶಾಲಿ ಮಾರ್ಗವನ್ನಾಗಿ ಮಾಡಿದರು. ಮುಸ್ಲಿಂ ಫಾರ್ ಲೈಫ್, ಮುಹಮ್ಮದ್ ಮೆಸೆಂಜರ್ ಆಫ್ ಪೀಸ್, ಹಝ್ರತ್ ಪೈಗಂಬರ್(ಸ)ರ ಜೀವಿತದ ಬಗ್ಗೆ ಚಳುವಳಿಯನ್ನು ಶುರುಮಾಡಿದರು. ಅಮೇರಿಕದ 56 ಯೂನಿವರ್ಸಿಟಿಗಳಲ್ಲಿ ಈ ವಿಷಯದಲ್ಲಿ ಲೆಕ್ಚರ್ ನಡೆಯಿತು. ಲೈಫ್ ಆಫ ಮುಹಮ್ಮದ್ ಎಂಬ ಗ್ರಂಥವನ್ನು ಅವರ ಲೆಕ್ಚರ್‌ನಲ್ಲಿ ಭಾಗಿಯಾದವರಿಗೆ ಕೊಡುಗೆಯಾಗಿ ನೀಡಲಾಯಿತು. ಅವರು ಮುಸ್ಲಿಮ್ ಫಾರ್ ಲೋಯಲ್‌ಟಿ ಎಂಬ ಚಳುವಳಿಯನ್ನು ಕೂಡ ಶುರುಮಾಡಿದರು. ಅನೇಕ ಯೂನಿವರ್ಸಿಟಿಗಳಲ್ಲಿ ಲೆಕ್ಚರ್ ನೀಡಿದರು. ಲೋಕಲ್ ಸರ್ಕಾರಿ ವಲಯಗಳೊಂದಿಗೆ ಮೀಟಿಂಗ್ ನಡೆಸಿದರು ಮತ್ತು ಇಸ್ಲಾಮಿನ ಅಧ್ಯಾಪನೆಯನ್ನು ಅಭಿವ್ಯಕ್ತಗೊಳಿಸಿದರು.

ಒಂದು ಬಾರಿ ಜಲ್ಸಾ ಸಾಲಾನದ ಸಂಧರ್ಭದಲ್ಲಿ ಹಝ್ರತ್ ಖಲೀಫ಼ತುಲ್ ಮಸೀಹ್ ಸಾಲಿಸ್(ರಹ್) ತನ್ನ ಭಾಷಣದಲ್ಲಿ ಸ್ವಿಟ್ಝರ್‌ಲ್ಯಾಂಡಿನ ಮಿಶನಿನ ಕೆಲಸಗಳ ಸಂಬಂಧದಲ್ಲಿ ನಸೀಂ ಮಹ್‌ದಿ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: ಸ್ವಿಟ್ಝಲ್ಯಾಂಡಿನ ಮಲೆಗಳಲ್ಲಿ ಜಾನುವಾರುಗಳನ್ನು ಸಾಕುವ ಮೂರು ಗೋತ್ರಗಳು ಇವೆ. ಈ ಮೂರು ಗೋತ್ರಗಳ ಭಾಷೆಗಳು ಕೂಡ ಬೇರೆ ಬೇರೆಯಾಗಿವೆ. ಅವರು 28 ಸಾವಿರ ಸಂಖ್ಯೆಯಲ್ಲಿ ಇರುವರು. ಅಲ್ಲಾಹನು ನಸೀಂ ಮಹ್‌ದಿ ಸಾಹಿಬ್‌ರಿಗೆ ಪ್ರತಿಫಲ ನೀಡಲಿ. ನನ್ನೊಂದಿಗೆ ಸಮಾಲೋಚನೆ ನಡೆಸಿದ ನಂತರ 8 ಸಾವಿರ ಫೋಲ್ಡರ್‌ಗಳನ್ನು ಸ್ವಿಟ್ಝರ್‌ಲ್ಯಾಂಡಿನ ಮಲೆಗಳಲ್ಲಿ ವಾಸಿಸುವ ಪ್ರತಿಯೊಂದು ಮನೆಗೆ ತಲುಪಿಸಿದರು. ಆಗ ಗದ್ದಲವೆದ್ದಿತು. 2 ವಾರ್ತಾಪತ್ರಿಕೆಗಳು ಬಹಳ ಶಕ್ತವಾಗಿ ಅದನ್ನು ಖಂಡಿಸಿ ಬರೆದುವು. (ಸಬೀಲ್ ಅರ್‍ರಶಾದ್, ಸಂಪುಟ-2, ಪುಟ-426-427)

ಅವರ ಪರವಾಗಿ ಅದರಿಂದ ದುಆ ಕೂಡ ಆಯಿತು. ಅನೇಕ ಲಕ್ಷದಷ್ಟು ಫೋಲ್ಡರ್‌ಗಳು ವಿತರಣೆಗೊಂಡುವು. (ಖುತ್‌ಬಾತೆ ನಾಸಿರ್, ಸಂಪುಟ-2, ಪುಟ-543-544)

ಹೇಗಿದ್ದರೂ ಇದು ಜಲ್ಸ ಸಾಲಾನದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಮುಂದಿರಿಸಿದ ಸಂಕ್ಷಿಪ್ತ ರಿಪೋರ್ಟ್ ಆಗಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ತನ್ನ ಪ್ರೀತಿಪಾತ್ರರ ಬಳಿ ಅವರಿಗೆ ಸ್ಥಾನ ನೀಡಲಿ. ಅವರ ಮಕ್ಕಳಿಗೂ ಮತ್ತು ಪತ್ನಿಗೂ ಸಹನೆ ಮತ್ತು ಧೈರ್ಯ ನೀಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಯಾವ ರೀತಿಯಲ್ಲಿ ಅವರು ಪ್ರಾಮಾಣಿಕತೆಯಿಂದ ಜೀವನವನ್ನು ಸಾಗಿಸಿದರೋ ಅದೇ ರೀತಿಯಲ್ಲಿ ಅವರ ಮಕ್ಕಳೂ ನಿಷ್ಠೆಯಿಂದ ಜೀವನವನ್ನು ಸಾಗಿಸುವವರಾಗಲಿ.

ಎರಡನೇ ಜನಾಝ ರಬ್ವದ ಅಝೀಝಂ ಮುಹಮ್ಮದ್ ಅಹ್ಮದ್ ಶಾರಿಮ್‌ರದ್ದಾಗಿದೆ. ಈ ಹುಡುಗ 16ನೇ ವಯಸ್ಸಿನಲ್ಲಿ ಅಲ್ಲಾಹನ ವಿಧಿ ಪ್ರಕಾರ ನಿಧನಗೊಂಡನು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಖಿಲಾಫತಿನ ಪ್ರೇಮಿ, ಹಸನ್ಮುಖಿ ಮತ್ತು ಸ್ನೇಹಮಯಿ ಹುಡುಗನಾಗಿದ್ದನು. ಧನತ್ಯಾಗಗಳಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದನು. ಜಮಾಅತಿನ ಮತ್ತು ಶಾಖಾ ಸಂಘಟನೆಯ ಕಾರ್ಯಕ್ರಮಗಳಲ್ಲಿ ನಿಯತವಾಗಿ ಭಾಗಿಯಾಗುತ್ತಿದ್ದನು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದನು. ಈ ವಯಸ್ಸಿನಲ್ಲೇ ಅವನು ವಸಿಯ್ಯತ್ ಮಾಡಿದ್ದನು. ದಿವಂಗತ ಹುಡುಗ ತಂದೆತಾಯಂದಿರನ್ನಲ್ಲದೇ ಇಬ್ಬರು ಸಹೋದರಿಯರನ್ನು ಅಗಲಿರುವನು. ಅಲ್ಲಾಹನು ಎಲ್ಲರಿಗೂ ಸಹನೆ ಮತ್ತು ಧೈರ್ಯವನ್ನು ಪ್ರದಾನ ಮಾಡಲಿ.

ಮೂರನೇ ಜನಾಝ ಸನ್ಮಾನ್ಯ ರಶೀದ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಲೀಮ ಖಮರ್ ಸಾಹಿಬರದ್ದಾಗಿದೆ. ಮೇ 16ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿಕೊಂಡಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಅವರ ತಂದೆಯಾದ ಚೌಧರಿ ಸಿದ್ದೀಖ್ ಸಾಹಿಬ್‌ರ ತಾತರಾದ ಹಝ್ರತ್ ಮೌಲವಿ ವಜೀರುದ್ದೀನ್ ಸಾಹಿಬ್ ಆಫ್ ಮುಕೇರಿಯರ ಮೂಲಕ ಉಂಟಾಗಿತ್ತು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾಗಿದ್ದರು ಮತ್ತು ಕಾಂಗ್ಡದಲ್ಲಿ ಹೆಡ್‌ಮಾಸ್ಟರ್ ಆಗಿದ್ದರು. ಅವರ ತಂದೆಯಾದ ಚೌಧರಿ ಮುಹಮ್ಮದ್ ಸಿದ್ದೀಕ್ ಸಾಹಿಬ್ ಮೌಲವಿ ಫಾಝಿಲ್ ಆಗಿದ್ದರು. ಅವರು ಜಮಾಅತಿನ ಶ್ರೇಷ್ಠ ವ್ಯಕ್ತಿಯಾಗಿದ್ದರು. ದೀರ್ಘಕಾಲದ ವರೆಗೆ ಇಂಚಾರ್ಜ್ ಖಿಲಾಫತ್ ಲೈಬ್ರರಿಯಾಗಿ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ರಬ್ವದ ಸದರ್ ಉಮೂಮಿಯಾಗಿಯೂ ದೀರ್ಘಕಾಲ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಸಲೀಮ ಸಾಹಿಬರ ಪಿತರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ನಿರ್ದೇಶನ ಪ್ರಕಾರ ರಬ್ವ ನಿರ್ಮಾಣದ ವೇಳೆ ಡೇರೆ ಮಾಡಲು ಮತ್ತು ಮೊದಲ ರಾತ್ರಿ ರಬ್ವದಲ್ಲಿ ಕಳೆಯುವ ಸೌಭಾಗ್ಯ ಲಭಿಸಿತ್ತು. ದಿವಂಗತ ಸಲೀಮ ಸಾಹಿಬ ತನ್ನ ಪ್ರಾಥಮಿಕ ಶಿಕ್ಷಣವನ್ನು ರಬ್ವದಲ್ಲಿ ಪಡೆದರು. ತಾಲೀಮುಲ್ ಇಸ್ಲಾಂ ಕಾಲೇಜಿನಿಂದ ಎಂ.ಎ. ಅರಬಿಯ ಡಿಗ್ರಿ ಗಳಿಸಿದರು. ದೀರ್ಘಕಾಲ ಅನೇಕ ವಿಭಾಗಗಳಲ್ಲಿ ಸೇವೆ ಸಲ್ಲಿಸಿದರು. ಪ್ರಾದೇಶಿಕ ಲಜ್ನ ಇಮಾಇಲ್ಲಾಹ್‌ದಲ್ಲಿ 1972ರಿಂದ 1982ರ ತನಕ ಜನರಲ್ ಸೆಕ್ರಟರಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. 1982ರಿಂದ 1987ರ ತನಕ ಅಮತುಲ್ ಹಯ್ಯ್ ಲೈಬ್ರರಿಯಲ್ಲಿ ಲೈಬ್ರೇರಿಯನ್ ಆಗಿ ಕೆಲಸ ಮಾಡಿದರು. 1987ರಿಂದ 2018ರ ತನಕ 21 ವರ್ಷಗಳ ಕಾಲ ಮಿಸ್ಬಾಹ್ ನಿಯತಕಾಲೀನದ ಸಂಪಾದಕರಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಗಳಿಸಿದರು. ಈ ಕಾಲದಲ್ಲಿ ಕಷ್ಟಕರವಾದ ಸ್ಥಿತಿಗತಿಗಳಲ್ಲೂ ಅವರು ಮಿಸ್ಬಾಹ್ ಮಾಸಿಕವನ್ನು ಉತ್ತಮವಾಗಿ ನಡೆಸಿದರು. ದಿವಂಗತ ಸಲೀಮ ಸಾಹಿಬರು ಅತ್ಯಂತ ಉತ್ತಮ ನಡತೆಯ, ಆರಾಧನೆ ಮಾಡುವ, ದುಆ ಮಾಡುವ ಮತ್ತು ಸರಳ ಪ್ರಕೃತದ ಮಹಿಳೆಯಾಗಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಇತರ ಐಚ್ಛಿಕ ನಮಾಝ್‌ಗಳಾದ ಇಶ್ರಾಖ್ ಮತ್ತು ಝುಹಾವನ್ನು ಕೂಡ ನಿಯತವಾಗಿ ನಿರ್ವಹಿಸುತ್ತಿದ್ದರು. ಖಿಲಾಫತಿನೊಂದಿಗೆ ಅತ್ಯಂತ ನಿಷ್ಠೆಯ ಮತ್ತು ಪ್ರಾಮಾಣಿಕತೆಯ ಸಂಬಂಧವನ್ನು ಹೊಂದಿದ್ದರು. ಅವರ ಜೀವಿತದ ಪ್ರತಿಯೊಂದು ಮಗ್ಗಲಲ್ಲಿ ದುಆದ ಬಣ್ಣ ಕಾಣಬಹುದಾಗಿತ್ತು. ದೇವದೂತ ಗುಣದ ಮಹಿಳೆಯಾಗಿದ್ದರು. ಪ್ರತಿಯೊಬ್ಬರೊಂದಿಗೂ ಅತ್ಯಂತ ಪ್ರೀತಿ ಮತ್ತು ಸ್ನೇಹದಿಂದ ಸಂಬಂಧವಿರಿಸಿಕೊಂಡಿದ್ದರು. ಎಂದಿಗೂ ಯಾರೊಂದಿಗೂ ಅತೃಪ್ತಿಪಟ್ಟಿರಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.
(ಅಲ್‌ಫಝಲ್ ಇಂಟರ್‌ನ್ಯಾಶ್ನಲ್, 24-06-2022, ಪುಟ-5 ರಿಂದ 9)

************

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

# ದೇಶವನ್ನಾಳುವವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಮಾದರಿ.

ಮುಹಮ್ಮದ್ ಇನಾಮ್ ಗೋರಿ, ನಾಝಿರ್ ಅಅ್‌ಲ ಸದರ್ ಅಂಜುಮನ್ ಅಹ್ಮದೀಯ ಖಾದಿಯಾನ್

**ಇನ್ನಲ್ಲಾಹ ಯಅ್‌ಮುರುಕುಮ್ ಅನ್‌ತುವದ್ದುಲ್ ಅಮಾನತಿ ಇಲಾ ಅಹ್ಲಿಹಾ ವ ಇಝಾ ಹಕಮ್‌ತುಮ್ ಬೈನನ್ನಾಸಿ ಅನ್ ತಹ್‌ಕಮೂ ಬಿಲ್ ಅದ್‌ಲಿ ಇನ್ನಲ್ಲಾಹ ನಿಇಮ್ಮಾ ಯುಇಝುಕುಮ್ ಬಿಹೀ ಇನ್ನಲ್ಲಾಹ ಕಾನ ಸಮೀಅನ್** ಬಸೀರ.

ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 4:59).

**ಅಲ್ಲಝೀನ ಇನ್ ಮಕ್ಕನ್ನಾಹುಮ್ ಫಿಲ್ ಅರ್‌ಝಿ ಅಖಾಮುಸ್ಸಲಾತ ವ ಆತವುಝ್ಝಕಾತ ವ ಅಮರೂ ಬಿಲ್ ಮಅ್‌ರೂಫಿ ವನಹವ್ ಅನಿಲ್ ಮುಂಕರಿ ವಲಿಲ್ಲಾಹಿ ಆಖಿಬತುಲ್ ಉಮೂರಿ.**

ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುವರು; ಝಕಾತ್ ನೀಡುವರು; ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯ ಪರಿಣಾಮ ಅಲ್ಲಾಹನ ಕೈಯಲ್ಲಿದೆ. (ಪವಿತ್ರ ಖುರ್‌ಆನ್ 22:42).

**ಇನ್ನಲಕಅಲ್ಲಾ ತಜೂಅ ಫೀಹಾ ವಲಾ ತಅ್‌ರ ವ ಅನ್ನಕ ಲಾ ತಝ್‌ಮಉ ಫೀಹಾ ವಲಾ ತಝ್‌ಹಾ.**

ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು.ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ. (ಪವಿತ್ರ ಖುರ್‌ಆನ್ 20:119,120).

ನಾನು ಪವಿತ್ರ ಖುರ್‌ಆನಿನ ಮೂರು ವಚನಗಳನ್ನು ಪಠಿಸಿ ಭಾಷಾಂತರವನ್ನು ಪ್ರಸ್ತಾಪಿಸಿದ್ದೇನೆ. ಸರಕಾರ ಯಾವುದೇ ರೀತಿಯದಾಗಿದ್ದರೂ ಒಂದು ದೇಶದ ಪ್ರಜೆಗಳು ಮತ್ತು ಅವರನ್ನು ಆಳುವವರಿಗೆ ಸ್ಪಷ್ಟವಾದ ಸಂದೇಶ ಮತ್ತು ಅನುಸರಿಸಬೇಕಾದ ಕಾರ್ಯಸೂಚಿಯನ್ನು ಈ ವಚನಗಳಲ್ಲಿ ನೀಡಲಾಗಿದೆ.

ಚುನಾವಣೆಯನ್ನು ನಡೆಸುವ ಪ್ರಜಾಪ್ರಭುತ್ವದ ಪ್ರಕ್ರಿಯೆ ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು ಎಂದು ದೇಶದ ಜನರಿಗೆ ಉಪದೇಶಿಸಲಾಗಿದೆ. ಎಂತಹ ಆಡಳಿತಾಧಿಕಾರಿಗಳನ್ನು ಚುನಾಯಿಸಲು ಅಥವಾ ನಾಮನಿರ್ದೇಶಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದರೆ ಆ ಅಧಿಕಾರಿಗಳು ಪ್ರಾಮಾಣಿಕರು ಮಾತ್ರವಲ್ಲ ದೇಶವನ್ನು ಆಳುವ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಲು ಅರ್ಹರೂ ಆಗಿರಬೇಕು. ಸರಕಾರ ಸ್ಥಾಪಿತವಾದ ನಂತರ ದೇಶವನ್ನಾಳುವವರ ಹೊಣೆಗಾರಿಕೆ ಏನೆಂದರೆ ಅವರು ಪರಿಪೂರ್ಣವಾದ ನ್ಯಾಯ ಬದ್ಧತೆಯಿಂದ ಧರ್ಮ, ಸಮುದಾಯ, ವರ್ಣ ವಂಶವನ್ನು ತಾರತಮ್ಯ ಭಾವನೆಯಿಂದ ಪರಿಗಣಿಸದೆ ಪ್ರಜೆಗಳ ಹಕ್ಕುಗಳನ್ನು ಈಡೇರಿಸಿಕೊಡಲು ಪ್ರಯತ್ನಮಾಡಬೇಕು.

ಜನರ ಹಕ್ಕುಗಳಲ್ಲಿ ಮೊದಲನೆಯದಾಗಿ ಅವರ ಮೂಲಭೂತ ಆವಶ್ಯಕತೆಗಳನ್ನು ಒದಗಿಸಿಕೊಡಲು ವ್ಯವಸ್ಥೆ ಮಾಡಬೇಕು. ಜನರ ಕನಿಷ್ಠತಮ ಮೂಲಭೂತ ಆವಶ್ಯಕತೆ ಯಾವುದೆಂದರೆ ಯಾವುದೇ ವ್ಯಕ್ತಿ ಹಸಿದಿರಬಾರದು. ಕುಡಿಯಲು ಶುದ್ಧವಾದ ನೀರನ್ನು ಒದಗಿಸಲು ಪ್ರಯತ್ನಿಸಬೇಕು. ಧರಿಸಲು ಬಟ್ಟೆಯನ್ನು ಮತ್ತು ವಾಸಿಸಲು ಸರಕಾರದ ಸಂಪನ್ಮೂಲಗಳಿಗನುಸಾರವಾಗಿ ವಸತಿಯನ್ನು ಒದಗಿಸಬೇಕು. ಈ ಆವಶ್ಯಕತೆಯನ್ನು ಈಡೇರಿಸಲು ಇಸ್ಲಾಮ್ ಝಕಾತ್ ಮತ್ತು ಜಿಝಿಯದ ವ್ಯವಸ್ಥೆ ಮಾಡಿದೆ.

ಜನರು ತಮ್ಮ ನಂಬಿಕೆಗಳಿಗೆ ಅನುಸಾರವಾಗಿ ಆರಾಧನೆ ಮಾಡುವ ಸ್ವಾತಂತ್ರ್ಯವನ್ನು ಸರಕಾರ ನೀಡಬೇಕಾದುದು ಕಡ್ಡಾಯವಾಗಿದೆ. ಮಸ್‌ಜಿದ್‌ಗಳನ್ನು, ಚರ್ಚ್‌ಗಳನ್ನು, ಯಹೂದಿ ದೇವಾಲಯಗಳನ್ನು, ಹಿಂದೂ ಮಂದಿರಗಳನ್ನು ಗೌರವಿಸುವ ಮತ್ತು ಸಂರಕ್ಷಿಸುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು.

ಎಂತಹ ಸಮಾಜ ವ್ಯವಸ್ಥೆ ಸ್ಥಾಪಿಸಲು ಪ್ರಯತ್ನಿಸಬೇಕೆಂದರೆ ಅ ಸಮಾಜದಲ್ಲಿ ಜನರು ತಮ್ಮವರೊಂದಿಗೆ ಮತ್ತು ಅನ್ಯರೊಂದಿಗೆ ಉತ್ತಮ ವರ್ತನೆ, ಸದ್ಗುಣ ಮತ್ತು ನ್ಯಾಯಪಾಲನೆಯ ಉಪದೇಶ ನೀಡುತ್ತಾ ಇರುವವರಾಗಬೇಕು. ಲೌಕಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಅತೃಪ್ತಿಕರವಾದ ಎಲ್ಲ ಕೃತ್ಯಗಳಿಂದ ತಮ್ಮನ್ನು ಮತ್ತು ಅನ್ಯರನ್ನು ತಡೆಯಲು ಪ್ರಯತ್ನಿಸುತ್ತಾ ಇರಬೇಕು.

ಈ ಸಂಕ್ಷಿಪ್ತ ಮುನ್ನುಡಿಯ ನಂತರ ನಾವು ನೋಡುವ ಒಂದು ರಾಜ್ಯದ ಆಡಳಿತೆಗಾರನಾಗಿ ಎಂತಹ ಉತ್ತಮ ಮಾದರಿಯನ್ನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಕಟಿಸಿದರೆಂದು. ಇದಕ್ಕೋಸ್ಕರ ಮದೀನ ಮುನವ್ವರ ಎಂಬ ನಗರ ರಾಜ್ಯದ ಮೇಲೆ ವಿಹಂಗಮ ನೋಟ ಬೀರುತ್ತೇವೆ.

ಪೈಗಂಬರ್ ಎಂದು ವಾದಿಸಿದ ನಂತರ ಮಕ್ಕದಲ್ಲಿ ಹದಿಮೂರು ವರ್ಷಗಳ ಕಾಲ ಅತ್ಯಂತ ಹೆಚ್ಚಿನ ಮಟ್ಟದ ಹಿಂಸಾಚಾರಗಳಿಗೆ ಪಾತ್ರರಾದ ನಂತರ ಅಲ್ಲಾಹನ ಅಜ್ಞೆ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ವಲಸೆ ಹೋದರು. ಮದೀನಕ್ಕೆ ತಲಪಿದ ನಂತರ ಅಲ್ಲಿ ಬಾಜಮಾಅತ್ ನಮಾಝ್ ಅನುಷ್ಠಿಸಲು ಮಸ್‌ಜಿದನ್ನು ನಿರ್ಮಿಸಲು ಪ್ರಥಮವಾಗಿ ಗಮನ ಹರಿಸಿದರು. ಅವರು ಸ್ವಲ್ಪ ಕಾಲ ವಾಸಿಸಿದ ಖುಬಾ ಎಂಬ ಸ್ಥಳದಲ್ಲಿ ಪ್ರಥಮ ಮಸ್‌ಜಿದ್ ನಿರ್ಮಿಸಲಾಯಿತು. ಅನಂತರ ಮದೀನದಲ್ಲಿ ಇಬ್ಬರು ಅನಾಥ ಮಕ್ಕಳಿಂದ ಜಮೀನು ಖರೀದಿಸಿ ಮಸ್‌ಜಿದ್ ನಬವಿಯ ಅಸ್ತಿಭಾರ ಹಾಕಿದರು. ಅದು ಅತ್ಯಂತ ಸಾಮಾನ್ಯ ಕಟ್ಟಡವಾಗಿದ್ದರೂ ವಿಶಾಲವಾಗಿತ್ತು. ಖರ್ಜೂರದ ಮರದ ಸೋಗೆಗಳಿಂದ ಮಸ್‌ಜಿದಿನ ಛಾವಣಿ ನಿರ್ಮಿಸಲ್ಪಟ್ಟಿತು. ಈ ರೀತಿ ಪವಿತ್ರ ಖುರ್‌ಆನ್ ಹೇಳಿದ ಹಾಗೆ **ಅಲ್ಲಝೀನ ಇನ್ ಮಿಕ್ಕನ್ನಾಹುಮ್ ಫಿಲ್ ಅರ್‌ಝಿ ಅಖಾಮುಸ್ಸಲಾತ** – ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುವರು ಎಂದು ಅಲ್ಲಾಹನು ನಿರ್ದೇಶಿಸಿದುದನ್ನು ಅನುಸರಿಸಿ ಬಾಜಮಾಅತ್ ನಮಾಝ್ ನಿರ್ವಹಿಸುವ ವ್ಯವಸ್ಥೆ ಮಾಡಿದರು. ಅನಂತರ ಮದೀನ ಎಂಬ ನಗರ ರಾಜ್ಯದಲ್ಲಿ ಸುವ್ಯವಸ್ಥೆ ಸ್ಥಾಪಿಸಲು ಗಮನ ಹರಿಸಿದರು.

ನೆನಪಿಡಬೇಕಾದುದೇನೆಂದರೆ ಮದೀನದ ನಗರ ರಾಜ್ಯ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದ ನಿವಾಸಿಗಳಲ್ಲಿ ಬಹುಸಂಖ್ಯಾತರ ಓಟುಗಳಿಂದ ಚುನಾಯಿಸಲ್ಪಟ್ಟ ಅಧಿಪತಿಯೂ ಆಗಿರಲಿಲ್ಲ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಲ್ಪಸಂಖ್ಯೆಯಲ್ಲಿ ನಿಷ್ಠಾವಂತ ಶಿಷ್ಯರು ಇಸ್ಲಾಮ್ ಧರ್ಮದ ಸಂದೇಶ ಮತ್ತು ಹಝ್ರತ್ ಪೈಗಂಬರರ ಅತ್ಯುತ್ಕೃಷ್ಟ ಸ್ವಭಾವ ಗುಣಗಳಿಂದ ಪ್ರಭಾವಿತರಾಗಿ ಆಗ ಯಸ್‌ರಿಬ್ ಎಂದು ಕರೆಯಲ್ಪಡುತ್ತಿದ್ದ ಮದೀನಕ್ಕೆ ಆಗಮಿಸಲು ಅವರೊಂದಿಗೆ ಅಪೇಕ್ಷಿಸಿದ್ದರು ಮತ್ತು ಇನ್ನೊಂದು ಕಡೆ ಅಲ್ಲಾಹನು ಯಸ್‌ರಿಬನ್ನು ಮದೀನತುರ್ರಸೂಲನ್ನಾಗಿ ಮಾಡಲು ಕಾರ್ಯನಿರತನಾಗಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೇ ಸಾಧನ ಸಾಮಗ್ರಿಗಳಿಲ್ಲದೆ ಅಡಗಿಕೊಂಡು ಅಡಗಿಸಿಕೊಂಡು ತನ್ನ ಒಬ್ಬ ಸಂಗಡಿಗ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ಅವರೊಂದಿಗೆ ಅಲ್ಲಿಗೆ ಆಗಮಿಸಿದರು.

ಆದರೆ ಅಲ್ಲಾಹನು ಮದೀನ ನಿವಾಸಿಗಳಾದ ಮುಸ್ಲಿಮರಲ್ಲಿ ಎಂತಹ ಪ್ರೀತಿ ಮತ್ತು ತ್ಯಾಗದ ಮನೋಭಾವವನ್ನು ಸೃಷ್ಟಿಸಿದ್ದನೆಂದರೆ ಪ್ರತಿಯೊಬ್ಬ ಹೀಗೆ ಇಚ್ಛಿಸುತ್ತಿದ್ದನು: ಹಝ್ರತ್ ಪೈಗಂಬರ್ ನಮ್ಮ ಮನೆಗೆ ಆಗಮಿಸಿ ಅನುಗ್ರಹ ನೀಡಲಿ ಎಂದು. ಸ್ವಲ್ಪ ದಿವಸಗಳ ನಂತರ ಮಕ್ಕದಿಂದ ಹಝ್ರತ್ ಪೈಗಂಬರರ ಕುಟುಂಬದವರು ಮತ್ತು ಸಹಾಬರು ಮದೀನಕ್ಕೆ ವಲಸೆ ಬಂದರು. ಸಹಾಬರು ಬರಿಗೈಯಲ್ಲಿ ಮದೀನಕ್ಕೆ ಆಗಮಿಸಿದ್ದರು. ಅವರ ಪುನರ್ವಸತಿಯ ವ್ಯವಸ್ಥೆ ಆಗಬೇಕಾಗಿತ್ತು. ಹಝ್ರತ್ ಪೈಗಂಬರರು ಆಗಮಿಸುವಾಗ ಅಲ್ಲಿ ಯಾವುದೇ ಸರಕಾರವಿರಲಿಲ್ಲ. ಅಲ್ಲಿ ಸರಕಾರಿ ಖಜಾನೆಯಾಗಲೀ ಬೈತುಲ್ ಮಾಲ್ ಆಗಲಿ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರರು ಜಾಣ್ಮೆಯಿಂದ ಒಂದು ಪದ್ಧತಿ ರೂಪಿಸಿದರು. ಮಕ್ಕದ ಒಬ್ಬೊಬ್ಬ ಮುಹಾಜಿರ್‌ರೊಂದಿಗೆ ಮದೀನದ ಒಬ್ಬೊಬ್ಬ ಅನ್‌ಸಾರ್‌ಗಳೊಂದಿಗೆ ಭ್ರಾತೃ ಸಂಬಂಧ ಸ್ಥಾಪಿಸಿದರು. ಈ ಭ್ರಾತೃ ಸಂಬಂಧ ಎಷ್ಟು ಉತ್ತಮ ಮಾದರಿಯದಾಗಿತ್ತೆಂದರೆ ಕೆಲವು ಅನ್‌ಸಾರ್‌ಗಳು ತಮ್ಮ ಮುಹಾಜಿರ್ ಸಹೋದರನೊಂದಿಗೆ ಹೇಳಿದರು: ನಮ್ಮ ನಮ್ಮ ಸಂಪತ್ತಿನ ಮತ್ತು ಸ್ವತ್ತಿನ ಅರ್ಧಾಂಶವನ್ನು ನಿಮಗೆ ಕೊಡುತ್ತೇವೆ ಎಂದು. ಅವರು ಪ್ರೀತಿ ವಿಶ್ವಾಸದಿಂದ ಹೀಗೆ ಸಹ ಹೇಳಿದರು: ನನಗೆ ಇಬ್ಬರು ಪತ್ನಿಯರಿದ್ದಾರೆ. ನಾನು ಒಬ್ಬಳಿಗೆ ತಲಾಖ್ ನೀಡುತ್ತೇನೆ. ಇದ್ದತ್ ಅವಧಿ ಕಳೆದ ನಂತರ ಆಕೆಯನ್ನು ವಿವಾಹವಾಗಿರಿ. ಆದರೆ ಈ ಕೊಡುಗೆಯ ಪ್ರಸ್ತಾಪ ಆಲಿಸಿದ ಮುಹಾಜಿರ್ ಹೇಳಿದರು: ನಿಮ್ಮ ಸಂಪತ್ತು, ಸ್ವತ್ತು ಮತ್ತು ನಿಮ್ಮ ಕುಟುಂಬ ನಿಮಗೆ ಅನುಗ್ರಹದಾಯಕವಾಗಲಿ. ನನಗೆ ಸ್ವಲ್ಪ ಹಣ ಸಾಲವಾಗಿ ಕೊಟ್ಟು ಮಾರುಕಟ್ಟೆಯ ದಾರಿ ತೋರಿಸಿರಿ. ಸಹಾಬರು ಬೇಗನೆ ತಮ್ಮ ಸ್ವಂತ ಹೆಜ್ಜೆಗಳಲ್ಲಿ ನಿತರಲ್ಲದೆ ಅನ್ಯರಿಗೆ ಆಶ್ರಯ ನೀಡಲು ಸಹ ಶಕ್ತರಾದರು. ಮದೀನದ ಮುಸ್ಲಿಮರು ಅನ್‌ಸಾರ್‌ಗಳೆಂದೂ ಮಕ್ಕದಿಂದ ವಲಸೆ ಬಂದ ಮುಸ್ಲಿಮರು ಮುಹಾಜಿರ್ ಎಂದು ಕರೆಯಲ್ಪಡುತ್ತಿದ್ದರು. ಅವರ ಮಧ್ಯೆ ಇದ್ದ ಭಾವೈಕ್ಯತೆ ಮತ್ತು ಭ್ರಾತೃತ್ವ

ಭಾವನೆಯ ಮಾದರಿಯಾದ ಮತ್ತು ಜಾಣ್ಮೆಭರಿತ ಸಂಬಂಧದ ಸಂಕ್ಷಿಪ್ತ ವಿವರಣೆ ಮಾತ್ರ ಇದಾಗಿದೆ.

ಮದೀನದ ನಗರ ರಾಜ್ಯದಲ್ಲಿ ಯಾವುದೆಲ್ಲ ಕೋಮುಗಳು ಮತ್ತು ಗೋತ್ರಗಳು ವಾಸಿಸುತ್ತಿರುವುವು ಎಂದು ನೋಡುವೆ. ಅವರನ್ನು ಒಗ್ಗೂಡಿಸಲು ಅವರಲ್ಲಿ ಭಾವೈಕ್ಯತೆ ಸೃಷ್ಟಿಸಲು ಮತ್ತು ಒಂದು ಆಡಳಿತ ವ್ಯವಸ್ಥೆಯ ಅಧೀನಕ್ಕೆ ತರಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಏನೆಲ್ಲಾ ಕಾರ್ಯವಿಧಾನಗಳನ್ನು ರೂಪಿಸಿದರು ಎನ್ನುವುದನ್ನು ನೋಡುವ. ಆ ಕಾಲದಲ್ಲಿ ಮದೀನದಲ್ಲಿ ಯಹೂದಿಯರ ಬನೂ ಖೈನ್‌ಖಾಳ್, ಬನೂ ನಝೀರ್ ಮತ್ತು ಬನೂ ಖುರೈಝ ಎಂಬ ಮೂರು ಗೋತ್ರಗಳು ವಾಸಿಸುತ್ತಿದ್ದುವು. ಮದೀನದಲ್ಲಿ ಬಹುದೇವಾರಾಧಕರ ಔಸ್ ಮತ್ತು ಖಝ್‌ರಜ್ ಎಂಬ ಎರಡು ಗೋತ್ರಗಳೂ ಸಹ ವಾಸಿಸುತ್ತಿದ್ದುವು.

ಈ ಐದು ಗೋತ್ರಗಳಲ್ಲಿ ಆಡಳಿತೆ ವ್ಯವಸ್ಥೆ ಎಂಬುದೇ ಇರಲಿಲ್ಲ. ವಿಶಿಷ್ಟವಾಗಿ ಯಹೂದಿಯರ ಮೂರು ಗೋತ್ರಗಳು ಸ್ವತಂತ್ರವಾಗಿ ಬೇರೆ ಬೇರೆ ಕೋಟೆಗಳಲ್ಲಿ ವಾಸಿಸುತ್ತಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಅವರ ಅನುಯಾಯಿಗಳಲ್ಲಿ ಬಹುತೇಕ ಜನರು ಮದೀನಕ್ಕೆ ವಲಸೆ ಹೋಗಿ ಅಲ್ಲಿ ಬಲಿಷ್ಠರಾಗುತ್ತಾ ಇರುವ ಕಾರಣದಿಂದ ಮಕ್ಕದ ಖುರೈಶಿಗಳು ಅಸೂಯೆ ಪಡುತ್ತಿದ್ದರು. ಖುರೈಶಿಗಳು ತಮ್ಮ ಶಕ್ತಿ ಜಮಾಯಿಸಿ ಸಂದರ್ಭ ದೊರೆತಾಗ ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ಅಲ್ಲಿಂದ ಸಹ ಹೊರಗೋಡಿಸುವುದರಲ್ಲಿ ಜಯಗಳಿಸಲು ಚಿಂತಿಸುತ್ತಿದ್ದರು.

ಮದೀನದ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗಳಾದ ಮುಹಾಜಿರ್‌ಗಳಿಗೂ ಅನ್‌ಸಾರ್‌ಗಳಿಗೂ ನಿಶ್ಚಿಂತರಾಗಿ ಜೀವಿಸುವಂತೆ ಮಾಡುವವುಗಳಾಗಿರಲಿಲ್ಲ. ಹಝ್ರತ್ ಪೈಗಂಬರರು ಮತ್ತು ಅವರ ಅನುಯಾಯಿಗಳು ಸುಖವಾಗಿ ರಾತ್ರಿ ನಿದ್ರಿಸಲು ಸಹ ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಮದೀನದ ನಗರ ರಾಜ್ಯದೊಳಗೆ ಮುಸ್ಲಿಮರು ಮತ್ತು ಮುಸ್ಲಿಮೇತರ ಗೋತ್ರಗಳ, ವಿಶಿಷ್ಟವಾಗಿ ಯಹೂದಿ ಗೋತ್ರಗಳ ಜೊತೆಗೆ ಶಾಂತಿ ಸೌಹಾರ್ದದ ಪರಿಸರದಲ್ಲಿ ಜೀವಿಸಲು ಹಝ್ರತ್ ಪೈಗಂಬರರ ದೂರದರ್ಶಿದೃಷ್ಟಿ ಒಂದು ಲಿಖಿತ ಒಪ್ಪಂದ ಮಾಡಿಕೊಳ್ಳುವ ಆವಶ್ಯಕತೆ ಇದೆ ಎಂದು ಮನವರಿಕೆ ಮಾಡಿತು. ಆ ಒಪ್ಪಂದದಲ್ಲಿ ಅಡಕವಾದ ಶರತ್ತುಗಳಲ್ಲಿ ಕೆಲವು ಹೀಗೆ ಇವೆ:

1. ಮುಸ್ಲಿಮರು ಮತ್ತು ಯಹೂದಿಯರು ಪರಸ್ಪರ ಸಹಾನುಭೂತಿ ಮತ್ತು ಪ್ರಾಮಾಣಿಕತೆಯಿಂದ ಜೀವಿಸುವರು. ಒಂದು ಪಕ್ಷ ಇನ್ನೊಂದು ಪಕ್ಷದ ವಿರುದ್ಧ ಅತಿರೇಕವಾಗಿ ಅಥವಾ ದೌರ್ಜನ್ಯದಿಂದ ವರ್ತಿಸಲಾರದು.

2. ಪ್ರತಿಯೊಂದು ಕೋಮಿಗೆ ಧಾರ್ಮಿಕ ಸ್ವಾತಂತ್ರ್ಯವಿರುವುದು.

3. ಎಲ್ಲ ನಾಗರಿಕರ ಜೀವ ಮತ್ತು ಸಂಪತ್ತು ರಕ್ಷಿಸಲ್ಪಡುವುದು.

4. ಪ್ರತಿಯೊಂದು ರೀತಿಯ ಭಿನ್ನಾಭಿಪ್ರಾಯಗಳಿಗೆ ಮತ್ತು ವಿವಾದಗಳಿಗೆ ಸಂಬಂಧಿಸಿ ಹಝ್ರತ್ ಪೈಗಂಬರರನ್ನು ಸಮೀಪಿಸಬೇಕು. ಅವರು ಮಾಡುವ ತೀರ್ಪು ದೂರು ನೀಡಿದ ವ್ಯಕ್ತಿಯ ಕೋಮಿನ ಧರ್ಮಶಾಸ್ತ್ರ ಗ್ರಂಥಕ್ಕೆ ಅನುಸಾರವಾಗಿರುವುದು.

5. ಯಹೂದಿಯರ ಮತ್ತು ಮುಸ್ಲಿಮರ ವಿರುದ್ಧ ಯಾವುದಾದರೂ ಕೋಮು ಯುದ್ಧ ಮಾಡಿದರೆ ಯಹೂದಿಯರೂ ಮುಸ್ಲಿಮರೂ ಪರಸ್ಪರ ಸಹಾಯ ಮಾಡಲು ಸನ್ನದ್ಧರಾಗುವರು.

6. ಮದೀನವನ್ನು ಯಾರಾದರೂ ಅಕ್ರಮಿಸಿದರೆ ಎಲ್ಲರೂ ಸೇರಿಕೊಂಡು ಆಕ್ರಮಣಗಾರರನ್ನು ಎದುರಿಸುವರು.

7. ಮಕ್ಕದ ಖುರೈಶಿಗಳಿಗೆ ಮತ್ತು ಅವರ ಸಹಾಯಕರಿಗೆ ಮದೀನದ ಯಹೂದಿಯರು ಯಾವುದೇ ರೀತಿಯ ಸಹಾಯವನ್ನಾಗಲೀ ಆಶ್ರಯವನ್ನಾಗಲೀ ನೀಡಲಾರರು.

8. ಯಾವುದೇ ವಿಭಾಗ ಹಝ್ರತ್ ಪೈಗಂಬರರ ಅನುಮತಿ ಪಡೆಯದೆ ಯುದ್ಧಕ್ಕೋಸ್ಕರ ಹೊರಡಬಾರದು.

9. ಈ ಒಪ್ಪಂದದ ಪ್ರಕಾರ ಯಾವುದೇ ದೌರ್ಜನ್ಯಗಾರ ಅಥವಾ ಕಲಹಗಾರ ಶಿಕ್ಷೆ ಅಥವಾ ಪ್ರತೀಕಾರದಿಂದ ರಕ್ಷಿಸಲ್ಪಡಲಾರನು.

ಅನಂತರ ಸಂಭವಿಸಿದ ಘಟನೆಗಳಿಂದ ತಿಳಿಯುವುದೇನೆಂದರೆ ಯಹೂದಿ ಗೋತ್ರಗಳು ಒಪ್ಪಂದದ ಕೆಲವು ಶರತ್ತುಗಳನ್ನು ಉಲ್ಲಂಘಿಸುತ್ತಾ ಇದ್ದರೂ ಔಸ್ ಮತ್ತು ಖಝ್‌ರಜ್ ಗೋತ್ರದ ಕೆಲವು ಬಹುದೇವಾರಾಧಕರು ಮುಸ್ಲಿಮರ ಜೊತೆ ಇರುವುದು ಸುರಕ್ಷಿತವೆಂದು ಭಾವಿಸಿ ಬಾಹ್ಯವಾಗಿ ಮುಸ್ಲಿಮರಾಗಿದ್ದರೂ ಅವರ ಹೃದಯಗಳಲ್ಲಿ ಈಮಾನ್ ಇಣುಕಿ ಸಹ ನೋಡಿರಲಿಲ್ಲ ಮತ್ತು ಅವರು ಪ್ರತಿಯೊಂದು ವಿಷಮ ಸಂದರ್ಭಗಳಲ್ಲಿ ತಮ್ಮ ಕಪಟ ವಿಶ್ವಾಸವನ್ನು ಪ್ರಕಟಿಸುತ್ತಿದ್ದರು. ಈ ಒಪ್ಪಂದದ ಕಾರಣದಿಂದ ಮುಸ್ಲಿಮರ ಮತ್ತು ಯಹೂದಿಯರ ಪರಸ್ಪರ ಸಂಬಂಧ ಬಲಿಷ್ಠವಾಗಿತ್ತು ಮತ್ತು ಮದೀನದಲ್ಲಿ ಒಂದು ರೀತಿಯ ಸುಸ್ಥಿರವಾದ ಸರಕಾರದ ಅಸ್ತಿಭಾರವನ್ನು ಸ್ಥಾಪಿಸಲಾಗಿತ್ತು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅದರ ಅಧಿಪತಿಯಾಗಿ ನಿಶ್ಚಯಿಸಲ್ಪಟ್ಟಿದ್ದರು.

ಇಂತಹ ಅನಾನುಕೂಲ ಪರಿಸ್ಥಿತಿಯಲ್ಲಿಯೂ ಹಝ್ರತ್ ಪೈಗಂಬರರು ಅತ್ಯಂತ ಜಾಣ್ಮೆಯಿಂದ ಮದೀನ ನಗರ ರಾಜ್ಯದ ಆಡಳಿತೆ ವ್ಯವಸ್ಥೆಯನ್ನು ವಹಿಸಿಕೊಂಡು ತಮ್ಮ ಅತ್ಯುನ್ನತ ಸ್ವಭಾವ ಗುಣಗಳು, ಸೌಹಾರ್ದ, ಸಮಾನತೆ, ಪರಿಪೂರ್ಣ ನ್ಯಾಯನಿಷ್ಠೆ ಮೂಲಕ ಮದೀನ ಮುನವ್ವರವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಿದುದು ಎಂತಹ ಅನುಕರಣೀಯ ಮಾದರಿಯಾಗಿದೆ ಎಂದರೆ ಪ್ರತಿಯೊಂದು ದೇಶದ ಜನರ ಬಹುಮತದಿಂದ ಆಯ್ಕೆಗೊಂಡ ರಾಜ್ಯಾಧಿಪತಿಗೆ ಅಥವಾ ನಾಮನಿರ್ದೇಶಿತ ಆಡಳಿತೆಗಾರನಿಗೆ ದಾರಿದೀಪದ ಸ್ಥಾನವನ್ನು ಹೊಂದಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವನ ಚರಿತ್ರೆಯ ಆಧಾರದಿಂದ ಹೀಗೆ ವಿವರಿಸಲು ಇಚ್ಛಿಸುತ್ತೇನೆ: ಅವರ ಆಧ್ಯಾತ್ಮಿಕ ಪದವಿಯನ್ನು ದೃಷ್ಟಿಯಲ್ಲಿ ಇರಿಸದೆ ನೋಡುವುದಾದರೆ ಅವರ ಯಾವ ವೈಶಿಷ್ಟ್ಯಗಳ ಕಾರಣ ಅವರು ಜನಪ್ರಿಯ ಮತ್ತು ಯಶಸ್ವೀ ರಾಜ್ಯಾಧಿಪತಿಯಾಗಿ, ಕೆಲವು ವಿದ್ರೋಹಿ ಮತ್ತು ಕಪಟ ವಿಶ್ವಾಸಿಗಳನ್ನು ಹೊರತುಪಡಿಸಿ ಮದೀನದ ಜನರೆಲ್ಲರಿಂದ ಅಂಗೀಕರಿಸಲ್ಪಟ್ಟರು ಮತ್ತು ಅವರಿಗೋಸ್ಕರ ಜೀವಾರ್ಪಣೆ ಮಾಡುವುದು ಅಭಿಮಾನಕರವೆಂದು ಗಣಿಸಿದರು.

ಹಝ್ರತ್ ಪೈಗಂಬರರ ಪ್ರಥಮ ವೈಶಿಷ್ಟ್ಯ ನಮ್ಮ ಮುಂದೆ ಬರುವುದು ಅವರು ನೀಡಿದ ಧಾರ್ಮಿಕ ಸ್ವಾತಂತ್ರ್ಯ ಮತ್ತು ಅವರ ಸೌಹಾರ್ದ ವರ್ತನೆಯಾಗಿದೆ. ವಿವಿಧ ಧರ್ಮಗಳ ಮತ್ತು ವಿವಿಧ ವಿಚಾರಗಳ ನಂಬಿಕೆ ಹೊಂದಿರುವ ಜನರು ವಾಸಿಸುವ ಒಂದು ರಾಜ್ಯದಲ್ಲಿ ಪ್ರತಿಯೊಬ್ಬನಿಗೆ ತನ್ನ ನಂಬಿಕೆಯನ್ನೂ ವಿಚಾರವನ್ನೂ ಪ್ರಕಟಿಸಲು ಮತ್ತು ಶಾಂತಿಯಿಂದ ಪ್ರಚಾರ ಮಾಡಲು ಮತ್ತು ನಂಬಿಕೆಗಳನ್ನು ಅನುಷ್ಠಾನಕ್ಕೆ ತರಲು ಸ್ವಾತಂತ್ರ್ಯವಿದ್ದು ಯಾರ ಮನಸ್ಸನ್ನೂ ನೋಯಿಸಲು ಅನುಮತಿ ಇರಬಾರದು. ಹಿಂದೆ ಪ್ರಸ್ತಾಪಿಸಿದ ಹಾಗೆ ಮದೀನದಲ್ಲಿ ಏಕದೇವನಾದ ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವ ಮತ್ತು ಪವಿತ್ರ ಖುರ್‌ಆನಿನ ಶರೀಅತನ್ನು ಅನುಷ್ಠಾನಕ್ಕೆ ತರುತ್ತಿದ್ದ ಮುಸ್ಲಿಮರಿದ್ದರು. ಅವರೊಂದಿಗೆ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಶರೀಅತಾದ ತೌರಾತನ್ನು ಅನುಷ್ಠಾನಕ್ಕೆ ತರುತ್ತಿದ್ದ ಯಹೂದಿಯರಿದ್ದರು, ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ನಂಬುವ ಕೆಲವು ಕ್ರೈಸ್ತರಿದ್ದರು ಮತ್ತು ಬಹುದೇವಾರಾಧಕ ಕೋಮುಗಳೂ ಇದ್ದುವು. ಹಝ್ರತ್ ಪೈಗಂಬರರು ಅವರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಪ್ರತಿಯೊಬ್ಬರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದರು. ಅವರ ಮುಂದೆ ದೂರು ನೀಡಿದ ವ್ಯಕ್ತಿಯ ಧಾರ್ಮಿಕ ನಿಯಮಗಳಿಗೆ ಅನುಸಾರವಾಗಿ ಹಝ್ರತ್ ಪೈಗಂಬರರು ತೀರ್ಪು ನೀಡುತ್ತಿದ್ದರು.

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳಿದೆ: ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹಿಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. (ಪವಿತ್ರ ಖುರ್‌ಆನ್ 6:109).

ಮಕ್ಕದ ಬಹುದೇವಾರಾಧಕರು ಉಹುದ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮ್ ಶಹೀದರ ಮೃತ ಶರೀರಗಳನ್ನು ಅಗೌರವ ಗೊಳಿಸಿದ್ದರು ಮತ್ತು ಹಝ್ರತ್ ಹಮ್‌ಝ ರಝಿಯಲ್ಲಾಹು ಅನ್‌ಹುರವರ ಯಕೃತನ್ನು ಸಹ ಬಾಯಲ್ಲಿ ಹಾಕಿ ಜಗಿದರು. ಆದರೆ ಹಝ್ರತ್ ಪೈಗಂಬರ್ ಅದರ ಬಗ್ಗೆ ಪ್ರತೀಕಾರ ಮಾಡಲು ಎಂದೂ ಯೋಚಿಸಿರಲಿಲ್ಲ. ಅವರು ಯಾವಾಗಲೂ ವಿರೋಧಿಗಳೊಂದಿಗೆ ಉತ್ತಮವಾಗಿ ವರ್ತಿಸಿದರು.

ಹಝ್ರತ್ ಹಸನ್ ಬಿನ್ ಅಸ್‌ವದ್(ರ) ವಿವರಿಸುತ್ತಾರೆ: ಒಂದು ಯುದ್ಧದ ಸಂದರ್ಭದಲ್ಲಿ ಕೊಲ್ಲಲ್ಪಟ್ಟವರ ಮೃತ ಶರೀರಗಳೊಂದಿಗೆ ಕೆಲವು ಮಕ್ಕಳ ಶವಗಳೂ ಇದ್ದುವು. ಹಝ್ರತ್ ಪೈಗಂಬರರು ಅದರ ಬಗ್ಗೆ ವಿಚಾರಿಸಿದಾಗ ಒಬ್ಬ ವ್ಯಕ್ತಿ ಹೇಳಿದನು: ಅಲ್ಲಾಹನ ಪೈಗಂಬರರೇ, ಅವು ಬಹುದೇವಾರಾಧಕರ ಮಕ್ಕಳ ಶವಗಳೇ ಆಗಿವೆ. ಆಗ ಹಝ್ರತ್ ಪೈಗಂಬರ್ ಹೇಳಿದರು: ಇಂದು ನಿಮ್ಮ ಪೈಕಿ ಅತ್ಯುತ್ತಮರಾಗಿ ಗಣಿಸಲ್ಪಡುವವರು ಹಿಂದೆ ಬಹುದೇವಾರಾಧಕರ ಮಕ್ಕಳೇ ಆಗಿದ್ದರು. ನೀವು ನೆನಪಿಟ್ಟುಕೊಳ್ಳಿರಿ. ಶಿಶು ಹುಟ್ಟುವಾಗ ಒಳ್ಳೆಯ ಪ್ರಕೃತಿ ಹೊಂದಿಯೇ ಜನಿಸುತ್ತವೆ. ಅನಂತರ ಅವರ ತಂದೆ ತಾಯಂದಿರು ಅದನ್ನು ಯಹೂದಿಯನ್ನಾಗಿ ಅಥವಾ ಕ್ರೈಸ್ತನನ್ನಾಗಿ ಮಾಡುತ್ತಾರೆ. (ಮುಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–6, ಪುಟ–24, ಬೈರೂತ್ ಮುದ್ರಣ).

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಾಜ್ಯಾಧಿಪತಿಯಾಗಿ ಪ್ರಕಟಿಸಿದ ಎರಡನೆಯ ವೈಶಿಷ್ಟ್ಯ ಪರಿಪೂರ್ಣ ನ್ಯಾಯಪಾಲನೆಯಾಗಿದೆ. ಅದು ಜಾಗತಿಕ ಶಾಂತಿಗೆ ಖಾತರಿ ನೀಡುತ್ತದೆ. ಇಂದು ಲೋಕದಲ್ಲಿ ಕಾಣುತ್ತಿರುವ ಸಂಘರ್ಷ ಮತ್ತು ಅಶಾಂತಿಗೆ ಬಹಳ ದೊಡ್ಡ ಕಾರಣವಾಗಿರುವುದು ನ್ಯಾಯಪಾಲನೆಯ ಕೊರತೆಯಾಗಿದೆ. ಇಸ್ಲಾಮ್ ತನ್ನವರೊಂದಿಗೆ ಮಾತ್ರವಲ್ಲ ಅನ್ಯರೊಂದಿಗೆ ಮತ್ತು ಶತ್ರುಗಳೊಂದಿಗೆ ಸಹ

ನ್ಯಾಯ ನಿಷ್ಠೆಯಿಂದ ವರ್ತಿಸಬೇಕೆಂದು ಉಪದೇಶ ನೀಡುತ್ತದೆ. ಇದರ ಬಗ್ಗೆ ಹಝ್ರತ್ ಪೈಗಂಬರರ ಜೀವನ ಚರಿತ್ರೆ ಅಪ್ರತಿಮ ಉದಾಹರಣೆಗಳಿಂದ ಅಲಂಕೃತವಾಗಿವೆ. ಸಮಯದ ಕೊರತೆಯ ಕಾರಣ ಕೆಲವು ಉದಾಹರಣೆಗಳನ್ನು ಮಾತ್ರ ನೀಡುವೆನು.

ಯಾವ ಕೋಮುಗಳಲ್ಲಿ ಸದಾಚಾರ ಅಧಃಪತನ ಹೊಂದಲು ಪ್ರಾರಂಭವಾಗುತ್ತಿದೆಯೋ ಅದರಲ್ಲಿ ಪಕ್ಷಪಾತ ಮತ್ತು ಅನ್ಯಾಯ ಪ್ರಾರಂಭವಾಗುತ್ತದೆ. ಹೀಗೆ ಸಂಭವಿಸುತ್ತದೆ: ದೊಡ್ಡ ಜನರು ನಿಯಮಗಳನ್ನು ಉಲ್ಲಂಘಿಸಿದರೂ ರಕ್ಷಿಸಲ್ಪಡುತ್ತಾರೆ. ಬಡವರು ಮತ್ತು ನಿರ್ಗತಿಕರು ಮಾತ್ರ ಶಿಕ್ಷಿಸಲ್ಪಡುತ್ತಾರೆ. ಆದರೆ ಹಝ್ರತ್ ಪೈಗಂಬರರು ರಹಮತುನ್ ಲಿಲ್ ಆಲಮೀನ್. ಸಕಲ ಲೋಕಗಳಿಗೆ ಅನುಗ್ರಹವಾಗಿ ಆಗಮಿಸಿದರು. ಅವರು ಅತ್ಯಂತ ಕಾರುಣ್ಯಮಯರಾಗಿದ್ದರೂ ಶರೀಅತ್ ನಿಯಮಗಳನ್ನು ಜಾರಿಗೊಳಿಸುವ ಬಗ್ಗೆ ಅತ್ಯಂತ ಅಭಿಮಾನ ಹೊಂದಿದ್ದರು. ಅವರು ನ್ಯಾಯಪಾಲನೆಯನ್ನು ಎಂದೂ ಕೈ ಬಿಟ್ಟಿರಲಿಲ್ಲ. ಬುಖಾರಿ ಶರೀಫಿನಲ್ಲಿ ಹಝ್ರತ್ ಆಯಿಶ ರಳಿಯಲ್ಲಾಹು ಅನ್‌ಹಾರಿಂದ ಹೀಗೆ ವರದಿಯಾಗಿದೆ: ಬನೀ ಮಖ್‌ಝೂಮ್ ಗೋತ್ರದ ಫಾತಿಮ ಎಂಬ ಹೆಸರಿನ ಸ್ತ್ರೀ ಕದ್ದಿದ್ದಳು. ಈ ಸ್ತ್ರೀಯ ಅಪರಾಧಕ್ಕೆ ಸಂಬಂಧಿಸಿ ಮೃದುವಾಗಿ ವರ್ತಿಸಲು ಶಿಫಾರಸು ಮಾಡಲು ಆ ಗೋತ್ರದ ಜನರು ಇಚ್ಛಿಸಿದರು. ಅವರು ಹಝ್ರತ್ ಪೈಗಂಬರರ ಪ್ರೀತಿಗೆ ಬಹಳ ಪಾತ್ರರಾಗಿದ್ದ ಉಸಾಮ ಬಿನ್ ಝೈದರನ್ನು ಹಝ್ರತ್ ಪೈಗಂಬರರ ಬಳಿಗೆ ಕಳುಹಿಸಿ ಆ ಅಪರಾಧಿಗೆ ಸಂಬಂಧಿಸಿ ಮೃದುವಾಗಿ ವರ್ತಿಸಲು ಅಪೇಕ್ಷೆ ಸಲ್ಲಿಸುವಂತೆ ಮಾಡಿದರು. ಆಗ ಹಝ್ರತ್ ಪೈಗಂಬರರು ಅಪೇಕ್ಷೆಯನ್ನು ಆಲಿಸಿದಾಗ ಸಿಟ್ಟಿನಿಂದ ಅವರ ಮುಖ ಕೆಂಪಗೆ ಆಯಿತು. ಅವರು ಹೇಳಿದರು: ಬನೀ ಇಸ್ರಾಈಲ್ ಜನರ ಸ್ವಭಾವ ಹೇಗಿತ್ತೆಂದರೆ ಅವರ ಪೈಕಿ ಗಣ್ಯರಾದ ಯಾರಾದರೂ ಕದ್ದರೆ ಅವನನ್ನು ಶಿಕ್ಷಿಸದೆ ಬಿಟ್ಟುಬಿಡುತ್ತಿದ್ದರು. ಆದರೆ ಬಡವನು ಕದ್ದರೆ ಅವನ ಕೈ ಕಡಿದು ಹಾಕುತ್ತಿದ್ದರು. ಆದರೆ ನನ್ನ ಸ್ಥಿತಿ ಹೇಗಿದೆ ಎಂದರೆ ನನ್ನ ಜೀವ ಯಾರ ಕೈಯ್ಯಲ್ಲಿದೆಯೋ ಅವನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇನೆ. ಮುಹಮ್ಮದನ ಪುತ್ರಿ ಫಾತಿಮ ಸಹ ಕದ್ದರೂ ನಾನು ಅವಳ ಕೈ ಕಡಿದು ಹಾಕುವೆ.

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್.

ಎರಡನೆಯ ಸಂಭವ ಹೀಗಿದೆ: ಬದರ್ ಯುದ್ಧದಲ್ಲಿ ಸೆರೆ ಹಿಡಿಯಲಾದ ಮಕ್ಕದ ಬಹುದೇವಾರಾಧಕರಲ್ಲಿ ಹಝ್ರತ್ ಪೈಗಂಬರರ ಚಿಕ್ಕಪ್ಪ ಅಬ್ಬಾಸ್(ರ) ಸಹ ಇದ್ದರು. ಸೆರೆಯಾಳುಗಳ ಮೇಲ್ವಿಚಾರಣೆ ಹಝ್ರತ್ ಉಮರ್(ರ)ರಿಗೆ ವಹಿಸಿ ಕೊಡಲಾಗಿತ್ತು. ಅವರು ಹಝ್ರತ್ ಅಬ್ಬಾಸ್(ರ) ಸಹಿತ ಎಲ್ಲ ಕೈದಿಗಳ ಹಗ್ಗದ ಕಟ್ಟುಗಳನ್ನು ಚೆನ್ನಾಗಿ ಬಿಗಿದು ಕಟ್ಟಿದರು. ಕೈದಿಗಳನ್ನು ಮಸ್‌ಜಿದ್ ನಬವಿಯ ಬಳಿಯಲ್ಲಿ ಇರಿಸಲಾಗಿತ್ತು. ಹಝ್ರತ್ ಅಬ್ಬಾಸ್ ನೋವಿನಿಂದ ನರಳುತ್ತಿದ್ದರು. ಹಝ್ರತ್ ಪೈಗಂಬರರಿಗೆ ಈ ನರಳಾಟ ಕೇಳಿಸಿದಾಗ ಅವರ ಮನನೊಂದು ಅವರಿಗೆ ನಿದ್ರೆ ಬರಲಿಲ್ಲ. ಅನ್‌ಸಾರ್‌ಗಳಿಗೆ ಅದರ ಬಗ್ಗೆ ತಿಳಿಯಿತು. ಆಗ ಅವರು ಹಝ್ರತ್ ಅಬ್ಬಾಸರ ಹಗ್ಗದ ಕಟ್ಟುಗಳನ್ನು ಸಡಿಲಗೊಳಿಸಿದರು. ಆಗ ಅವರ ನರಳಾಟ ನಿಂತಿತು.ಆಗ ಹಝ್ರತ್ ಪೈಗಂಬರ್ ವಿಚಾರಿಸಿದರು. ಅಬ್ಬಾಸರ ನರಳಾಟ ಏಕೆ ಕೇಳಿಸುವುದಿಲ್ಲ. ಸಹಾಬರು ಹೇಳಿದರು: ಅಲ್ಲಾಹನ ಪೈಗಂಬರರೇ, ನಾವು ತಮ್ಮ ಕಷ್ಟವನ್ನು ಕಂಡು ಅವರ ಹಗ್ಗದ ಕಟ್ಟುಗಳನ್ನು ಸಡಿಲಗೊಳಿಸಿದೆವು. ಹಝ್ರತ್ ಪೈಗಂಬರರು ಹೇಳಿದರು: ನೀವು ಮಾಡಿದುದು ಅನ್ಯಾಯವಾಗಿಯಾಗಿದೆ. ನೀವು ಎಲ್ಲ ಕೈದಿಗಳ ಹಗ್ಗಗಳನ್ನು ಸಡಿಲಗೊಳಿಸಿರಿ ಅಥವಾ ಅಬ್ಬಾಸರ ಹಗ್ಗದ ಕಟ್ಟುಗಳನ್ನು ಬಿಗಿಗೊಳಿಸಿರಿ. ಆಗ ಸಹಾಬರು ಎಲ್ಲ ಕೈದಿಗಳ ಕಟ್ಟುಗಳನ್ನು ಸಡಿಲಗೊಳಿಸಿದರು.

ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಅತ್ಯುತ್ತಮ ಮಾದರಿ ವರ್ತನೆಯಿಂದ ಈ ಮಹತ್ವಪೂರ್ಣ ಅಂಶವನ್ನು ಮನವರಿಕೆ ಮಾಡಿಕೊಟ್ಟರು, ಒಬ್ಬ ಜಯಶಾಲಿ ನಾಯಕ ಮತ್ತು ಒಬ್ಬ ಜಯಶಾಲಿ ಅಧಿಪತಿಗೆ ಆವಶ್ಯಕವಾದುದೇನೆಂದರೆ ಪ್ರತಿಯೊಂದು ಸೂಕ್ಷ್ಮ ಸಂದರ್ಭದಲ್ಲಿ ತನ್ನ ಸಮುದಾಯಕ್ಕೆ ಮಾರ್ಗದರ್ಶನ ನೀಡಲು ಪ್ರತಿ ಸಮಯದಲ್ಲಿ ಸಿದ್ಧನಾಗಿರಬೇಕು. ಸಾಧ್ಯವಿರುವಷ್ಟು ಮಟ್ಟಿಗೆ ಆವಶ್ಯಕ ಸ್ಥಳದಲ್ಲಿ ತಲಪಿ ಮಾರ್ಗದರ್ಶನ ನೀಡಿ ಸಮುದಾಯಕ್ಕೆ ಧೈರ್ಯ ನೀಡಬೇಕು. ಈ ವಿಷಯಕ್ಕೆ ಸಂಬಂಧಿಸಿ ಕೇವಲ ಒಂದು ಘಟನೆಯನ್ನು ವಿವರಿಸುತ್ತೇನೆ.

ಕಂದಕ ಯುದ್ಧದ ಸಂದರ್ಭದಲ್ಲಿ ಭದ್ರತೆ ಮತ್ತು ಯುದ್ಧ ವ್ಯೂಹದ ದೃಷ್ಟಿಯಿಂದ ಮದೀನದ ಸುತ್ತು ಮುತ್ತು ಕಂದಕ ತೋಡಲಾಗುತ್ತಿತ್ತು. ಸಹಾಬರ ಸ್ಥಿತಿ ಹೇಗಿತ್ತೆಂದರೆ ಹಸಿವಿನ ಕಷ್ಟವನ್ನು ತಗ್ಗಿಸಲು ಹೊಟ್ಟೆಯ ಮೇಲೆ ಕಲ್ಲು ಕಟ್ಟುತ್ತಿದ್ದರು. ಕಂದಕವನ್ನು ಅಗೆಯುವಾಗ ಒಂದು ಬಂಡೆಕಲ್ಲು ಒಡೆಯಲಾಗುತ್ತಿರಲಿಲ್ಲ. ಸಹಾಬರು ಹಝ್ರತ್ ಪೈಗಂಬರರ ಬಳಿಗೆ ಹೋಗಿ ಆ ವಿಷಯ ತಿಳಿಸಿದರು. ಹಝ್ರತ್ ಪೈಗಂಬರ್ ತಕ್ಷಣ ಅಲ್ಲಿಗೆ ತಲಪಿದರು. ಅವರು ಸಹ ಹಸಿವನ್ನು ತಗ್ಗಿಸಲು ಹೊಟ್ಟೆಯ ಮೇಲೆ ಕಲ್ಲು ಕಟ್ಟಿದ್ದರು. ಆ ಸ್ಥಿತಿಯಲ್ಲಿಯೂ ಹಝ್ರತ್ ಪೈಗಂಬರ್ ಗುದ್ದಲಿಯನ್ನು ಎತ್ತಿ ಆ ಬಂಡೆಗಲ್ಲಿನ ಮೇಲೆ ಮೂರು ಸಾರಿ ಹೊಡೆದು ಅದನ್ನು ಪುಡಿ ಪುಡಿ ಮಾಡಿದರು. ಅಲ್ಲಾಹನು ಆ ಬಲಹೀನತೆಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಪ್ರತಿಯೊಂದು ಹೊಡೆತ ಹೊಡೆದಾಗ ಬೃಹತ್ ಸಾಮ್ರಾಜ್ಯಗಳ ಮೇಲೆ ಮುಸ್ಲಿಮರು ಜಯಗಳಿಸುವ ಅದ್ಭುತ ದೃಶ್ಯಗಳನ್ನು ಹಝ್ರತ್ ಪೈಗಂಬರರಿಗೆ ಅಲ್ಲಾಹನು ತೋರಿಸಿದನು. ಪ್ರತಿ ಹೊಡೆತ ಹೊಡೆದಾಗ ಹಝ್ರತ್ ಪೈಗಂಬರರು ಅಲ್ಲಾಹು ಅಕ್ಬರ್ ಎಂದು ಘೋಷಿಸಿ ಶಾಮ್, ಇರಾನ್, ಸನಾ ಮತ್ತು ಯಮನ್‌ಗಳ ಅರಮನೆಗಳ ಕೀಲಿಗೈಗಳು ನನಗೆ ನೀಡಲ್ಪಟ್ಟವು ಎಂದು ಸಹಾಬರೊಂದಿಗೆ ಹೇಳಿದರು.

ಹಝ್ರತ್ ಪೈಗಂಬರರ ಜೀವಿತ ಕಾಲದಲ್ಲಿಯೇ ಇಸ್ಲಾಮ್ ಅರಬ್ ದೇಶದಲ್ಲಿ ಜಯಗಳಿಸಿತು. ಅವರು ನಿಧನ ಹೊಂದಿ ಒಂಭತ್ತು ವರ್ಷ ದಾಟುವವದೊಳಗೆ ಎಲ್ಲ ಅರಬ್ ದೇಶಗಳಲ್ಲಿ ಮುಸ್ಲಿಮರ ಆಡಳಿತೆ ಸ್ಥಾಪಿತವಾಯಿತು.

ಹಝ್ರತ್ ಪೈಗಂಬರರ ಇನ್ನೊಂದು ಮಹತ್ವಪೂರ್ಣ ವೈಶಿಷ್ಟ್ಯವೇನೆಂದರೆ ಅವರು ಮದೀನ ನಗರ ರಾಜ್ಯದ ಅಧಿಪತಿಯಾಗುವ ಮೊದಲಿನ ಅವರ ಜೀವಿತ ಮತ್ತು ಅನಂತರದ ಜೀವಿತದಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಮಕ್ಕದಲ್ಲಿ ಅವರು ಜೀವಿಸಿದ ಕಾಲದಲ್ಲಿದ್ದ ಅವರು ಜೀವಿಸಿದ ಸರಳ ಜೀವನ ಅವರು ಮದೀನದ ಅಧಿಪತಿಯಾದಾಗಲೂ ಮುಂದುವರಿಯಿತು.

ಆ ಕಾಲದಲ್ಲಿ ಇರಾನಿನ ಸಾಮ್ರಾಜ್ಯದ ಸಾಮ್ರಾಟರ ವೈಭವ ಭರಿತ ಆಡಳಿತೆ ಏಷ್ಯಾವನ್ನು ಆವರಿಸಿತ್ತು. ಇನ್ನೊಂದು ಕಡೆ ರೋಮಿನ ಸರಕಾರ ತನ್ನ ಪಾಶ್ಚಿಮಾತ್ಯ ವೈಭವ ಮತ್ತು ಸುಖ ಭೋಗದ ಉದಾಹರಣೆ ಪ್ರದರ್ಶಿಸುತ್ತಿತ್ತು. ಆ ಎರಡು ಸರಕಾರಗಳ ಮಧ್ಯೆ ಅರಬ್ ದೇಶದ ಗೋತ್ರಗಳು ಗುಲಾಮರ ಸೇವೆ ಪಡೆಯುತ್ತಾ ತಮ್ಮ ಸಾಮರ್ಥ್ಯಕ್ಕೆ ಮಿಗಿಲಾಗಿ ತಮ್ಮ ಐಶ್ವರ್ಯ ಪ್ರದರ್ಶಿಸಲು ಪ್ರಯತ್ನಿಸುತ್ತಾ ಇದ್ದುವು.

ಇಂತಹ ಪರಿಸರದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅತ್ಯಂತ ಸರಳವಾದ ಜೀವಿತದಲ್ಲಿ ಯಾವುದೇ ಬದಲಾವಣೆ ಕಂಡು ಬರಲಿಲ್ಲ. ಅವರು ಮದೀನದ ಜನರ ಸುಖ ಸೌಕರ್ಯಕ್ಕೋಸ್ಕರ ಮತ್ತು ಅವರ ಸ್ಥಿತಿಯನ್ನು ಉತ್ತಮಪಡಿಸಲು ಚಿಂತಿಸುತ್ತಾ ತಮಗೆ ಮತ್ತು ತಮ್ಮ ಕುಟುಂಬದವರಿಗೆ ಹೆಚ್ಚಿನ ಅನುಕೂಲತೆಗಳೇನನ್ನೂ ಒದಗಿಸಲಿಲ್ಲ. ಅವರು ಮನೆಗೆಲಸಕ್ಕೋಸ್ಕರ ಕೆಲಸಗಾರರನ್ನು ನೇಮಿಸಲಿಲ್ಲ. ಮನೆಯವರು ಸ್ವತಃ ಎಲ್ಲ ಕೆಲಸ ಮಾಡುತ್ತಿದ್ದರು. ಹಝ್ರತ್ ಆಯಿಶ(ರ)ರೊಂದಿಗೆ ಕೇಳಲಾಯಿತು: ಹಝ್ರತ್ ಪೈಗಂಬರರು ಮನೆಯಲ್ಲಿ ಏನು ಮಾಡುತ್ತಿದ್ದರು ಎಂದು. ಹಝ್ರತ್ ಆಯಿಶ(ರ) ಹೇಳಿದರು: ಯಕೂನು ಫೀ ಮಿಹ್‌ನತಿ ಅಹ್‌ಲಿಹೀ ಫ ಇಝಾ ಹಝರತಿಸ್ಸಲಾತು ಖರಜ ಇಲಸ್ಸಲಾತಿ. ಮನೆಯಲ್ಲಿ ಮನೆಯವರ ಕೆಲಸದಲ್ಲಿ ಜೊತೆ ಸೇರಿ ದುಡಿಯುತ್ತಿದ್ದರು. ನಮಾಝ್‌ಗೆ ಸಮಯವಾದಾಗ ಮನೆಯಿಂದ ಹೊರಗೆ ಹೋಗುತ್ತಿದ್ದರು. (ಬುಖಾರಿ ಕಿತಾಬುಸ್ಸಲಾತ್)

ಇದು ಎಂತಹ ಅಪ್ರತಿಮ ಉದಾಹರಣೆಯಾಗಿದೆ. ದೊರೆಯಾಗಿದ್ದಾಗ ತನ್ನ ಮನೆಗೆಲಸಕ್ಕೆ ಒಬ್ಬ ಕೆಲಸಗಾರನನ್ನೂ ಇರಿಸಲಿಲ್ಲ ಎಂಬ ಈ ಉದಾಹರಣೆ ಬೇರೆ ಯಾರ ಬಗ್ಗೆಯಾದರೂ ತೋರಿಸಲು ಸಾಧ್ಯವೇ. ಅವರು ಅರಬ್ ದೇಶದ ದೊರೆಯಾಗಿದ್ದಾಗ ಲಕ್ಷಾಂತರ ರೂಪಾಯಿಗಳನ್ನೂ ಹಿಂಡು ಗಟ್ಟಲೆ ಜಾನುವಾರುಗಳನ್ನೂ ಬಡ ಜನರಿಗೆ ಹಂಚುತ್ತಿದ್ದರು. ಒಮ್ಮೆ ಅವರ ಬಳಿಗೆ ಎಪ್ಪತ್ತು ಸಾವಿರ ದಿರ್‌ಹಮ್ ತರಲಾಯಿತು. ಇನ್ನೊಂದು ವರದಿ ಪ್ರಕಾರ ತೊಂಬತ್ತು ಸಾವಿರ ದಿರ್‌ಹಮ್ ತರಲಾಯಿತು. ಅವರು ಈ ಹಣವನ್ನು ಹಂಚಿದ ನಂತರವೇ ನೆಮ್ಮದಿ ಪಡೆದರು. (ಅಲ್ ವಫಾ ಬಿ ಅಹ್‌ವಾಲಿಲ್ ಮುಸ್ತಫಾ ಇಬ್ನುಲ್ ಜೂಝಿ ಪುಟ 447 ಬೈರೂತ್).

ಒಮ್ಮೆ ಹಝ್ರತ್ ಪೈಗಂಬರರ ಬಳಿಗೆ ಒಬ್ಬ ವ್ಯಕ್ತಿ ಆಗಮಿಸಿದನು. ಆಡುಗಳಿಂದ ತುಂಬಿದ ಒಂದು ಕಣಿವೆ ಪ್ರದೇಶವನ್ನು ಅವನಿಗೆ ಹಝ್ರತ್ ಪೈಗಂಬರ್ ನೀಡಿದರು. ಆ ನವ ಮುಸ್ಲಿಮ್ ಕಣಿವೆ ಪ್ರದೇಶದ ಮಧ್ಯದಲ್ಲಿರುವ ಜಮೀನನ್ನು ಆವಶ್ಯಪಟ್ಟನು. ಹಝ್ರತ್ ಪೈಗಂಬರರು ಹುಲ್ಲುಗಾವಲು ಪ್ರದೇಶವನ್ನೂ ಆಡುಗಳ ಹಿಂಡನ್ನೂ ಅವನಿಗೆ ಕೊಟ್ಟರು. ಅವನು ತನ್ನ ಕೋಮಿನವರ ಬಳಿಗೆ ಹೋಗಿ ಹೇಳಿದನು: ನೀವೆಲ್ಲರೂ ಮುಸ್ಲಿಮರಾಗಿರಿ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟು ಕೊಡುತ್ತಾರೆಂದರೆ ಬಡತನದ ಬಗ್ಗೆ ಎಂದೂ ಹೆದರಬೇಕಾಗಿಲ್ಲ. (ಮಜ್‌ಮ ಉ ಝ್ಝ್ವಾಯಿದ್ ಹೈಸಮಿ ಸಂಪುಟ 9 ಪುಟ 13 ಬೈರೂತ್).

ಅವರು ಸಾರ್ವಜನಿಕ ಖಜಾನೆಯಿಂದ ತಮ್ಮನ್ನು ಮತ್ತು ತಮ್ಮ ಕುಟುಂಬದವರನ್ನು ಅದರಿಂದ ಲಾಭ ಪಡೆಯುವುದರಿಂದ ಯಾವಾಗಲೂ ತಡೆದಿದ್ದರು. ಒಮ್ಮೆ ಅವರ ಪುತ್ರಿಯ ಪುತ್ರ ಹಝ್ರತ್ ಇಮಾಮ್ ಹುಸೈನ್ ಬಾಲಕನಾಗಿದ್ದಾಗ ಖರ್ಜೂರದ ರಾಶಿಯಿಂದ ಒಂದೆರಡು ಖರ್ಜೂರ ತೆಗೆದು ಬಾಯಿಯಲ್ಲಿ ಹಾಕಿದಾಗ ತಕ್ಷಣ ಹಝ್ರತ್ ಪೈಗಂಬರರು ತನ್ನ ಬೆರಳನ್ನು ತನ್ನ ಮೊಮ್ಮಗನ ಬಾಯಿಗೆ ಹಾಕಿ ಆ ಖರ್ಜೂರ ಹೊರಗೆ ಹಾಕಿ ಹೇಳಿದರು:

ಇದು ಸದಖ ನೀಡಲು ತರಲಾದ ಖರ್ಜೂರವಾಗಿದೆ. ಸದಖದ ವಸ್ತು ನಮಗೆ ಉಪಯೋಗಿಸುವುದು ಧರ್ಮಬದ್ಧವಲ್ಲ.

ಹಝ್ರತ್ ಪೈಗಂಬರರ ಮನೆಯ ಸ್ಥಿತಿಯ ಬಗ್ಗೆ ಹಝ್ರತ್ ಆಯಿಶ(ರ) ತನ್ನ ಸಹೋದರಿ ಪುತ್ರ ಹಝ್ರತ್ ಉರ್‌ವರೊಂದಿಗೆ ಹೇಳಿದರು: ಓ ನನ್ನ ಸಹೋದರಿ ಪುತ್ರ, ನಾವು ಒಂದು ಹಿಲಾಲ್ (ಪ್ರಥಮ ಚಂದ್ರ) ನೋಡಿದ ನಂತರ ಇನ್ನೊಂದು ಹಿಲಾಲ್ ನೋಡುತ್ತಿದ್ದೆವು. ಮೂರು ಮೂರು ಹಿಲಾಲ್ ನೋಡುತ್ತಿದ್ದೆವು. ಎಂದರೆ ಎರಡು ತಿಂಗಳು ದಾಟಿ ಹೋಗುತ್ತಿದ್ದುವು. ಹಝ್ರತ್ ಪೈಗಂಬರರ ಮನೆಯಲ್ಲಿ ಒಲೆ ಹೊತ್ತಿಸುತ್ತಿರಲಿಲ್ಲ. ಹಝ್ರತ್ ಉರ್‌ವ ವರದಿ ಮಾಡುತ್ತಾರೆ: ನಾನು ಕೇಳಿದೆ: ಓ ಚಿಕ್ಕಮ್ಮ ನೀವು ತಿನ್ನುತ್ತಿದ್ದುದಾದರೂ ಏನು. ಹಝ್ರತ್ ಆಯಿಶ(ರ) ಹೇಳಿದರು: ಅಸ್‌ವದಾನ ಎಂದರೆ ಖರ್ಜೂರ ಮತ್ತು ನೀರು ಭಕ್ಷಿಸಿ ಜೀವಿಸುತ್ತಿದ್ದೆವು. ಆದರೆ ಮನೆಯ ಸುತ್ತು ಮುತ್ತು ಇದ್ದ ಅನ್‌ಸಾರ್‌ಗಳ ಬಳಿ ಹಾಲು ಕೊಡುವ ಆಡುಗಳಿದ್ದುವು. ಅವರು ಹಾಲನ್ನು ಉಚಿತವಾಗಿ ಹಝ್ರತ್ ಪೈಗಂಬರರಿಗೆ ಕೊಡುತ್ತಿದ್ದರು. ಆ ಹಾಲನ್ನು ಹಝ್ರತ್ ಪೈಗಂಬರ್ ನಮಗೆ ಕೊಡುತ್ತಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಿಯ ಪುತ್ರಿ ಹಝ್ರತ್ ಫಾತಿಮ(ರ)ರವರ ಸ್ಥಿತಿ ಹೇಗಿತ್ತೆಂದರೆ ಮನೆಯಲ್ಲಿ ಬೀಸುಗಲ್ಲು ಚಲಾಯಿಸುತ್ತಾ ಅವರ ಕೈಗಳಲ್ಲಿ ಬೊಕ್ಕೆಗಳೇಳುತ್ತಿದ್ದುವು. ಹಝ್ರತ್ ಪೈಗಂಬರರ ಬಳಿಗೆ ಕೆಲವು ಗುಲಾಮರನ್ನು ತರಲಾಗಿದೆ ಎಂದು ಅರಿತಾಗ ಅವರು ಹಝ್ರತ್ ಪೈಗಂಬರರೊಂದಿಗೆ ತನ್ನ ಕೆಲಸ ಮಾಡಲು ಒಬ್ಬ ಗುಲಾಮನನ್ನು ತನಗೆ ನೀಡಲು ಅಪೇಕ್ಷಿಸಿದರು. ಹಝ್ರತ್ ಪೈಗಂಬರರು ರಾತ್ರಿ ಹೊತ್ತು ತನ್ನ ಮಗಳ ಮತ್ತು ಅಳಿಯನ ಬಳಿಗೆ ಹೋಗಿ ಹೇಳಿದರು: ನಾನು ನಿಮಗೆ ನೀವು ಬೇಡಿದುದಕ್ಕಿಂತ ಉತ್ತಮವಾದುದರ ಬಗ್ಗೆ ತಿಳಿಸಲಿಯೋ? ನೀವು ನಿಮ್ಮ ಹಾಸಿಗೆಯಲ್ಲಿ ಮಲಗಿ 33 ಸಾರಿ ಸುಬ್‌ಹಾನಲ್ಲಾಹ್ 33 ಸಾರಿ ಅಲ್‌ಹಮ್‌ದುಲಿಲ್ಲಾಹ್ ಮತ್ತು 34 ಸಾರಿ ಅಲ್ಲಾಹು ಅಕ್‌ಬರ್ ಹೇಳಿರಿ. ಅದು ನಿಮಗೆ ಸೇವಕನಿಗಿಂತ ಉತ್ತಮವಾಗಿದೆ.

ಒಂದು ವಿಷಯ ಪ್ರಸ್ತಾಪಿಸಲು ಅರ್ಹವಾಗಿದೆ, ಹಝ್ರತ್ ಪೈಗಂಬರರ ಬಳಿಗೆ ಸಾರ್ವಜನಿಕ ಖಜಾನೆಗೆ ಸೇರಿಸಬೇಕಾದ ಹಣ ಬಂದಾಗ ಅವರು ಅದರಿಂದ ತನ್ನ ವೈಯ್ಯಕ್ತಿಕ ಆವಶ್ಯಕತೆಗೆ ಬಳಸುವುದು ಪಾಪಕೃತ್ಯ ಎಂದು ಭಾವಿಸುತ್ತಿದ್ದರು. ಆದರೆ ಅವರ ಬಳಿಗೆ ಅವರ ಸ್ವಂತ ಉಪಯೋಗಕ್ಕೆ ಬಳಸಬಹುದಾದ ಹಣ ಸಹ ಬರುತ್ತಿತ್ತು. ಸಹಾಬರು ತಮ್ಮ ನಿಷ್ಠೆ ಮತ್ತು ಪ್ರೀತಿಯ ಕಾರಣದಿಂದ ಬಹಳ ಪಾರಿತೋಷಿಕ ನೀಡುತ್ತಿದ್ದರು. ಆ ಹಣವನ್ನು ಹಝ್ರತ್ ಪೈಗಂಬರರು ತಮ್ಮ ಸ್ವಂತ ಆವಶ್ಯಕತೆಗಳಿಗೆ ಮತ್ತು ಕುಟುಂಬದ ಆವಶ್ಯಕತೆಗಳಿಗೆ ಬಳಸಬೇಕೆಂದು ವಿನಂತಿಸುತ್ತಿದ್ದರು. ಹಝ್ರತ್ ಪೈಗಂಬರರು ತಮ್ಮ ಕುಟುಂಬದವರ ಮುಂದಿನ ಜೀವಿತಕ್ಕೋಸ್ಕರ ಸಾಕಷ್ಟು ಹಣವನ್ನು ಜಮಾಯಿಸಿ ಇಡುತ್ತಿದ್ದರೂ ಅದು ಆಕ್ಷೇಪಾರ್ಹವಾಗಿರಲಿಲ್ಲ. ಆದರೆ ಹಝ್ರತ್ ಪೈಗಂಬರರು ನಿಧನ ಹೊಂದಿದಾಗ ಅವರ ಮನೆಯ ಸ್ಥಿತಿ ಹೇಗಿತ್ತೆಂದು ಅಮರ್ ಬಿನ್ ಹಾರಿಸ್‌ರವರ ಈ ವರದಿಯಿಂದ ಸ್ಪಷ್ಟವಾಗುತ್ತದೆ. ಅವರು ಹೇಳುತ್ತಾರೆ: ಹಝ್ರತ್ ಪೈಗಂಬರರು ನಿಧನ ಹೊಂದುವಾಗ ಏನನ್ನೂ ಬಿಟ್ಟು ಹೋಗಲಿಲ್ಲ – ದಿರ್‌ಹಮ್ ಆಗಲಿ ದೀನಾರ್ ಆಗಲಿ ಗುಲಾಮನನ್ನಾಗಲಿ, ಸ್ತ್ರೀ ಗುಲಾಮನನ್ನಾಗಲಿ ಬಿಟ್ಟುಹೋಗಲಿಲ್ಲ–ಒಚಿದು ಬಿಳಿ ಹೇಸರಗತ್ತೆ, ಅವರ ಆಯುಧಗಳು ಮತ್ತು ಸದಖವಾಗಿ ನೀಡಿದ ಒಂದು ತುಂಡು ಭೂಮಿಯ ಹೊರತು.

ಹಝ್ರತ್ ಸಹ್‌ಲ್ ಬಿನ್ ಸಅದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರು ಏಳು ದೀನಾರ್‌ಗಳನ್ನು ಹಝ್ರತ್ ಆಯಿಶ(ರ) ಬಳಿ ಇರಿಸಿದ್ದರು. ಅವರು ತನ್ನ ಕೊನೆಯ ದಿನಗಳಲ್ಲಿ ಹೇಳಿದರು: ಆಯಿಶ, ನಿನ್ನ ಬಳಿ ಇರುವ ಚಿನ್ನದ ನಾಣ್ಯ ಏನಾಯಿತು. ಅವರು ಹೇಳಿದರು: ಅವು ನನ್ನ ಬಳಿ ಇವೆ. ಹಝ್ರತ್ ಪೈಗಂಬರ್ ಹೇಳಿದರು: ಅವುಗಳನ್ನು ಸದಖವಾಗಿ ಕೊಡು. ಅನಂತರ ಅವರು ಪ್ರಜ್ಞಾಶೂನ್ಯರಾದರು. ಹಝ್ರತ್ ಆಯಿಶ ಅವರೊಂದಿಗೆ ಇದ್ದರು. ಪ್ರಜ್ಞೆ ಮರಳಿ ಬಂದಾಗ ಹಝ್ರತ್ ಪೈಗಂಬರ್ ಕೇಳಿದರು: ಆ ಚಿನ್ನದ ನಾಣ್ಯ ಸದಖವಾಗಿ ನೀಡಿದೆಯೋ? ಹಝ್ರತ್ ಆಯಿಶ ಹೇಳಿದರು: ಇನ್ನೂ ಇಲ್ಲ. ಹಝ್ರತ್ ಪೈಗಂಬರ್ ಆ ದೀನಾರ್‌ಗಳನ್ನು ತರಿಸಿ ಎಣಿಸಿ ಹೇಳಿದರು: ಲೋಕದಿಂದ ಹೋಗಿ ಅಲ್ಲಾಹನನ್ನು ಭೇಟಿಯಾಗುವಾಗ ಈ ದೀನಾರ್ ಮುಹಮ್ಮದ್ ಬಳಿ ಇದ್ದಲ್ಲಿ ಅಲ್ಲಾಹನ ಬಗ್ಗೆ ಭರವಸೆ ಇಟ್ಟಂತಾಗುವುದು ಹೇಗೆ? ಅನಂತರ ಆ ದೀನಾರ್ ಸದಖವಾಗಿ ನೀಡಿದರು. ಅದೇ ದಿನ ಅವರು ನಿಧನ ಹೊಂದಿದರು.

(ಮಜ್‌ಮುಝ್ಝವಾಯಿದ್ ಹೈಸಮಿ ಸಂಪುಟ 3 ಪುಟ 124 ಬೈರೂತ್ ಮುದ್ರಣ).

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವಸಲ್ಲಿಮ್**

ಹಝ್ರತ್ ಪೈಗಂಬರರ ಸತ್ಯಸಂಧನಾದ ಪ್ರೇಮಿ ಹಝ್ರತ್ ಮಸೀಹ್ ಮೌಊದ್, ಮಹ್‌ದೀ ಮಅ್‌ಹೂದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಸಂಖ್ಯಾತ ಖಜಾನೆಗಳ ಬಾಗಿಲುಗಳನ್ನು ತೆರೆದುಕೊಟ್ಟನು. ಆದರೆ ಹಝ್ರತ್ ಪೈಗಂಬರರು ಆ ಖಜಾನೆಗಳ ಸಂಪತ್ತನ್ನೆಲ್ಲಾ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರು. ತನ್ನ ಸ್ವಾರ್ಥ ಉದ್ದೇಶಕ್ಕೋಸ್ಕರ ಚಿಕ್ಕಾಸನ್ನೂ ಬಳಸಲಿಲ್ಲ. ಯಾವುದೇ ಕಟ್ಟಡ ನಿರ್ಮಿಸಲಿಲ್ಲ. ಅರಮನೆ ನಿರ್ಮಿಸಲಿಲ್ಲ. ಒಂದು ಚಿಕ್ಕ ಮನೆಯಲ್ಲಿ, ಬಡವರ ಮನೆಗಿಂತ ಉತ್ತಮವಾಗಿರದ ಮನೆಯಲ್ಲಿ ತನ್ನ ಜೀವಿತವನ್ನು ಕಳೆದರು. ಕೆಟ್ಟದಾಗಿ ವರ್ತಿಸಿದವರೊಂದಿಗೆ ಉತ್ತಮವಾಗಿ ವರ್ತಿಸಿ ತೋರಿಸಿದರು. ಹೃದಯಕ್ಕೆ ನೋವುಂಟುಮಾಡಿದವರಿಗೆ ಅವರ ವಿಪತ್ತಿನ ಕಾಲದಲ್ಲಿ ತಮ್ಮ ಹಣದಿಂದ ಸಂತೋಷವನ್ನು ತಲಪಿಸಿದರು. ಮಲಗಲು ನೆಲದ ಮೇಲೆ ಹಾಸಿಗೆಯನ್ನು, ವಾಸಿಸಲು ಒಂದು ಚಿಕ್ಕ ಗುಡಿಸಲು, ತಿನ್ನಲು ಜೋಳದ ರೊಟ್ಟಿಯನ್ನು ತಿನ್ನುತ್ತಿದ್ದರು ಅಥವಾ ಹಸಿದಿರುತ್ತಿದ್ದರು. ಲೌಕಿಕ ಸಂಪತ್ತು ಹಝ್ರತ್ ಪೈಗಂಬರರಿಗೆ ಧಾರಾಳವಾಗಿ ನೀಡಲ್ಪಟ್ಟಿತ್ತು. ಆದರೆ ಅವರು ತಮ್ಮ ಕೈಗಳನ್ನು ಲೌಕಿಕ ವಸ್ತುಗಳಿಂದ ಸ್ವಲ್ಪ ಮಾತ್ರ ಸಹ ಮಲೀನ ಗೊಳಿಸಲಿಲ್ಲ. ದಾರಿದ್ರ್ಯಕ್ಕೆ ಐಶ್ವರ್ಯದ ಮೇಲೆ, ಬಡತನಕ್ಕೆ ಶ್ರೀಮಂತಿಕೆ ಮೇಲೆ ಆದ್ಯತೆ ನೀಡಿದರು. ಅವರು ನಿಯೋಜಿತರಾದ ದಿನದಿಂದ ಅವರು ತನ್ನ ಅತ್ಯಂತ ಶ್ರೇಷ್ಠ ಸ್ನೇಹಿತನಾದ ಅಲ್ಲಾಹನನ್ನು ಕಾಣುವ ತನಕ ತನ್ನ ಸೃಷ್ಟಿಕರ್ತನ ಹೊರತು ಬೇರೆ ಯಾರಿಗೂ ಮಹತ್ವ ನೀಡಲಿಲ್ಲ. (ಬರಾಹೀನೆ ಅಹ್ಮದಿಯಾ ರೂಹಾನಿ ಖಝಾಇನ್ ಭಾಗ 1 ಪುಟ 276–292 ಹಾಶಿಯ ಸಂಖ್ಯೆ 11).

ಯಾವುದೇ ದೇಶವನ್ನಾಳುವವರಿಗೆ ಮತ್ತು ಸರಕಾರಿ ಅಧಿಕಾರಿಗಳಿಗೆ ಹಝ್ರತ್ ಪೈಗಂಬರರ ವೈಯ್ಯಕ್ತಿಕ ಮತ್ತು ಕೌಟುಂಬಿಕ ಜೀವಿತದ ಈ ಮಾರ್ಗದರ್ಶಕ ವಿವರಣೆಗಳು ದಾರಿ ದೀಪಸ್ತಂಭವಾಗಿದೆ. ಹೀಗೆ ವರ್ತಿಸದೆ ಅವರು ಜನರ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ವೀಕ್ಷಿಸಲಾರರು ಮತ್ತು ಈಡೇರಿಸಿಕೊಡಲಾರರು.

ಇಂದಿನ ಕಾಲದ ರಾಜ್ಯಾಧಿಪತಿಗಳು ಮತ್ತು ಮುಸ್ಲಿಮ್ ರಾಜ್ಯಾಧಿಪತಿಗಳು ರಾಷ್ಟ್ರೀಯ ಖಜಾನೆಯನ್ನು ತಮ್ಮ ಸ್ವಂತ ಮತ್ತು ಕುಟುಂಬದ ಹಿತಕ್ಕಾಗಿ ಅಸಂಖ್ಯಾತವಾಗಿ ಬಳಸುತ್ತಿರುವ ಇಂದಿನ ಕಾಲದ ಸ್ಥಿತಿಯ ಬಗ್ಗೆ ಓದಲು, ಆಲಿಸಲು ಮತ್ತು ನೋಡಲು ಲಭ್ಯವಾಗುತ್ತಿದೆ. ಅವುಗಳು ಪ್ರಸ್ತಾಪಿಸಲು ಅನರ್ಹವಾಗಿವೆ. ಅಲ್ಲಾಹನೇ ಅವರಿಗೆ ತಿಳುವಳಿಕೆ ನೀಡುವವನಾಗಲಿ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರರ ಅತ್ಯುತ್ಕೃಷ್ಟ ಮಾದರಿ ಜೀವಿತದ ಸಾವಿರದ ಒಂದು ಪಾಲಷ್ಟನ್ನಾದರೂ ಅನುಷ್ಠಾನಕ್ಕೆ ತರಲು ಅವರಿಗೆ ಭಾಗ್ಯ ಲಭಿಸಿದರೆ ಪ್ರಜೆಗಳ ಸ್ಥಿತಿ ಸುಧಾರಣೆಯಾಗಬಹುದಾಗಿದೆ.

ನಮ್ಮ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫರು (ಅಯ್ಯದಹುಲ್ಲಾಹು ತಅಲಾ ಬಿನಸ್‌ರಿಹಿಲ್ ಅಝೀಝ್) ಇಸ್ಲಾಮಿನ ಶಾಂತಿದಾಯಕ ಮತ್ತು ಮಾನವೀಯರ ಹಿತೈಷಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಮಾದರಿಗಳನ್ನು ಉಲ್ಲೇಖಿಸಿ ಇಂದಿನ ಕಾಲದ ದೊಡ್ಡ ದೇಶಗಳ ಪಾರ್ಲಿಮೆಂಟುಗಳಲ್ಲಿ ನಿಂತು ನ್ಯಾಯಪಾಲನೆ ಮಾಡುವ ಬಗ್ಗೆ ಜಾಗತಿಕ ಅಶಾಂತಿ, ಶಾಂತಿಭಂಗ ಮತ್ತು ಉಗ್ರಕೃತ್ಯಗಳನ್ನು ತಡೆಗಟ್ಟಲು ಮತ್ತು ತೃತೀಯ ಜಾಗತಿಕ ಯುದ್ಧದ ಮೋಡ ತಲೆಯ ಮೇಲೆ ಅಲುಗಾಡುತ್ತಿರುವಾಗ ಅದರಿಂದ ರಕ್ಷಣೆ ಪಡೆಯಲು ಜಾಗತಿಕ ನಾಯಕರಿಗೆ ಎಚ್ಚರಿಕೆ ನೀಡುತ್ತಿದ್ದಾರೆ.

ಕೊನೆಯದಾಗಿ ಎರಡು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ. 2012 ಜೂನ್ ದಿನಾಂಕ 27ರಂದು ವಾಶಿಂಗ್‌ಟನ್ ಡಿ.ಸಿ.ಯ ಕ್ಯಾಪಿಟೋಲ್ ಹಿಲ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಕಾಂಗ್ರೆಸ್ ಮತ್ತು ಸೆನೆಟಿನ ಪ್ರಮುಖ ಸದಸ್ಯರು, ವೈಟ್ ಹೌಸಿನ ಸಿಬ್ಬಂದಿ, ಸರಕಾರೇತರ ಸಂಸ್ಥೆಗಳ ಮುಖ್ಯಸ್ಥರ, ವಿವಿಧ ದೇಶಗಳ ರಾಯಭಾರಿಗಳ ಅವರ ಉಪಸ್ಥಿತಿಯಲ್ಲಿ ಅವರನ್ನು ಸಂಬೋಧಿಸಿ ಹೀಗೆ ಹೇಳಿದರು:

ಪ್ರಥಮ ಜಾಗತಿಕ ಮಹಾ ಯುದ್ಧ ಕೊನೆಗೊಂಡಾಗ ಕೆಲವು ದೇಶಗಳ ನಾಯಕರು ಹೀಗೆ ಆಶಿಸಿದ್ದರು, ಭವಿಷ್ಯತ್‌ಕಾಲದಲ್ಲಿ ಉತ್ತಮ ಶಾಂತಿಭರಿತ ಅಂತರ್ರಾಷ್ಟ್ರೀಯ ಸಂಬಂಧ ಸ್ಥಾಪಿತವಾಗಲಿ ಎಂದು. ಜಾಗತಿಕಶಾಂತಿ ಸ್ಥಾಪನೆಗೆ ಒಂದು ಪ್ರಯತ್ನವಾಗಿ ಲೀಗ್ ಆಫ್ ನೇಶನ್ಸ್ ಸಂಸ್ಥೆ ಸ್ಥಾಪಿಸಲ್ಪಟ್ಟಿತು. ಅದರ ಮೂಲಭೂತ ಉದ್ದೇಶ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಮತ್ತು ಮುಂದಿನ ಕಾಲದಲ್ಲಿ ಯುದ್ಧವನ್ನು ತಡೆಗಟ್ಟುವುದಾಗಿತ್ತು. ದುರ್ಭಾಗ್ಯಕರವಾಗಿ ಲೀಗ್ ಆಫ್ ನೇಶನ್ಸ್ ತತ್ವಗಳಲ್ಲಿ ಮತ್ತು ಅದರ ಠರಾವುಗಳಲ್ಲಿ ಕೆಲವು ನ್ಯೂನತೆಗಳೂ ಕೊರತೆಗಳೂ ಇದ್ದುವು. ಅದು ಎಲ್ಲಾ ಕೋಮುಗಳ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ಸಮಾನವಾದ ಸಂರಕ್ಷಣೆ ನೀಡಲಿಲ್ಲ. ಸಮಾನತೆ ರಹಿತವಾದ ಪರಿಣಾಮವಾಗಿ ದೀರ್ಘಕಾಲ ನೆಲೆನಿಲ್ಲುವ ಶಾಂತಿ ಸ್ಥಾಪಿತವಾಗಲಿಲ್ಲ. ಲೀಗ್ ಆಫ್ ನೇಶನ್ಸ್ ಮಾಡಿದ ಪ್ರಯತ್ನ ವಿಫಲವಾಯಿತು ಮತ್ತು ಅದರ ನೇರವಾದ ಪರಿಣಾಮವಾಗಿ ದ್ವಿತೀಯ ಜಾಗತಿಕ ಮಹಾಯುದ್ಧ ಪ್ರಾರಂಭವಾಯಿತು. ಅದರ ನಂತರ ಸಂಭವಿಸಿದ ಅಪ್ರತಿಮ ವಿನಾಶ ಮತ್ತು ಧ್ವಂಸದ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆ ಯುದ್ಧದಲ್ಲಿ ಅಂದಾಜು ಏಳುಕೋಟಿ ಐವತ್ತು ಲಕ್ಷ ಜನರು ಜೀವವನ್ನು ಕಳಕೊಂಡರು. ಅವರಲ್ಲಿ ಒಂದು ಬಹಳ

ದೊಡ್ಡ ಸಂಖ್ಯೆ ನಿರಪರಾಧಿ ನಾಗರಿಕರಾಗಿದ್ದರು. ಈ ಯುದ್ಧ ಲೋಕದ ಕಣ್ಣು ತೆರೆಯಲು ಸಾಕಷ್ಟು ಆಗಬೇಕಾಗಿತ್ತು. ಅದರ ಪರಿಣಾಮವಾಗಿ ಎಂತಹ ಧೋರಣೆಗಳನ್ನು ರೂಪಿಸಬೇಕಾಗಿತ್ತೆಂದರೆ ಅವುಗಳ ಮೂಲಕ ನ್ಯಾಯದ ತಳಹದಿಯಲ್ಲಿ ಎಲ್ಲ ಪಕ್ಷಗಳ ಜನರಿಗೆ ಅವರಿಗೆ ಅರ್ಹವಾದ ಹಕ್ಕುಗಳು ಸಿಗಬಹುದಾಗಿತ್ತು ಮತ್ತು ಈ ಸಂಸ್ಥೆ ಜಾಗತಿಕ ಶಾಂತಿಗೆ ಒಂದು ಮಾರ್ಗವಾಗುತ್ತಿತ್ತು.ಆ ಕಾಲದ ಸರಕಾರಗಳು ನಿಸ್ಸಂಶಯವಾಗಿ ಶಾಂತಿ ಸ್ಥಾಪಿಸಲು ತಕ್ಕಮಟ್ಟಿಗೆ ಪ್ರಯತ್ನ ಮಾಡಿದರು. ಆ ಮೂಲಕ ಸಂಯುಕ್ತರಾಷ್ಟ್ರ ಸಂಘ ಸ್ಥಾಪಿಸಲ್ಪಟ್ಟಿತು. ಆದರೆ ಬೇಗನೆ ಹೀಗೆ ಸ್ಪಷ್ಟವಾಯಿತು. ಸಂಯುಕ್ತರಾಷ್ಟ್ರ ಸಂಘದ ಸ್ಥಾಪನೆಯ ಪ್ರಮುಖವಾದ ಮೂಲಭೂತ ಉದ್ದೇಶ ಈಡೇರಲಿಲ್ಲ.

ಇದೇ ರೀತಿ 2013 ಜೂನ್ ದಿನಾಂಕ 11ರಂದು ಲಂಡನಿನ ಪಾರ್ಲಿಮೆಂಟ್ ಹೌಸ್‌ನಲ್ಲಿ ಮಾಡಿದ ಭಾಷಣದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಹೀಗೆ ಹೇಳಿದರು: ಈ ಕಾಲದ ಪ್ರಮುಖ ಆವಶ್ಯಕತೆಯೇನೆಂದರೆ ಜಾಗತಿಕ ಶಾಂತಿ ಮತ್ತು ಸೌಹಾರ್ದತೆ ಸ್ಥಾಪಿಸಲು ಮಾಡುವ ಪ್ರಯತ್ನದಲ್ಲಿ ಎಲ್ಲ ಜನರು ಒಬ್ಬರಿನ್ನೊಬ್ಬರ ಮತ್ತು ಎಲ್ಲಾ ಧರ್ಮಗಳನ್ನು ಗೌರವಿಸಬೇಕು. ಹೀಗೆ ಮಾಡದಿದ್ದರೆ ಅಪಾಯಕರ ಪರಿಣಾಮಗಳು ತಲೆದೋರುವುವು.

ಲೋಕ ಒಂದು ಜಾಗತಿಕ ಗ್ರಾಮ (ಗ್ಲೋಬಲ್ ವಿಲೇಜ್) ಆಗಿ ಪರಿವರ್ತಿತವಾಗಿದೆ. ಪರಸ್ಪರ ಗೌರವ ನೀಡದಿರುವಿಕೆ ಮತ್ತು ಶಾಂತಿಯನ್ನು ವರ್ಧಿಸಲು ಪರಸ್ಪರ ಐಕ್ಯತೆ ಇಲ್ಲದ ಕಾರಣ ಯುದ್ಧ ಪ್ರಾರಂಭವಾದರೆ ಅದು ಕೇವಲ ಸ್ಥಳೀಯವಾಗಿ ಒಂದು ನಗರ ಅಥವಾ ಒಂದು ದೇಶಕ್ಕೆ ಮಾತ್ರ ಹಾನಿ ಉಂಟುಮಾಡುವುದಾಗಿರಲಾರದು. ಅದು ಲೋಕದವಿಡೀ ನಾಶಕ್ಕೆ ಹೇತುವಾಗುವುದು. ಹಿಂದಿನ ಎರಡು ಜಾಗತಿಕ ಮಹಾಯುದ್ಧಗಳ ಘೋರ ವಿನಾಶಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಕೆಲವು ದೇಶಗಳ ಧೋರಣೆಗಳ ಕಾರಣದಿಂದ ಇನ್ನೊಂದು ಜಾಗತಿಕ ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸಿಕೊಳ್ಳುತ್ತಾ ಇವೆ. ಜಾಗತಿಕ ಯುದ್ಧವೇನಾದರೂ ಪ್ರಾರಂಭವಾದರೆ ಪಾಶಿವಾತ್ಯ ಲೋಕ ಸಹ ಅದರ ದೀರ್ಘಕಾಲೀನ ವಿನಾಶಕಾರಿ ದುಷ್ಪರಿಣಾಮಗಳಿಂದ ಪ್ರಭಾವಿತವಾಗುವುದು. ನೀವೆಲ್ಲರೂ ಬನ್ನಿರಿ, ನಾವೆಲ್ಲರೂ ಸೇರಿ ಈ ವಿನಾಶದಿಂದ ರಕ್ಷಣೆ ಪಡೆಯುವ. ನಮ್ಮ ಮುಂದಿನ ಪೀಳಿಗೆಯನ್ನು ಯುದ್ಧದ ವಿನಾಶಕಾರಿ ಪರಿಣಾಮಗಳಿಂದ ರಕ್ಷಿಸಲು ನೀವೆಲ್ಲರೂ ಬನ್ನಿರಿ. ಏಕೆಂದರೆ ಈ ವಿನಾಶಕಾರಿ ಯುದ್ಧ ಅಣುಬಾಂಬ್ ಬಳಸುವ ಯುದ್ಧವೇ ಆಗುವುದು. ಲೋಕ ಯಾವ ಕಡೆಗೆ ಸಾಗುತ್ತಿದೆಯೋ ಅದರಲ್ಲಿ ಅಂತಹ ಯುದ್ಧ ಸ್ಫೋಟಗೊಳ್ಳುವ ಅಪಾಯ ಕಾಣಿಸುತ್ತದೆ.ಈ ವಿನಾಶಕಾರಿ ಪರಿಣಾಮಗಳಿಂದ ರಕ್ಷಿಸಿಕೊಳ್ಳಲು ನ್ಯಾಯ ಪಾಲನೆ, ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಮೈಗೂಡಿಸುವುದು ಆವಶ್ಯಕವಾಗಿದೆ.ದ್ವೇಷಗಳನ್ನು ವರ್ಧಿಸಲು ಪ್ರಯತ್ನಿಸುತ್ತಾ ಜಾಗತಿಕ ಶಾಂತಿಯನ್ನು ಕೆಡಿಸಲು ನಿರತರಾಗಿರುವವರ ವಿರುದ್ಧ ಒಗ್ಗಟ್ಟಾಗಿ ನಿಂತು ಅವರನ್ನು ತಡೆಯಬೇಕು.

ಮಹಾಶಕ್ತಿ ರಾಷ್ಟ್ರಗಳು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ಅತ್ಯಂತ ನ್ಯಾಯಪೂರ್ಣವೂ ಸರಿಯೂ ಆಗಿರುವ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ. ಆಮೀನ್. (ಆಲಮೀ ಬುಹ್‌ರಾನ್ ಔರ್ ಅಮನ್ ಕೀ ರಾಹ್ ಪುಟ 129).

ವ ಆಖಿರುದಅ್‌ವಾನ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

*(ಪುಟ ಸಂಖ್ಯೆ 01ರ ಉಳಿದ ಭಾಗ)*

ರಸೂಲುಲ್ಲಾಹ್(ಸ) ರವರ ಸಮುದಾಯದಲ್ಲೂ ಅಸಾಮಾನ್ಯ ಆಧ್ಯಾತ್ಮಿಕ ಉನ್ನತಿ ಹೊಂದುವವರ ಸಂಘಟನೆ ಜಾರಿಗೊಳಿಸು. ಹೀಗೆ ದುರೂದಿನಲ್ಲಿ ಒಂದು ಅತ್ಯಂತ ಸೂಕ್ಷ್ಮವಾದ ಮತ್ತು ಪವಿತ್ರವಾದ ಕಾಲಚಕ್ರ ಸ್ಥಾಪಿಸಲಾಗಿದೆ. ಹೀಗೆ ಅಲ್ಲಾಹನ ಕಾರುಣ್ಯವನ್ನು ಈ ಪ್ರಾರ್ಥನೆ ಮೂಲಕ ಉತ್ತೇಜನ ನೀಡಲಾಗಿದೆ. ಓ ಪ್ರಭೂ! ನೀನು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ಅದೇ ರೀತಿಯ ವಿಶೇಷ ಅನುಗ್ರಹಗಳನ್ನು ಅವತರಿಸು. ಯಾವ ರೀತಿಯ ಅನುಗ್ರಹಗಳನ್ನು ನೀನು ಮುಹಮ್ಮದ್ ರಸೂಲುಲಾಹ್(ಸ) ರವರ ಆಗಮನದ ಮೂಲಕ ಇಬ್ರಾಹಿಂ(ಅ) ಮೇಲೆ ತನ್ನ ವಿಶೇಷವಾದ ಅನುಗ್ರಹಗಳನ್ನು ಅವತರಿಸಿದ್ದೆಯೋ ಹಾಗೆ. **"ಕಮಾಸಲ್ಲೈತ ಅಲಾ ಇಬ್ರಾಹಿಂ"** ನಲ್ಲಿ ಕೊಡಲಾದ ಉದಾಹರಣೆಯು ನಿಜವಾದ ಅರ್ಥದಲ್ಲಿ ಹಝ್ರತ್ ರಸುಲುಲ್ಲಾಹ್(ಸ) ರವರ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದಾಗಿದೆಯೇ ಹೊರತು ಇಬ್ರಾಹಿಂ(ಅ) ರವರನ್ನು, ಹಝ್ರತ್ ಇಬ್ರಾಹಿಂ(ಅ) ರವರ ಹೆಸರು ಕೇವಲ ಈ ಉದಾಹರಣೆಯನ್ನು ಎತ್ತಿ ಹಿಡಿಯಲು ಮತ್ತು ಅದರ ವಾಸ್ತವವನ್ನು ಸ್ಪಷ್ಟಪಡಿಸಲು ತರಲಾಗಿದೆ. ಹಾಗೆ ದುರೂದಿನ ನಿಜವಾದ ಅರ್ಥ ಹೀಗಾಗುವುದು. ಓ ಪ್ರಭೂ! ನೀನು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ಆ ವಿಶೇಷವಾದ ಅನುಗ್ರಹಗಳನ್ನು ಅವತರಿಸು. ಅದನ್ನು ನೀನು ಮುಹಮ್ಮದ್ ರಸೂಲುಲ್ಲಾಹ್(ಸ) ರವರಂತಹ ಮಹೋನ್ನತ ನಬಿಯನ್ನು ಕಳುಹಿಸುವ ಮೂಲಕ ಹಝ್ರತ್ ಇಬ್ರಾಹಿಂ(ಅ) ರವರ ಮೇಲೆ ಅವತರಿಸಲಾಗಿದೆ. ಅಂದರೆ ಅಂತಹ ಮರಳಿ ಹಝ್ರತ್ ರಸೂಲುಲ್ಲಾಹ್(ಸ) ರವರ ಆಧ್ಯಾತ್ಮಿಕ ಉನ್ನತಿಯ ಉದಾಹರಣೆ ಸ್ವಯಂ ಅವರದ್ದು ಅವರಿಗಾಗಿ ಒಂದು ಉದಾಹರಣೆಯ ರೂಪದಲ್ಲಿ ನೀಡಲಾಗಿದೆ. ಹಝ್ರತ್ ಇಬ್ರಾಹಿಂ(ಅ) ರವರ ಹೆಸರು ಕೇವಲ ಆ ಉದಾಹರಣೆಯ ವ್ಯಾಖ್ಯಾನಕ್ಕೋಸ್ಕರ ತರಲಾಗಿದೆ. ಈಗ ನೋಡಿ. ಅದು ಎಂತಹ ಶುಭಕರ ತಿರುವು ಆಗಿದೆ, ಅದನ್ನು ದುರೂದಿನಲ್ಲಿ ಸ್ಥಾಪಿಸಲಾಗಿದೆ. ಅಂದರೆ ದುರೂದ್ ಪ್ರಾರ್ಥನೆಯ ಸಾರಾಂಶವೇನಾಯಿತೆಂದರೆ, ಅಲ್ಲಾಹನೇ! ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಅಗಣಿತ ಅನುಗ್ರಹಗಳನ್ನು ಅವರ ವ್ಯಕ್ತಿತ್ವಕ್ಕಷ್ಟೆ ಸೀಮಿತವಾಗದೇ ಅದರ ಸಂಘಟನೆ ಅಂತ್ಯ ದಿನದವರೆಗೆ ವಿಸ್ತರಿಸಲ್ಪಡಲಿ. ಮತ್ತು ಅವರ ಆಧ್ಯಾತ್ಮಿಕ ಉನ್ನತಿಯ ಫಲಗಳು ಲೋಕದಲ್ಲಿ ಪ್ರಕಟವಾಗುತ್ತಾ ಸದಾಕಾಲಕ್ಕೂ ಅವರ ಪ್ರಕಾಶವನ್ನು ಹರಡಿಸುತ್ತಿರಲಿ.

ಈಗ ಉಳಿದಿರುವ ಪ್ರಶ್ನೆಯೇನೆಂದರೆ ದುರೂದಿನ ಈ ಪ್ರಾರ್ಥನೆಯು ಸ್ವೀಕಾರವಾಯಿತೋ ಅಥವಾ ಇಲ್ಲವೋ? ಸ್ವೀಕಾರವಾದರೆ ಯಾವ ರೂಪದಲ್ಲಿ ಸ್ವೀಕಾರವಾಯಿತು? ಈ ಪ್ರಶ್ನೆಯ ಸಾಧಾರಣವಾದ ಉತ್ತರವೇನೆಂದರೆ ಈ ಪ್ರಾರ್ಥನೆಯು ಪರಿಪೂರ್ಣವಾದ ರೂಪದಲ್ಲಿ ಅಂಗೀಕಾರವಾಯಿತು, ಮಾತ್ರವಲ್ಲ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಸಹ ಅಲ್ಲಾಹನು ತನ್ನ ಕಡೆಯಿಂದ ಅದರ ಜ್ಞಾನ ನೀಡಿದ್ದನು. ನಮಗೆ ಕಲಿಸಿಕೊಟ್ಟ ದುರೂದಿನ ಈ ಪ್ರಾರ್ಥನೆ ಇಂತಿಷ್ಟು ರೂಪದಲ್ಲಿ ಪೂರ್ಣಗೊಳ್ಳುವುದು. ಹಾಗೆ ಈ ಪ್ರಾರ್ಥನೆಯ ಸಾಮಾನ್ಯವಾದ ಪ್ರಕಾಶಿತ ರೂಪವೇನೆಂದರೆ ಮುಹಮ್ಮದೀಯ ಸಮುದಾಯದಲ್ಲಿ ಉನ್ನತ ದರ್ಜೆಯ ಅವ್‌ಲಿಯಾಗಳು (ಸಜ್ಜನ ಪುರುಷರು) ಮತ್ತು ಅದ್ವಿತೀಯ ದರ್ಜೆಯ ಉಲಮಾಅಗಳ ಬಳುವಳಿ ನೀಡಲಾಯಿತು. ಹಾಗೆ ಹಝ್ರತ್ ರಸೂಲುಲ್ಲಾಹ್(ಸ) ಸ್ವಯಂ ಹೇಳುತ್ತಾರೆ.

**ಉಲಮಾಅ ಉಮ್ಮತಿ ಕಅಂಬಿಯಾ ಬನೀ ಈಸ್ರಾಯಿಲ್,**

ಅಂದರೆ ನನ್ನ ಸಮುದಯದ ಆಧ್ಯಾತ್ಮಿಕ ಉನ್ನತಿ ಹೊಂದಿದ ಉಲಮಾಅಗಳು (ಅವರಲ್ಲಿ ಎಲ್ಲಾ ಶತಮಾನಗಳ ಮುಜದ್ದಿದರು (ಧರ್ಮ ಸುಧಾರಕರು ಸಹ ಶಾಮೀಲಾಗಿದ್ದಾರೆ). ತನ್ನ ದರ್ಜೆ ಹಾಗೂ ಆಧ್ಯಾತ್ಮಿಕ ಉನ್ನತಿಯಲ್ಲಿ ಬನೀ ಈಸ್ರಾಯಿಲರಂತೆ ಆಗಿರುವರು." ಅಂದಹಾಗೆ ಈ ಮುಹಮ್ಮದಿಯ ಸಮುದಾಯದಲ್ಲಿರುವ ಸಾವಿರಾರು ಉನ್ನತ ದರ್ಜೆ ಹೊಂದಿದ ಅವ್‌ಲಿಯಾಗಳು ಮತ್ತು ಸಾವಿರಾರು ದೇವನ ಸಾನಿಧ್ಯ ಪಡೆದ ಉಲಮಾಅಗಳು ಗತಿಸಿಹೋಗಿರುವರು. ಅವರುಗಳು ತನ್ನ ತನ್ನ ಕಾಲಾವಧಿಗಳಲ್ಲಿ ಐಹಿಕ ಜ್ಞಾನದ ಜೊತೆಯಲ್ಲಿ ದೈವಿಕ ಜ್ಞಾನದಿಂದಲೂ ಪ್ರೇರಿತವಾಗುತ್ತಿದ್ದರು. ಅವರಿಂದ ಇಸ್ಲಾಮಿಕ ಆಕಾಶದ ಎಲ್ಲಾ ಭಾಗಗಳು ಪ್ರಕಾಶಮಯವಾಗಿವೆ. ಇವೆಲ್ಲ ಅದೇ ದುರೂದಿನ ಶುಭಕರ ಫಲಗಳಾಗಿವೆ.

ಅಲ್ಲದೇ ಈ ಸಾಮಾನ್ಯ ಆಧ್ಯಾತ್ಮಿಕ ಬಳುವಳಿಯಲ್ಲದೇ ಹಝ್ರತ್ ರಸೂಲುಲ್ಲಾಹ್(ಸ) ರವರ ಸಮನಾದ ಓರ್ವ ಪರಿಪೂರ್ಣ ಸಾದೃಶ್ಯ ರೂಪ ಮತ್ತು ಪರಿಪೂರ್ಣ ಶಿಷ್ಯನೊಬ್ಬನ ವಾಗ್ದಾನವನ್ನು ನೀಡಲಾಗಿತ್ತು. ಅವರ ಆಗಮನವು ಸ್ವಯಂ ರಸೂಲುಲ್ಲಾಹ್(ಸ) ರವರ ಪುನರಾಗಮನ ಎಂದು ಸಾರಲಾಗಿತ್ತು. ಸೂರಃ ಜುಮಾದಲ್ಲಿ ಪ್ರತಿಪಾದಿಸಿದಂತೆ– ವ ಆಖರೀನ ಮಿನಹುಮ್ (ಅಂದರೆ ಅಂತಿಮ ಕಾಲದಲ್ಲಿ ಅಲ್ಲಾಹನು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಪ್ರತಿರೂಪದ ಮೂಲಕ ಪುನರಾಗಮನ ನೀಡುವನು). ನಲ್ಲಿ ಹೇಳಲಾಗಿದೆ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರು "ಯುದ್‌ಫನು ಮಯಿಯ ಫೀ ಖಬರಿ– (ಅಂದರೆ ಆಗಮಿಸುವ ಸುಧಾರಕನು ತನ್ನ ನಿಧನ ನಂತರ ಆಧ್ಯಾತ್ಮಿಕ ನೆಲೆಯಲ್ಲಿ ತಾನು ಜೊತೆಯಲ್ಲೇ ಇರುವನು) ಪದಗಳ ಮೂಲಕ ಸಂಕೇತಿಸಲಾಗಿದೆ. ಹಾಗೆ ಈ ವಾಗ್ದಾನವು ಹಝ್ರತ್ ಮಸೀಹ್ ಮೌಊದ್(ಅ) ರವರ ವ್ಯಕ್ತಿತ್ವದಲ್ಲಿ ಪೂರ್ಣಗೊಂಡಿದೆ. ಅಂದರೆ ಯಾವ ರೀತಿ ಹಝ್ರತ್ ಇಬ್ರಾಹಿಂ(ಅ) ರವರ ಪ್ರಾರ್ಥನೆಯ ಫಲವಾಗಿ ಹಝ್ರತ್ ರಸುಲುಲ್ಲಾಹ್(ಸ) ಆಗಮಿಸಿದರು, ಅಂತೆಯೇ **"ಕಮಾ ಸಲ್ಲೈತ ಅಲಾ ಇಬ್ರಾಹಿಂ"** ರ ಪ್ರಾರ್ಥನೆಯ ಪೂರ್ತಿಗೋಸ್ಕರ ಹಝ್ರತ್ ರಸೂಲ್ಲಾಹ್(ಸ) ಮತ್ತೊಮ್ಮೆ ಲೋಕಕ್ಕೆ ಆಗಮಿಸುವರು. ಅಂತ್ಯ ದಿನವರೆಗೆ ತಿಳಿಯದು. ಎಷ್ಟೆಲ್ಲ ಅವರ ಆಧ್ಯಾತ್ಮಿಕ ಸಾದೃಶ್ಯಗಳು ದೈವಿಕ ಮಾರ್ಗದರ್ಶನ ಪಡೆದು ಆಗಮಿಸಿ ಆ ಪ್ರಾರ್ಥನೆಯನ್ನು ಪೂರ್ಣಗೊಳಿಸುವರು. **ಅಲ್ಲಾಹುಮ್ಮ ಸ್ವಲ್ಲೆತ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಿಕ್ ವ ಸಲ್ಲಿಮ್.**

ದುರೂದಿನಲ್ಲಿ ಹಝ್ರತ್ ಇಬ್ರಾಹಿಂ(ಅ) ರ ಉದಾಹರಣೆ ವ್ಯಕ್ತಪಡಿಸುವ ತಾತ್ಪರ್ಯವೇನೆಂದರೆ ಹಝ್ರತ್ ಇಬ್ರಾಹಿಂ(ಅ) ರವರ ಯಾವ ವ್ಯಕ್ತಿಗತ ಮಹಾನತೆಯನ್ನು ವ್ಯಕ್ತಪಡಿಸುವ ಉದ್ದೇಶವಿರಲಿಲ್ಲ. ಬದಲು ಹಝ್ರತ್ ಇಬ್ರಾಹಿಂ(ಅ) ರವರ ಆ ಪ್ರಾರ್ಥನೆಯತ್ತ ಬೊಟ್ಟು ಮಾಡುವುದಾಗಿತ್ತು. ಅದರ ಫಲವಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವ ಉದಯವಾಯಿತು. ಅಂತಹ ಯಾವ ರೀತಿ ಹಝ್ರತ್ ಇಬ್ರಾಹಿಂ(ಅ) ರವರ ಪ್ರಾರ್ಥನೆಯಿಂದಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರ ಪರಿಶುದ್ಧ ವ್ಯಕ್ತಿತ್ವ ಉದಯವಾಯಿತು. ಅದೇ ರೀತಿ ಈಗ ಓ ಅಲ್ಲಾಹನೇ ಹಝ್ರತ್ ರಸುಲುಲ್ಲಾಹ್(ಸ) ರವರ ಸಮುದಯದಲ್ಲೂ ಅವರ ಆಧ್ಯಾತ್ಮಿಕ ಸಾದೃಶ್ಯಗಳು ಅಂತ್ಯ ದಿನವರೆಗೆ ಜಾರಿಯಲ್ಲಿರಲಿ. ಅವರ ಮೂಲ ಒಂದು ಎಂತಹ ಪರಿಶುದ್ಧ ಕಾಲ ಖಾಯಂ ಅಗಬೇಕೆಂದರೆ ಅದು ಅಂತಿಮ ಪ್ರಕಾಶದ ಮೂಲಕ ಲೋಕದಲ್ಲಿ ಸದಾಕಾಲಕ್ಕೂ ಪ್ರಕಾಶ ಜಾರಿಯಲ್ಲಿರುವಂತಾಗಬೇಕು. ಈ ತತ್ವ ಪರಿಹಾರಗೊಂಡ ಮೇಲೆ ನನ್ನ ಆತ್ಮ ಕಮಾ ಸಲ್ಲೈತ ಅಲಾ ಇಬ್ರಾಹಿಂ, ಪದಗಳ ಮೇಲೆ ಆತಂಕಪಡುವ ಬದಲು ಒಂದು ವಿಶೇಷ ರೀತಿಯ ಆಧ್ಯಾತ್ಮಿಕ ಸ್ವಾದದಲ್ಲಿ ಸ್ತುತಿಸುತ್ತಾ ಮುನ್ನಡೆಯುವಂತಾಯಿತು ಮತ್ತು ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳು ಮತ್ತು ಉಜ್ವಲ ಸಾದೃಶ್ಯ ಸೂರ್ಯ ಚಂದ್ರಗಳ ದರ್ಶನ ಮಾಡುತ್ತಾ ಅದರಿಂದ ಇಂದು ಇಸ್ಲಾಂ ಸುಸಜ್ಜಿತಗೊಂಡಿದೆ. ಅದನ್ನು ಕಂಡು ಎಂದೂ ಒದಗದ ಸಂತೋಷ ಒದಗಿ ಬರುತ್ತದೆ. **ಅಲ್ಲಾಹಮ್ಮ ಸಲ್ಲಿ ಅಲಾ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವಬಾರಿಕ್ ವ ಸಲ್ಲಿಮ್.**

**ವ ಆಖಿರು ದಾವನಾ ಅನಿಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್.**

**(ಮಝಾಮೀನೆ ಬಶೀರ್, ಸಂಪುಟ–2, ಪುಟ–298, ಪ್ರಕಾಶಗೊಂಡ ಇಸವಿ 2011)**

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

# "ಪ್ರವಾದಿ ಮುಹಮ್ಮದ್(ಸ)ರವರ ಸಹಾಬ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸಲ್ಲಾಮ್‌ರವರ ಜೀವನ ಚರಿತ್ರೆಯ ಬೆಳಕಿನಲ್ಲಿ ಸಾಂಪತ್ತಿಕ ತ್ಯಾಗದ ಮಹತ್ವ"

ರಫೀಖ್ ಅಹ್ಮದ್ ಬೇಗ್, ನಾಝಿರ್ ಬೈತುಲ್ ಮಾಲ್ ಆಮದ್, ಸದರ್ ಅಂಜುಮನ್ ಅಹ್ಮದೀಯ ಖಾದಿಯಾನ್

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಸಾಂಪತ್ತಿಕ ತ್ಯಾಗದ ಮಹತ್ವವನ್ನು ಕುರಿತು ಹೀಗೆ ನುಡಿಯುತ್ತಾನೆ: ಮಸಲುಲ್ಲಝೀನ ಯುನ್‌ಫಿಖೂನ ಅಮ್‌ವಾಲಹುಮ್ ಫೀ ಸಬೀಲಿಲ್ಲಾಹಿ ಕಮಸಲಿ ಹಬ್ಬತಿನ್ ಅನ್‌ಬತತ್ ಸಬ್‌ಅ ಸನಾಬಿಲ ಫೀ ಕುಲ್ಲಿ ಹಬ್ಬತಿನ್, ವಲ್ಲಾಹು ಯುಝಾಇಫು ಲೆಮ್ಮೆಯಶಾಉ ವಲ್ಲಾಹು ವಾಸಿಉನ್ ಅಲೀಮ್. (ಸೂರತುಲ್ ಬಖರ: 262)

ವಮಸಲುಲ್ಲಝೀನ ಯುನ್‌ಫಿಖೂನ ಅಮ್‌ವಾಲಹುಮುಬ್‌ತಿಗಾಅ ಮರಝಾತಿಲ್ಲಾಹಿ ವತಸ್‌ಬೀತಮ್ಮಿನ್ ಅನ್‌ಫುಸಿಹಿಮ್ ಕಮಸಲಿಲ್ ಹಬ್ಬತಿನ್ ಬಿರಬ್ವತಿನ್ ಅಸಾಬಹಾ ವಾಬಿಲ ಫಆತತ್ ಉಕೂಲಹಾ ಝಿಅಫೈನಿ ಫಇನ್ ಲಮ್ ಯುಸಿಬ್‌ಹಾ ವಾಬಿಲ ಫತಲ್ಲ. ವಲ್ಲಾಹು ಬಿಮಾ ತಅ್‌ಮಲೂನ ಬಸೀರ್. (ಅಲ್‌ಬಖರ: ವಚನ :266)

ಅನುವಾದ: ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ವ್ಯಯ ಮಾಡುವವರ ಹೋಲಿಕೆ, ಒಂದು ಧಾನ್ಯ ಏಳು ತೆನೆಗಳನ್ನು ಹೊಂದಿ ಪ್ರತಿಯೊಂದು ತೆನೆಯಲ್ಲೂ ನೂರು ಕಾಳುಗಳನ್ನು ಉತ್ಪಾದಿಸುವಂತಾಗಿದೆ. ಅಲ್ಲಾಹನು, ತಾನಿಚ್ಛಿಸುವವರಿಗೆ (ಇದಕ್ಕಿಂತಲೂ) ಅಧಿಕ ಪಟ್ಟು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ.

ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಗಳನ್ನು ದೃಢಪಡಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯಮಾಡುವವರ ಸ್ಥಿತಿ ಪೀಠಭೂಮಿಯ ಮೇಲಿರುವ ತೋಟದಂತೆ. ಅದರ ಮೇಲೆ ಭಾರೀ ಮಳೆ ಸುರಿದಾಗ ಇಮ್ಮಡಿ ಫಲಗಳು ಉತ್ಪಾದಿಸಲ್ಪಡುತ್ತವೆ. ಸಮೃದ್ಧವಾದ ಮಳೆ ಅದರ ಮೇಲೆ ಬೀಳದಿದ್ದರೆ ಲಘುವಾದ ಮಳೆ ಅದಕ್ಕೆ ಸಾಕಾಗುತ್ತದೆ. ನೀವು ಮಾಡುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ.

ಈ ಎರಡು ವಚನಗಳಲ್ಲಿ, ಸರ್ವಶಕ್ತನಾದ ಅಲ್ಲಾಹನು ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವನು ಅದನ್ನು ಕಳೆದುಕೊಳ್ಳುವುದಿಲ್ಲ ಅಥವಾ ಖರ್ಚು ಮಾಡುವುದರಿಂದ ಅವನು ಯಾವುದೇ ನಷ್ಟವನ್ನು ಅನುಭವಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾನೆ, ಆದರೆ ಅವನ ಸಂಪತ್ತಿನಲ್ಲಿ ಅಸಾಮಾನ್ಯ ಅನುಗ್ರಹವನ್ನು ನೀಡಲಾಗುತ್ತದೆ. ಭೂಮಿಯಲ್ಲಿ ಒಂದು ಬೀಜ ಬಿತ್ತಿದಂತೆ ಏಳು ತೆನೆಗಳು ಹೊರಬರುತ್ತವೆ ಹೀಗೆ ಪ್ರತಿ ತೆನೆಯಲ್ಲಿ ನೂರು ಬೀಜಗಳಿದ್ದರೆ ಏಳು ತೆನೆಗಳಲ್ಲಿ ಏಳು ನೂರು ಬೀಜಗಳು ಹೊರಬರುತ್ತವೆ ಆದರೆ ಅಲ್ಲಹನು ಬಯಸಿದರೆ ಅದಕ್ಕಿಂತ ಹೆಚ್ಚಾಗಿಯೂ ಬರಬಹುದು ಮತ್ತು ಪ್ರಸ್ತುತ ವೈಜ್ಞಾನಿಕ ಯುಗದಲ್ಲಿ ಒಂದು ಬೀಜದಿಂದ ನೂರಾರು ಧಾನ್ಯಗಳು ಹೊರಬರುತ್ತವೆ ಎಂದು ಸಾಬೀತಾಗಿದೆ.

ಸರ್ವಶಕ್ತನಾದ ಅಲ್ಲಾಹನ ಪ್ರಸನ್ನತೆಯನ್ನು ಬಯಸಿ ನೀವು ಯಾವುದೇ ಒಳ್ಳೆಯ ಕಾರ್ಯದಲ್ಲಿ ಹಣವನ್ನು ಖರ್ಚು ಮಾಡಿದರೆ ನಿಮ್ಮ ಸಂಪತ್ತು ಕಡಿಮೆಯಾಗುವುದಿಲ್ಲ ಮತ್ತು ತೋಟಗಳು ಅಥವಾ ವ್ಯಾಪಾರಗಳು ನಷ್ಟವಾಗುವುದಿಲ್ಲ ಅಥವಾ ನೀವು ನಷ್ಟವನ್ನು ಅನುಭವಿಸುವುದಿಲ್ಲ, ಆದರೆ ಎಲ್ಲದರಲ್ಲೂ ನೀವು ಅಸಮಾನ್ಯ ಅನುಗ್ರಹಗಳನ್ನು ಅನುಭವಿಸುತ್ತೀರಿ ಎಂದು ಅಲ್ಲಾಹನು ತನ್ನ ದಾಸರಿಗೆ ಭರವಸೆ ನೀಡುತ್ತಾನೆ.

ಅಲ್ಲಾಹನು ಮಾರ್ಗದಲ್ಲಿ ಯಾರು ತಮ್ಮಲ್ಲಿರುವ ಎಲ್ಲಾವನ್ನು
ಖರ್ಚು ಮಾಡುತ್ತಾರೋ ಅವರೇ ಅಲ್ಲಾಹನನ್ನು ಪ್ರೀತಿಸುವವರಾಗಿದ್ದಾರೆ.
ಅವರು ತಮ್ಮ ಆತ್ಮೀಯ ಅಲ್ಲಾಹನು ಯಾವಾಗ ತಮ್ಮಿಂದ
ಸಂತೃಪ್ತನಾಗುತ್ತಾನೋ ಎಂದು ಹಗಲು ರಾತ್ರಿ ಯೋಚಿಸುತ್ತಿರುತ್ತಾರೆ.

ಆತ್ಮೀಯ ಕೇಳುಗರೇ!! ಆರಂಭಿಕ ವಿಶ್ವಾಸಿಗಳು, ಆರ್ಥಿಕ ತ್ಯಾಗದ ಮಹತ್ವವನ್ನು ಅರಿತುಕೊಳ್ಳುತ್ತ ಈ ಎರಡು ವಚನಗಳಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಲಾದ ಅನುಗ್ರಹಗಳಿಂದ ಪ್ರಯೋಜನ ಪಡೆದರು. ಪ್ರವಾದಿ ಮುಹಮ್ಮದ್(ಸ) ರವರ ಸಹಾಬರವರು ತಮ್ಮ ಅಪ್ರತಿಮ ತ್ಯಾಗ ಮತ್ತು ನಿಸ್ವಾರ್ಥತೆ ಮತ್ತು ಪ್ರೀತಿ ಮತ್ತು ಭಕ್ತಿಯ ಮೂಲಕ ಅಲ್ಲಾಹನಲ್ಲಿ ತಲ್ಲೀನನಾಗುವುದು(ಫನಾಫಿ ಲ್ಲಾಹ್) ಮತ್ತು ರಸೂಲುಲ್ಲಹ್‌ನಲ್ಲಿ ಸಂಪೂರ್ಣವಾಗಿ ತಲ್ಲೀನನಾಗುವುದು(ಫನಾಫಿ ರಸೂಲ್) ಎಂಬ ಸ್ಥಾನಮಾನವನ್ನು ಸಾಧಿಸಿ ಇಡೀ ಜಗತ್ತಿಗೆ ಅಪ್ರತಿಮ ಉದಾಹರಣೆಯನ್ನು ಹೊಂದಿದ್ದರು ಮತ್ತು ಅವರ ತಮ್ಮ ನಮೂನೆಯಿಂದ ಪ್ರವಾದಿ ಮುಹಮ್ಮದ್(ಸ)ರವರ ಕಾಲವೂ ಲೋಕದ ಇತಿಹಾಸದ ಒಂದು ಉತ್ತಮ ಕಾಲಘಟ್ಟವಾಗಿತ್ತು ಎಂದು ಏಕೆಂದರೆ ಅದೇ ಸಹಾಬಾಗಳು ಅಲ್ಲಾಹನ ಕರೆಗೆ ಅಂದರೆ ಯಾ ಅಯ್ಯುಹಲ್ಲಝೀನ ಆಮನೂ ಕೂನು ಅನ್ಸಾರಲ್ಲಾಹ್ ಅಂದರೆ ಎಲೈ ವಿಶ್ವಾಸಿಗಳೇ! ಅಲ್ಲಾಹನ ಧರ್ಮದ ಸಹಾಯಕರಾಗಿರಿ ಎಂದು ಕೇಳಿದ ತಕ್ಷಣವೇ ನಾವು ಅಲ್ಲಾಹನ ಧರ್ಮದ ಸಹಾಯಕರಾಗಿದ್ದೇವೆ ಎಂದು ತಮ್ಮ ಜೀವಗಳ ತ್ಯಾಗವನ್ನು ನೀಡಿದರು.

ಆರ್ಥಿಕ ತ್ಯಾಗವನ್ನು ಕೇಳಿದಾಗ, ಸಹಾಬರವರು ಓಡಿ ತಮ್ಮ ಮನೆಗಳಲ್ಲಿ ಲಭ್ಯವಿರುವುದನ್ನು ತಂದು ನಿಮಗೆ ಪ್ರಸ್ತುತಪಡಿಸುತ್ತಿದ್ದರು. ಸತ್ಕಾರ್ಯಗಳಲ್ಲಿ ಒಬ್ಬರಿಗೊಬ್ಬರು ಮುನ್ನುಗ್ಗುವ ಓಟವಿರುತ್ತಿತ್ತು. ಒಂದು ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ.ಅ) ಮತ್ತು ಹಝ್ರತ್ ಉಮರ್(ರ.ಅ) ಕೂಡ ತಮ್ಮ ಮನೆಯಿಂದ ಹಣದೊಂದಿಗೆ ಬಂದಾಗ ಪ್ರವಾದಿ ಮುಹಮ್ಮದ್(ಸ)ರವರು ಕೇಳಿದರು ಓ ಉಮರ್! ನೀವು ಏನನ್ನು ತಂದಿರುವಿರಿ? ಅದಕ್ಕೆ ಹಝ್ರತ್ ಉಮರ್(ರ) ಹೇಳಿದರು ಯಾರಸೂಲಲ್ಲಾಹ್!! ನಾನು ನನ್ನ ಸಂಪತ್ತಿನ ಅರ್ಧ ಭಾಗವನ್ನು ತಂದಿದ್ದೇನೆ. ಅಂತೆಯೇ, ಹಝ್ರತ್ ಅಬುಬಕರ್(ರ) ಅವರನ್ನು ಸಹ ಕೇಳಲಾಯಿತು, ಅದಕ್ಕೆ ಅವರು ಹೀಗೆ ಉತ್ತರಿಸಿದರು ಯಾ ರಸೂಲಲ್ಲಾಹ್!! ನಾನು ನನ್ನ ಸಂಪೂರ್ಣ ಸಂಪತ್ತನ್ನು ತಂದಿರುವೆನು ಮತ್ತು ಮನೆಯಲ್ಲಿ ಕೇವಲ ಅಲ್ಲಾಹ್ ಹಾಗೂ ಅಲ್ಲಾಹನ ಸ್ಮರಣೆಯನ್ನು ಬಿಟ್ಟಿರುವೆನು.

ಹಝ್ರತ್ ಅಬ್ದುಲ್ಲಾ ಬಿನ್ ಝೈದ್(ರ) ಅವರು ಬಹಳ ಕಡಿಮೆ ಆಸ್ತಿಯನ್ನು ಹೊಂದಿದ್ದರು. ಮತ್ತು ಬಹಳ ಕಷ್ಟದಿಂದ ಅವರು ಮಕ್ಕಳನ್ನು ಬೆಳೆಸಿದರು, ಆದರೆ ಇಸ್ಲಾಂಗೆ ಸಂಪತ್ತಿನ ಅಗತ್ಯವಿರುವ ಸಮಯ ಬಂದಿತು. ಇದನ್ನು ಪೂರೈಸಲು ಚಂದವನ್ನು ಸಂಗ್ರಹಿಸಲಾಯಿತು. ಹಝ್ರತ್ ಅಬ್ದುಲ್ಲಾ(ರ) ಅವರಿಗೆ ಸಂಪತ್ತಿನ ಕೊರತೆಯಿತ್ತು ಆದರೆ ಅವರ ಹೃದಯದಲ್ಲಿ ನಂಬಿಕೆಯ ಉಷ್ಣತೆ ಇತ್ತು. ಇದರಿಂದ ಬಲವಂತವಾಗಿ, ಅವರು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಅವರಲ್ಲಿದ್ದ ಎಲ್ಲವನ್ನೂ ನೀಡಿದರು. ಅವರ ತಂದೆ ಪ್ರವಾದಿ(ಸ)ರವರ ಬಳಿ ಬಂದು ಇದರ ಬಗ್ಗೆ ದೂರು ನೀಡಿದಾಗ ಪ್ರವಾದಿ(ಸ)ರವರು ಅವರನ್ನು ಕರೆಸಿ ಹೇಳಿದರು ಸರ್ವಶಕ್ತನಾದ ಅಲ್ಲಾಹನು ನಿಮ್ಮ ತ್ಯಾಗವನ್ನು ಸ್ವೀಕರಿಸಿದ್ದಾನೆ ಆದರೆ ಈಗ ನಾನು ಅದನ್ನು ನಿಮ್ಮ ತಂದೆಯ ಆಸ್ತಿಯಾಗಿ ನಿಮಗೆ ಹಿಂದಿರುಗಿಸುತ್ತೇನೆ, ನೀವು ಅದನ್ನು ಸ್ವೀಕರಿಸಿರಿ.

ಹಝ್ರತ್ ತಲ್ಹ(ರ) ಹದಿನೇಳು ಅಥವಾ ಹದಿನೆಂಟನೇ ವಯಸ್ಸಿನಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು. ಮತ್ತು ಬದ್ರ್ ಯುದ್ಧದಲ್ಲಿ ದೊಡ್ಡ ತ್ಯಾಗದೊಂದಿಗೆ, ರಸೂಲ್ ಕರೀಮ್(ಸ) ಅವರಿಗೆ ಉತ್ತಮ ಬೆಂಬಲಿಗರಾಗಿ ನೆಲೆನಿಂತಿದ್ದರು. ಅದೇ ರೀತಿ ಆರ್ಥಿಕ ತ್ಯಾಗದ ವಿಷಯದಲ್ಲಿಯೂ ಹಿಂದಿರಲಿಲ್ಲ. ಯುದ್ಧಗಳ ಸಂದರ್ಭದಲ್ಲಿ ಯುದ್ಧದ ಖರ್ಚಿಗೆ ತನ್ನ ಆಸ್ತಿಯನ್ನು ನೀಡುವುದಾಗಿ ವಾಗ್ದಾನ ಮಡಿದ್ದರು. ಹೀಗೆ ಅವರು ತಮ್ಮ ವಾಗ್ದಾನವನ್ನು ಬಹಳ ಸ್ಥಿರಚಿತ್ತತರಾಗಿ ಈಡೇರಿಸಿದರು.

ತಬೂಕ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರು ಸಾಮಾನ್ಯವಾಗಿ ದುಃಖದ ಸ್ಥಿತಿಯಲ್ಲಿದ್ದಾಗ ಮತ್ತು ಯುದ್ಧ ಸಾಮಗ್ರಿಗಳನ್ನು ಒದಗಿಸುವಲ್ಲಿ ಬಹಳ ತೊಂದರೆ ಉಂಟಾದಾಗ. ಅವರು ಬಹಳ ಉತ್ತಮ ಉಡುಗೊರೆಯಾಗಿ ಹಣವನ್ನು ನೀಡಿದ್ದರು. ಇದಕ್ಕಾಗಿ ಪ್ರವಾದಿ(ಸ)ರವರ ಅವರಿಗೆ ಫಯ್ಯಾಝ್ ಎಂದು ಬಿರುದು ನೀಡಿದರು.

ಪವಿತ್ರ ಖುರ್‌ಆನ್‌ನ ವಚನ: "ಮಿನಲ್ ಮುಮಿನೀನ ರಿಜಾಲುನ್ ಸದಖೂ ಮ ಆಹದು ಅಲ್ಲಾಹ ಅಲೈಹಿ, ಫಮಿನ್‌ಹುಮ್ ಮನ್ ಖಝಾ ನಹ್‌ಬಹೂ ವ ಮಿನ್‌ಹುಮ್ ಮನ್ ಯನ್‌ತಝಿರ್" ಅಂದರೆ ಅಲ್ಲಾಹನಿಗೆ ವಾಗ್ದಾನ ಮಾಡಿದ್ದನ್ನು ನಿಜವೆಂದು ಸಾಬೀತುಪಡಿಸಿದ ಕೆಲವು ಜನರಿದ್ದಾರೆ. ಆಗ ಪ್ರವಾದಿ(ಸ)ರವರು ಹೇಳಿದರು: ತಲ್ಹ, ನೀವು ಅವರಲ್ಲಿ ಒಬ್ಬರಾಗಿದ್ದೀರಿ. ಅದೇ ರೀತಿ ವಚನ ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್ ಅವತೀರ್ಣಗೊಂಡಾಗ, ಅವರು ರಸೂಲುಲ್ಲಾ(ಸ) ರವರ ಸೇವೆಯಲ್ಲಿ "ಬೀರೆ ಜಾ" ಎಂಬ ತೋಟವನ್ನು ನೀಡಿದರು.

ಹಝ್ರತ್ ಅಬ್ದುರ್ ರಹಮಾನ್ ಬಿನ್ ಔಫ್(ರ) ತನ್ನ ಯೌವನದಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅವನು ಬಹಳ ದೊಡ್ಡ ವ್ಯಾಪಾರಿ ಮತ್ತು ಬಹಳ ದೊಡ್ಡ ಶ್ರೀಮಂತರಗಿದ್ದರು ಆದರೆ ಅವರು ಎಂದಿಗೂ ಸಂಪತ್ತನ್ನು ಪ್ರೀತಿಸಲಿಲ್ಲ. ಬದಲಿಗೆ, ಅವರು ಅದನ್ನು ಅಲ್ಲಾಹನ ಮಾರ್ಗದಲ್ಲಿ ತ್ಯಗ ಮಾಡಲು ಸಂತೋಷಪಡುತ್ತಿದ್ದರು. ಒಮ್ಮೆ ಅವರ ವ್ಯಾಪಾರ ತಂಡದಲ್ಲಿ ಏಳುನೂರು ಒಂಟೆಗಳ ಮೇಲೆ ಗೋಧಿ, ಹಿಟ್ಟು ಮತ್ತು ಇತರ ಆಹಾರ ಪದಾರ್ಥಗಳನ್ನು ಹೊತ್ತುಕೊಂಡು ಮದೀನಾಕ್ಕೆ ಬಂದಿತು. ಅದು ಅಸಾಮಾನ್ಯ ವಿಷಯವಾಗಿತ್ತು. ಇಡೀ ಮದೀನಾದಲ್ಲಿ ಇದರ ಚರ್ಚೆ ನಡೆಯುತ್ತಿತ್ತು. ಹಝ್ರತ್ ಆಯಿಷ(ರ) ಹೇಳಿದರು ಪ್ರವದಿ(ಸ)ರವರು ನುಡಿಯುತ್ತಿದ್ದರು ಅಬ್ದುಲ್ ರಹಮಾನ್ ತೆವಳುತ್ತಾ ಸ್ವರ್ಗ ಪ್ರವೇಶಿಸುತ್ತಾರೆ ಎಂದು. ಹಝ್ರತ್ ಅಬ್ದುರ್ರಹ್ಮಾನ್(ರ) ಅವರಿಗೆ ಈ ಮಾತು ತಿಳಿದಗ ಅವರು ಹಝ್ರತ್ ಆಯಿಷ(ರ)ರವರ ಬಳಿ ಬಂದು ಹೇಳಿದರು: ನಾನು ಈ ಇಡೀ ತಂಡ ಹಾಗೂ ಅವರಲ್ಲಿರುವ ಎಲ್ಲ ಸಾಮಗ್ರಿಗಳನ್ನು ಸಹ ಅಲ್ಲಾಹನ ಮಾರ್ಗದಲ್ಲಿ ನೀಡುತ್ತಿದ್ದೇನೆ

ಎಂದು ನೀವು ಸಾಕ್ಷಿಯಾಗಿರಿ.

ಅವರ ಮರಣದ ಸಮಯದಲ್ಲಿಯೂ, ಅವರು ಐವತ್ತು ಸಾವಿರ ದೀನಾರ್‌ಗಳನ್ನು ಮತ್ತು ಒಂದು ಸಾವಿರ ಕುದುರೆಗಳನ್ನು ಅಲ್ಲಹನ ಮಾರ್ಗದಲ್ಲಿ ಅರ್ಪಿಸಲು ವಸಿಯ್ಯತ್ ಮಾಡಿದ್ದರು. ಇದಲ್ಲದೆ ಆ ಕಾಲದಲ್ಲಿ ಜೀವಂತವಾಗಿರುವ ಎಲ್ಲಾ ಬದರಿ ಸಹಾಬರವರನ್ನು ಪ್ರತಿಯೊಬ್ಬ ಸಹಬರರಿಗೆ ನಾಲ್ಕು ನೂರು ದೀನಾರ್‌ಗಳನ್ನು ನೀಡುವುದಕ್ಕೆ ವಸಿಯ್ಯತ್ ಮಾಡಿದರು. ಅಲ್ಲಿಯವರೆಗೆ ನೂರು ಬದರಿ ಸಹಾಬರವರು ಜೀವಂತವಾಗಿದ್ದರು ಎಂದು ಹೇಳಲಾಗುತ್ತದೆ. ಮತ್ತು ಎಲ್ಲರೂ ಸಂತೋಷದಿಂದ ಈ ವಸಿಯ್ಯತ್‌ನಿಂದ ಪ್ರಯೋಜನ ಪಡೆದರು, ಹಝ್ರತ್ ಉಸ್ಮಾನ್(ರ) ಸಹ ತಮ್ಮ ಪಾಲನ್ನು ಪಡೆದರು.

ಹಝ್ರತ್ ಉಸ್ಮಾನ್(ರ) 34ನೇ ವಯಸ್ಸಿನಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು. ಅವರು ಬಹಳ ಶ್ರೀಮಂತರಾಗಿದ್ದರು. ಮುಸಲ್ಮಾನರು ಮಕ್ಕಾದಿಂದ ಮದೀನಾಕ್ಕೆ ವಲಸೆ ಬಂದಾಗ ನೀರಿನ ತೀವ್ರ ಅಭಾವ ಉಂಟಾಯಿತು. ಕೇವಲ ಒಂದೇ ಒಂದು ಸಿರಿ ನೀರಿನ ಬಾವಿ(ಬೇರೆ ರೂಮ) ಇತ್ತು. ಅದರೆ ಆ ಬಾವಿಯು ಓರ್ವ ಯಹೂದಿಯ ಬಳಿ ಇತ್ತು ಆತನು ಅಲ್ಲಿನ ನೀರನ್ನು ಹಣವನ್ನು ಪಡೆದು ನೀಡುತ್ತಿದ್ದನು. ಮತ್ತೊಂದೆಡೆ, ಸಹಾಬರವರ ಆರ್ಥಿಕ ಸ್ಥಿತಿ ಸಾಮಾನ್ಯವಾಗಿ ಅವರು ನೀರು ಕೊಂಡುಕೊಂಡು ಕುಡಿಯಲು ಅಶಕ್ತರಾಗಿದ್ದರು. ಆದ್ದರಿಂದ ಹಝ್ರತ್ ಉಸ್ಮಾನ್(ರ) ರವರು ಆ ಬಾವಿಯನ್ನು ಯಹೂದಿಯಿಂದ ಇಪ್ಪತ್ತು ಸಾವಿರ ದಿರ್ಹಮ್‌ಗಳಿಗೆ ಖರೀದಿಸಿ ಸಮರ್ಪಿಸಿದರು.

ಪ್ರವದಿ ಮುಹಮ್ಮದ್(ಸ)ರವರು ತಬೂಕ್ ಯುದ್ಧದ ಸಿದ್ಧತೆಗೆ ಆದೇಶಿಸಿದಾಗ ಆರ್ಥಿಕ ತೊಂದರೆ ಬಹಳ ಹೆಚ್ಚಾಗಿತ್ತು ಮತ್ತು ಯುದ್ಧ ಸಾಮಗ್ರಿಗಳನ್ನು ಒದಗಿಸುವುದು ತುಂಬಾ ಕಷ್ಟಕರವಾಗಿತ್ತು. ಆಗ ಪ್ರವಾದಿ(ಸ) ಅವರು ಸಹಾಬರಲ್ಲಿ ಆರ್ಥಿಕ ನೆರವು ಕೋರಿದರು. ಅಗ ಹಝ್ರತ್ ಉಸ್ಮಾನ್(ರ)ರವರು ತಮ್ಮ ಸ್ವಂತ ಖರ್ಚಿನಲ್ಲಿ ಹತ್ತು ಸಾವಿರ ಮುಜಾಹಿದ್ದೀನ್ಗಳನ್ನು ಸಿದ್ಧಗೊಳಿಸಿದರು. ಮತ್ತು ಅವರಿಗೆ ಅತ್ಯಂತ ಕ್ಷುಲ್ಲಕ ವಸ್ತುವನ್ನು ಸಹ ನಿಮ್ಮ ಹಣದಿಂದ ಖರೀದಿಸಲಾಯಿತು. ಅದಲ್ಲದೆ ಒಂದು ಸಾವಿರ ಒಂಟೆ, ಎಪ್ಪತ್ತು ಕುದುರೆ ಹಾಗೂ ಒಂದು ಸಾವಿರ ನಗದು ಪೂರೈಕೆಗೆ ನೀಡಿದರು.

ಮಹನೀಯರೇ! ಪ್ರವಾದಿ(ಸ) ಅವರ ಪುರುಷ ಸಹಬರವರೊಂದಿಗೆ ಮಹಿಳೆ ಸಹಾಬರವರು ಆರ್ಥಿಕ ತ್ಯಾಗ ಮಾಡುವಲ್ಲಿ ಯಾವುದೇ ಪ್ರಯತ್ನವನ್ನು ಬಿಡಲಿಲ್ಲ. ಅವರು ತಮ್ಮ ಮಕ್ಕಳನ್ನು ಇಸ್ಲಾಮ್‌ನ ನೆರವಿಗಾಗಿ ನೀಡಿದಲ್ಲದೆ ತಮ್ಮ ಬಹಳ ಆತ್ಮೀಯ ವಸ್ತುಗಳನ್ನು ಸಹ ಅಂದರೆ ಹಣ, ಬಂಗಾರಗಳನ್ನು ಸಹ ಅಲ್ಲಾಹನ ಮಾರ್ಗದಲ್ಲಿ ನೀಡಿದರು. ಪವರವಾದಿ(ಸ)ರವರ ಮಡದಿಯಾಗಿರುವ ಹಝ್ರತ್ ಸೌದ(ರ) ಅವರ ಬಗ್ಗೆ ಪ್ರವಾದಿ(ಸ) ರವರು ನುಡಿದರು ಅವರು ಉದ್ದ ಕೈಗಳನ್ನು ಹೊಂದಿದವರು ಮತ್ತು ಸ್ವರ್ಗದಲ್ಲಿ ನನ್ನನ್ನು ಮೊದಲು ಭೇಟಿಯಾಗುತ್ತಾರೆ, ಅಂದರೆ ಅವರು ಅಲ್ಲಾಹನ ಮಾರ್ಗದಲ್ಲಿ ಹೆಚ್ಚು ಖರ್ಚು ಮಾಡುವವರು ಎಂದು ಹೇಳಿದರು. ಇದರಿಂದ ನಮಗೆ ತಿಳಿಯುವುದೇನೆಂದರೆ ಅಲ್ಲಹನ ಮಾರ್ಗದಲ್ಲಿ ಖರ್ಚು ಮಾಡುವುದು ಅಲ್ಲಹ್ ಹಾಗೂ ಅಲ್ಲಹನ ಪ್ರವಾದಿಯವರ ಸಮೀಪ್ಯ ಹಾಗೂ ಅವರೊಂದಿಗೆ ಇರುವುದಕ್ಕೆ ಕಾರಣವಾಗುತ್ತದೆ ಎಂದು ನಮಗೆ ತಿಳಿಸುತ್ತದೆ.

ಆತ್ಮೀಯ ಕೇಳುಗರೇ! ಈ ಸಹಾಬರಲ್ಲಿ ಮತ್ತು ಅವರ ಅನುಯಾಯಿಗಳಲ್ಲಿ ತ್ಯಾಗದ ಮನೋಭಾವವು ಉಳಿದಿರುವವರೆಗೂ, ಮುಸ್ಲಿಮರಲ್ಲಿ ಅಭಿವೃದ್ಧಿಯ ಅವಧಿಯು ಮುಂದುವರೆಯಿತು ಮತ್ತು ಸರ್ವಶಕ್ತನಾದ ಅಲ್ಲಾಹನ ಬೆಂಬಲ ಮತ್ತು ಸಹಾಯವನ್ನು ಪಡೆಯುತ್ತಲೇ ಇರುತ್ತಿದ್ದರು. ಪ್ರವಾದಿ(ಸ)ರವರ ಆಗಮನದ ಮುನ್ನೂರು ವರ್ಷಗಳ ನಂತರ, ಕತ್ತಲೆಯ ಅವಧಿಯು ಪ್ರಾರಂಭವಾಯಿತು ಆ ಅಂಧಾಕಾರದ ಕತ್ತಲೆಯು ಸಾವಿರ ವರ್ಷಗಳಿಗೆ ಅದರ ಪರಾಕಾಷ್ಠೆಯನ್ನು ತಲುಪಿತು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಭವಿಷ್ಯವಾಣಿಯ ಪ್ರಕಾರ, ಅಂದರೆ ಇಸ್ಲಾಂ ಧರ್ಮದ ಹೆಸರು ಮಾತ್ರ ಉಳಿದಿರುವುದು ಮತ್ತು ತ್ಯಾಗದ ಮನೋಭಾವವು ಕಣ್ಮರೆಯಾಗುವುದು ಮತ್ತು ನಿಜವಾದ ವಿಶ್ವಾಸವು(ಈಮಾನ್) ಭೂಮಿಯಿಂದ ಏರಿ ಕೃತಕ್ಕ ನಕ್ಷತ್ರಕ್ಕೆ ತಲುಪುವುದು ತದನಂತರ ಸರ್ವಶಕ್ತನಾದ ಅಲ್ಲಹನ ಕರುಣೆಯು ಹೊರಹೊಮ್ಮಿತು ಮತ್ತು ಪವಿತ್ರ ಖುರ್‌ನ್‌ನ ಸೂರ ಮುಹಮ್ಮದ್‌ನಲ್ಲಿ ಹೇಳಲಾದ ಈ ಸ್ಪಷ್ಟ ಭವಿಷ್ಯವಾಣಿಯ ಪ್ರಕಾರ ವಇನ್ ತತವಲ್ಲೌ ಯಸ್ತಬ್ದಿಲ್ ಖೌಮನ್ ಗೈರಕುಮ್ ಸುಮ್ಮ ಲ ಯಕೂನು ಅಮ್‌ಸಾಲಕುಮ್ ಅಂದರೆ ಎಲ್ಲೈ ಮುಸ್ಲಿಮರೇ!! ನೀವು ಇಸ್ಲಾಂ ಧರ್ಮದ ತ್ಯಾಗದಿಂದ ದೂರವಿದ್ದರೆ, ಆಗ ಸರ್ವಶಕ್ತನಾದ ಅಲ್ಲಹನು ನಿಮ್ಮ ಸ್ಥಾನದಲ್ಲಿ ಇನ್ನೊಂದು ಜನಾಂಗವನ್ನು ತರುವನು. ಆಗ ಅವರು ನಿಮ್ಮಂತೆ ತ್ಯಾಗಗಳಿಂದ ವಿಮುಖರಾಗುವುದಿಲ್ಲ. ಇಂತಹ ಸ್ಪಷ್ಟ ಭವಿಷ್ಯವಾಣಿಯ ಪ್ರಕಾರ ಅಲ್ಲಹನು ಹದಿನಾಲ್ಕನೇಯ ಶತಮಾನದ ಆರಂಭದಲ್ಲಿ ವಾಗ್ದಾತ್ತ ಮಸೀಹ್ ಹಾಗೂ ಮಹದಿಯನ್ನು ಲೋಕಕ್ಕೆ ಕಳುಹಿಸಿದನು ಅವರ ಮೂಲಕ ಇಸ್ಲಾಮ್ ಧರ್ಮದ ಜಾಗತೀಕ ವಿಜಯವೂ ನಿಶ್ಚಯವಿತ್ತು. ವಾಗ್ದಾತ್ತ ಮಸೀಹರು ಎಂತಹ ಕಾಲದಲ್ಲಿ ಆಗಮಿಸಿದರು ಎಂದರೆ ಇಡೀ ಜಗತ್ತು ದಾರಿತಪ್ಪಿ ಅಂಧಾಕಾರದಲ್ಲಿ ಮುಳುಗಿದ್ದ ಕಾಲದಲ್ಲಿ ಹಾಗೂ ಸುಳ್ಳು ಜನಾಂಗವು ಇಸ್ಲಾಮ್ ಧರ್ಮವನ್ನು ದುರ್ಬಲಗೊಳಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳಲ್ಲಿ ತೊಡಗಿದ್ದವು ಮತ್ತು ಲಕ್ಷಾಂತರ ಮುಸ್ಲಿಮರು ಕ್ರಿಶ್ಚಿಯನ್ ಧರ್ಮಕ್ಕೆ ಮತ್ತು ಇತರ ಧರ್ಮಗಳಿಗೆ ಬಲಿಯಾಗುತ್ತಿದ್ದರು ಮತ್ತು ಇಸ್ಲಾಮ್ ಧರ್ಮವು ಪ್ರವಾದಿ ಮುಹಮ್ಮದ್(ಸ)ರವರ ಪ್ರಕಾಶದಿಂದ ಪ್ರಕಾಶಮಾನಗೊಳಿಸಲು ಬಂದಿತ್ತು ಆ ಪ್ರಕಾಶವನ್ನು ಅಳಿಸಲು ಪ್ರಯತ್ನದಲ್ಲಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಖಾದಿಯಾನ್‌ನಿಂದ ಪ್ರವಾದಿ ಮುಹಮ್ಮದ್(ಸ)ರವರ ನಿಜವಾದ ಪ್ರೇಮಿ ಮತ್ತು ಪ್ರವಾದಿ(ಸ)ರವರ ಮೇಲೆ ಹೆಚ್ಚು ದರೂದನ್ನು ಕಳುಹಿಸುತ್ತಿದ್ದ ವಾಗ್ದಾತ್ತ ಮಸೀಹ್ ಹಾಗೂ ಮಹ್‌ದಿ ಅಲೈಹಿಸ್ಸಲಾಮ್ ರವರ ಆಗಮನವಾಯಿತು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ನಾನು ನಿನ್ನ ಹೆಸರನ್ನು ಜಗತ್ತಿನಲ್ಲಿ ಗೌರವದಿಂದ ಹರಡಿಸುತ್ತೇನೆ ಎಲ್ಲಿಯುವರೆಗೆ ಎಂದರೆ ಅರಸರು ನಿನ್ನ ವಸ್ತ್ರಗಳಲ್ಲಿ ಅನುಗ್ರಹಗಳನ್ನು ಹುಟುಕುವರು ಮತ್ತು ನಾನು ನಿನ್ನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಜೀವ ನೀಡುವ ಹಾಗೂ ಸಹಾನುಭೂತಿ ತೋರುವ ಒಂದು ಪವಿತ್ರ ಜಮಾಅತ್ತನ್ನು ನಿಡುವೆನು ಎಂದು ಶುಭವಾರ್ತೆಯನ್ನು ನೀಡಿದನು. ಅದೇ ರೀತಿ ಸರ್ವಶಕ್ತನಾದ ಅಲ್ಲಹನು ಹೀಗೂ ಶುಭವಾರ್ತೆಯನ್ನು ನೀಡಿದನು: ಅಂದರೆ ನಾವು ನಮ್ಮ ಕಡೆಯಿಂದ ಯಾರ ಮನಸ್ಸಿನಲ್ಲಿ ಇಲ್‌ಹಾಮ್‌ನ ಮಾಡುತ್ತೇವೊ ಅಂತಹ ಜನರು ನಿಮ್ಮನ್ನು ಸಹಾಯ ಮಾಡುವರು.

ಮುಬಾರಕ್ ವೋಹ್ ಜೋ ಅಬ್ ಈಮಾನ್ ಲಾಯ;
ಸಹಾಬ ಸೇ ಮಿಲಾ ಜೊ ಮುಜ್‌ಕೊ ಪಾಯ

ನೈಜತನದ ಆತ್ಮವುಳ್ಳ ಹಝ್ರತ್ ಮೌಲಾನಾ ನೂರುದ್ದೀನ್ ಸಾಹಿಬ್(ರ.ಅ)ರವರು ಮೊಟ್ಟಮೊದಲಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರನ್ನು ನೊಂಬಿ ಬೈಅತ್ ಸ್ವೀಕರಿಸಿ ಅಹ್ಮದಿಯಾ ಜಮಾಅತ್ತಿನಲ್ಲಿ ಪ್ರವೇಶಿಸಿದರು ತದನಂತರ ಅವರು ತಮ್ಮ ವಿಶೇಶ ನೈತಿಕತೆಯಿಂದ ಮತ್ತು ತ್ಯಾಗದ ಫಲವಾಗಿ ಖಲೀಫತುಲ್ ಮಸೀಹ್ ಅವ್ವಲ್(ರ)(ವಾಗ್ದಾತ್ತ ಮಸೀಹನಿಗೆ ಪ್ರಥಮ ಖಲೀಫರು) ಆದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರಿಗೆ ಹೀಗೆ ಬರೆಯುತ್ತಾರೆ:

"ನಾನು ನಿಮ್ಮ ದಾರಿಯಲ್ಲಿ ಸಮರ್ಪಿತನಾಗಿದ್ದೇನೆ, ನನ್ನದು ಎಂದು ಏನಿದೆಯೋ ಅದು ಈಗ ನಿಮ್ಮದಾಗಿದೆ, ಓ ನನ್ನ ಧರ್ಮಗುರುಗಳೇ!! ನಾನು ಪ್ರಾಮಾಣಿಕವಾಗಿ ವಿನಂತಿಸುವುದೇನೆಂದರೆ ನನ್ನ ಎಲ್ಲಾ ಸಂಪತ್ತು ಮತ್ತು ಆಸ್ತಿಯನ್ನು ಧಾರ್ಮಿಕ ಪ್ರಕಟಣೆಗೆ ಖರ್ಚು ಮಾಡಿದರೆ, ನಿಜವಾಗಿಯೂ ನಾನು ಆಸೆಯೂ ಪೂರ್ಣಗೊಳ್ಳುತ್ತದೆ." (ಫತಾಹ್–ಎ–ಇಸ್ಲಾಂ, ಪುಟ–36)

ತದನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಅವರಿಗೆ ಗೌರವ ಸಲ್ಲಿಸುತ್ತಾ ಹೀಗೆ ಬರೆಯುತ್ತಾರೆ:

"ನನು ಅವರು ತಮ್ಮ ಧರ್ಮಸಮ್ಮತವಾದ ಸಂಪತ್ತಿನಿಂದ ಇಸ್ಲಾಮ್ ಧರ್ಮದ ಏಳಿಗೆಗಾಗಿ ಮಾಡುತ್ತಿರುವ ಕೆಲವು ಧಾರ್ಮಿಕ ಸೇವೆಗಳನ್ನು ಬಹಳ ಹತಾಶೆಯಿಂದ ನನಗೂ ಇಂತಹ ಅವಕಾಶ ದೊರಕುತ್ತಿದ್ದರೆ ನನು ಸಹ ಇಂತಹ ಸೇವೆಗಳನ್ನು ಮಾಡುತ್ತಿದ್ದೆ ಎಂದು ನೋಡುತ್ತೇನೆ. ಅವರಿಗೆ ನನ್ನ ಮಾರ್ಗದಲ್ಲಿ ಸಂಪತ್ತೇನು, ಜೀವ ಮತ್ತು ಗೌರವವನ್ನು ಸಹ ಅರ್ಪಿಸಲು ಸಿದ್ಧರಗಿರುತ್ತಾರೆ." (ಫತಾಹ್–ಎ–ಇಸ್ಲಾಂ, ಪುಟ–35)

ಹಝ್ರತ್ ಮೌಲಾನಾ ನೂರ್–ಉದ್–ದೀನ್ ಸಾಹಿಬ್ ಅವರಂತೆ, ತ್ಯಾಗ ಮತ್ತು ಸೇವೆಗಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದ ಅನೇಕ ಹಿರಿಯರಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುವಂತೆ: "ನನ್ನನ್ನು ಪ್ರಾಮಾಣಿಕವಾಗಿ ನಂಬಿದ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುತ್ತಿರುವ ನನ್ನ ಜಮಾಅತ್ತಿನಲ್ಲಿ ಕನಿಷ್ಠ ಒಂದು ಲಕ್ಷ (100,000) ಜನರಿದ್ದಾರೆ ಎಂದು ನಾನು ಪ್ರಮಾಣ ಮಾಡಬಲ್ಲೆ. ನಾನು ನೋಡುವುದೇನೆಂದರೆ ನನ್ನ ಜಮಾಅತ್ ಎಷ್ಟರ ಮಟ್ಟಿಗೆ ಉತ್ತಮ ಕಾರ್ಯಗಳಲ್ಲಿ ಅಭಿವೃದ್ಧಿ ಹೊಂದಿದ್ದಾರೆ ಎಂದರೆ ಅದು ಸಹ ಒಂದು ಪವಾಡ ಆಗಿದೆ. ಸಾವಿರಾರು ಜನರು ಹೃತ್ಪೂರಕವಾಗಿ ತ್ಯಾಗಿಗಳಾಗಿದ್ದಾರೆ ಇಂದು ನಾನು ಅವರನ್ನು ತಮ್ಮ ಸಂಪೂರ್ಣ ಸಂಪತ್ತನ್ನು ತ್ಯಜಿಸಲು ಆದೇಶಿಸಿದರೆ ಅವರು ಅದನ್ನು ಮಾಡಲು ಸಿದ್ಧರಾಗಿದ್ದಾರೆ." (ಸಿರತ್ ಅಲ್–ಮಹ್ದಿ ಭಾಗ–1, ಪುಟ–145)

ಹೀಗೆ ಅಹ್ಮದಿಯಾ ಜಮಾಅತ್ತಿನ ಇತಿಹಾಸದಲ್ಲಿ ಹಝ್ರತ್ ಮಸೀಹ್ ಮೌಊದ ಅಲೈಹಿಸ್ಸಲಾಮ್‌ರವರ ಧ್ವನಿಗೆ ಪ್ರತಿಕ್ರಿಯಿಸಿದ ಅನೇಕ ಜನರ ಉದಾಹರಣೆ ಇದೆ. ಅವರೆಲ್ಲರು ಎಲ್ಲಾ ರೀತಿಯ ಧಾರ್ಮಿಕ ಅಗತ್ಯಗಳನ್ನು ಪೂರೈಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಸೇವೆಯಲ್ಲಿ ತನು, ಮನ ಹಾಗೂ ಸಂಪತ್ತನ್ನು ನೀಡಲು ಸಿದ್ಧರಿದ್ದಾರೆ.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ

ಲುಧಿಯಾನದಲ್ಲಿ ಒಂದು ಜಾಹೀರಾತನ್ನು ಪ್ರಕಟಿಸಲು 60 ರೂಪಾಯಿಯ ಅವಶುಯಕತೆ ಬೀರಿತು. ಆ ಸಮಯದಲ್ಲಿ ನಿಮ್ಮ ಓರ್ವ ಸಹಾಬ ಹಝ್ರತ್ ಮುನ್‌ಶಿ ಝಫರ್ ಅಹ್ಮದ್ ಸಾಹಿಬ್(ರ) ಲುಧಿಯಾನಕ್ಕೆ ಆಗಮಿಸಿದರು. ಹುಝೂರ್(ಅ) ಅವರಿಗೆ ಕರೆಸಿ ಹೇಳಿದರು, "ಈ ಸಮಯದಲ್ಲಿ ಈ ಮುಖ್ಯವಾದ ಅವಶ್ಯಕತೆ ಇದೆ ನಿಮ್ಮ ಜಮಾಅತ್ತಿಗೆ ಇಷ್ಟು ಹಣದ ವ್ಯವಸ್ಥೆ ಮಾಡಲು ಆಗುತ್ತದೆಯೇ? ಅದಕ್ಕೆ ಅವರು ಹೇಳಿದರು ಇನ್ಶಾಅಲ್ಲಾಹ್ ಹುಝೂರ್ ವ್ಯವಸ್ಥೆ ಮಾಡುತ್ತಾರೆ. ನಾನು ಹೋಗಿ ಹಣ ತರುತ್ತೇನೆ ಎಂದು ಅವರು ಅಲ್ಲಿಂದ ಶೀಘ್ರವಾಗಿ ಕಪೂರ್‌ಥಾಲಕ್ಕೆ ಹೋಗಿ ಜಮಾಅತ್ತಿನ ಯಾವುದೇ ಸದಸ್ಯರನ್ನು ಹೇಳದೆ ತಮ್ಮ ಮಡದಿಯ ಒಂದು ಆಭರಣವನ್ನು ಮಾರಿ 60/- ಪಡೆದು ಹಝ್ರತ್ ಸಾಹಿಬ್‌ರವರ ಸೇವೆಗೆ ನೀಡಿದರು.

(ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-41)

ಈ ವರದಿಯು ಬಹಳ ದೊಡ್ಡದಾಗಿದೆ. ಮುನ್‌ಶಿ ಝಫರ್ ಅಹ್ಮದ್ ಸಾಹಿಬ್(ರ) ರವರು ತಮ್ಮ ಜಮಾಅತ್ತಿನ ಸದಸ್ಯರಿಗೆ ಈ ಸಾಂಪತ್ತಿ ತ್ಯಾಗದ ಬಗ್ಗೆ ಹೇಳದೆ ಸ್ವತಃ ಈ ತ್ಯಾಗ ಮಾಡಿದ್ದರು. ಈ ಘಟನೆಯ ಬಗ್ಗೆ ನಂತರ ಹಝ್ರತ್ ಮುನ್‌ಶಿ ಅರೋಡೆ ಖಾನ್ ಸಾಹಿಬ್(ರ) ಅವರು ತಿಳಿದಾಗ ಅವರು ಆರು ತಿಂಗಳು ಮುನ್ನಿ ಜಾಫರ್ ಸಾಹಿಬ್ ಮೇಲೆ ಕೋಪಗೊಂಡಿದ್ದರು. ನೀವು ನಮ್ಮನ್ನು ಆರ್ಥಿಕ ತ್ಯಾಗದಿಂದ ವಂಚಿತಗೊಳಿಸಿದ್ದೀರಿ ಎಂದು. ಇಂತಹ ತ್ಯಾಗಿಗಳಖನ್ನು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನೋಈಡಿದ್ದನು.

ಹಝ್ರತ್ ಅಮ್ಮಾ ಜಾನ್ ಸೈಯದ ನುಸ್ರತ್ ಜಹಾನ್ ಬೇಗಂ ಸಾಹಿಬಾ(ರ) ಅವರ ಬಗ್ಗೆ ತಿಳಿದು ಬರುತ್ತದೆ ಅವರು ಮಿನಾರತುಲ್ ಮಸೀಹಿನ ನಿರ್ಮಾಣಕ್ಕಾಗಿ ಒಂದು ಸಾವಿರ ರೂಪಾಯಿಯ ವಾಗ್ದಾನ ಮಾಡಿದ್ದರು ಅದಕ್ಕಾಗಿ ಅವರು ತಮ್ಮ ದೆಹಲಿಯ ಮನೆಯನ್ನು ಮಾರಿ ಅದರ ಹಣವನ್ನು ನೀಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಿನಾರತುಲ್ ಮಸೀಹ್ ನಿರ್ಮಾಣವನ್ನು ಪ್ರಾರಂಭಿಸಿದಾಗ, ಹಝ್ರತ್ ಮಿಯಾಂ ಶಾದಿ ಖಾನ್ ಸಾಹಿಬ್ ಸಿಯಾಲಕೋಟಿ(ರ) ಅವರು ತಮ್ಮ ಮೂರು ಹಾಸಿಗೆಗಳನ್ನು (ಚಾರ್‌ಪಾಯಿ) ಹೊರತುಪಡಿಸಿ ಎಲ್ಲಾ ಮನೆಯ ವಸ್ತುಗಳನ್ನು ಮುನ್ನೂರು ರೂಪಾಯಿಗಳಿಗೆ ಮಾರಿ ಆ ಹಣವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೇವೆಗೆ ಅರ್ಪಿಸಿದರು. ಇದನ್ನು ಕಂಡು ಹಝ್ರತ್ ಮಸೀಹ್ ಮೌಊದ್ ಅಲಯಹಿಸ್ಸಲಾಮ್‌ರವರು ಸಂತೋಷವನ್ನು ವ್ಯಕ್ತಪಡಿಸುತ್ತಾ, "ನೀವು ಹಝ್ರತ್ ಅಬೂಬಕರ್(ರ) ಅವರ ಉದಾಹರಣೆಯನ್ನು ತೋರಿಸಿದ್ದೀರ" ಎಂದು ಹೇಳಿದರು. ಇದನ್ನು ಕೇಳಿದ ತಕ್ಷಣ ಅವರು ಮನೆಗೆ ಮರಳಿದರು. ತಮ್ಮ ಬಳಿದಿದ್ದ ಆ ಹಾಸಿಗೆಗಳನ್ನು ಸಹ ಮಾರಿ ಬಂದ ಹಣವನ್ನೆಲ್ಲ ಚಂದದಲ್ಲಿ ನೀಡಿದರು. (ತಾರೀಖ್ ಅಹ್ಮದಿಯತ್ ಸಂಪುಟ-2, ಪುಟ-147)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಮಿಯಾಂ ಶಾದಿ ಖಾನ್ ಸಿಯಾಲ್‌ಕೋಟ್‌ನ ಪೆಟ್ಟಿಗೆ ಮಾರುವವರಾಗಿದ್ದರು. ಈಗಷ್ಟೆ ಅವರು ಒಂದು ಕಾರ್ಯಕ್ಕಾಗಿ 150/- ಚಂದವಾಗಿ ನೀಡಿದ್ದರು ಮತ್ತು ಈಗ ಈ ಕಾರ್ಯಕ್ಕೆ 200/- ಚಂದವಾಗಿ ಕಳುಹಿಸಿದರು. ಇವರು ನಂಬಲರ್ಹ ವ್ಯಕ್ತಿಯಾಗಿದ್ದು, ಅವರ ಮನೆಯ ಎಲ್ಲಾ ವಸ್ತುಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಬಹುಶಃ ಎಲ್ಲಾ ಆಸ್ತಿ. ಐವತ್ತು ರೂಪಾಯಿಗಿಂತ ಹೆಚ್ಚಿಗೆ ಆಗುವುದಿಲ್ಲ. ಅವರು ತಮ್ಮ ಒಂದು ಪತ್ರದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ "ಇದು ಬರಗಾಲವಾಗಿದೆ ಮತ್ತು ಲೌಕಿಕ ವ್ಯವಹಾರದಲ್ಲಿ ನಷ್ಟವಾಗುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಆದ್ದರಿಂದ ಧಾರ್ಮಿಕ ವ್ಯವಹಾರ ನಡೆಸುವುದು ಒಳ್ಳೆಯದು, ಆದ್ದರಿಂದ ತಮ್ಮ ಬಳಿ ಇದ್ದ ಎಲ್ಲಾ ವಸ್ತುಗಳನ್ನು ಮಾರಿದರು. ವಾಸ್ತವವಾಗಿ ಅವರು ಹಝ್ರತ್ ಅಬೂ ಬಕರ್(ರ)ರವರು ಮಾಡಿದ ಕೆಲಸ ಮಾಡಿದರು. (ಮಜ್‌ಮುಆ ಇಶ್ತಿಹಾರಾತ್, ಸಂಪುಟ-3, ಪುಟ-315, ಇಶ್ತಿಹಾರ್ 1 ಜುಲೈ 1900)

ಹಝ್ರತ್ ಮೊಸ್ಲೆಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಡಾ॥ ಖಲೀಫಾ ರಶೀದ್-ಉದ್-ದೀನ್ ಸಾಹಿಬ್(ರ) ಅವರ ತ್ಯಾಗವು ತುಂಬಾ ದೊಡ್ಡದಾಗಿದೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನೀವು ಭವಿಷ್ಯದಲ್ಲಿ ತ್ಯಾಗ ಮಾಡುವ ಅಗತ್ಯವಿಲ್ಲ ಎಂದು ತ್ಯಾಗ ಮಾಡುವ ಲಿಖಿತ ಪ್ರಮಾಣಪತ್ರವನ್ನು ನೀಡಿದ್ದರು. ನನಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮೇಲೆ ಗುರ್‌ದಾಸ್ಪುರದಲ್ಲಿ ನಡೆದ ಮುಖದ್ದಮೆಯ ಆ ಕಾಲವು ನೆನಪಿಗೆ ಬರುತ್ತಿದೆ ಆ ಕಾಲದಲ್ಲಿ ಹಣದ ಅವಶ್ಯಕತೆ ಇತ್ತು. ಹಝ್ರತ್ ಸಾಹಿಬ್ ಅವರು ತಮ್ಮ ಸ್ನೇಹಿತರಿಗೆ ಬರೆದರು, ಏಕೆಂದರೆ ವೆಚ್ಚಗಳು ಹೆಚ್ಚಾಗುತ್ತಿವೆ. ಲಂಗರ್ ಖಾನಗಳು ಎರಡು ಆಗಿವೆ, ಒಂದು ಖಾದಿಯನ್‌ನಲ್ಲಿ ಮತ್ತು ಇನ್ನೊಂದು ಗುರ್ದಾಸ್ಪುರನಲ್ಲಿ. ಅದಲ್ಲದೆ ಮುಖದ್ದಮೆಯಲ್ಲಿಯೂ ವ್ಯಯವಾಗುತ್ತಿದೆ ಆದ್ದರಿಂದ ಸ್ನೇಹಿತರು ಸಹಾಯಕ್ಕಾಗಿ ಮುಂದೆ ಬರಬೇಕು. ಹಝ್ರತ್ ಸಾಹಿಬ್ ರವರ ಈ ಪತ್ರ ಡಾಕ್ಟರ್ ಸಾಹಿಬ್ ಅವರಿಗೆ ಬಂತು ಅದೇ ದಿವಸ ಡಾಕ್ಟರ್ ಸಾಹಿಬ್ ಅವರಿಗೆ 450/- ಸಂಬಳ ಸಿಕ್ಕಿತು ಆ ಸಂಬಳ ಸಂಪೂರ್ಣವಾಗಿ ಹಝ್ರತ್ ಸಾಹಿಬ್ ಅವರ ಸೇವೆಗೆ ಕಳುಹಿಸಿದರು. ಓರ್ವ ಗೆಳೆಯ ಅವರಿಗೆ ಹೇಳಿದನು ಮನೆಯ ಖರ್ಚು ವ್ಯಚ್ಚಕ್ಕಾಗಿ ಸ್ವಲ್ಪ ಹಣ ಇಟ್ಕೊಳ್ಳಬೇಕಾಗಿತ್ತು ಅದಕ್ಕೆ ಅವರು ಆತನಿಗೆ ಉತ್ತರಿಸಿದರು ಅಲ್ಲಾಹನ ಮಸೀಹನು ಬರೆಯುತ್ತಿದ್ದಾನೆ ಧಾರ್ಮಿಕ ಅವಶ್ಯಕತೆಗಾಗಿ ಹಣದ ಅವಶ್ಯಕತೆ ಇದೆ ಎಂದು ಮತ್ತೆ ಯಾರಿಗಾಗಿ ಹಣ ಇರಿಸಿಕೊಳ್ಳಬೇಕು.

(27ನೇ ಡಿಸೆಂಬರ್ 1926ರ ಜಲ್ಸ ಸಲಾನದ ಭಾಷಣ, ಅನ್ವರ್-ಉಲ್-ಉಲೂಮ್ ಸಂಪುಟ-9 ಪುಟ-403)

ಅದೇ ರೀತಿ ಹಝ್ರತ್ ಸಾಹಿಬ್ಜಾದಾ ಪೀರ್ ಮಂಜೂರ್ ಅಹ್ಮದ್ ಸಾಹಿಬ್ ಅವರ ಬಗ್ಗೆ ಹಝ್ರತ್ ಮಿರ್ಝಾ ಅಬ್ದುಲ್ ಹಖ್ಖ ಸಾಹಿಬ್ ಅಡ್ವೋಕೇಟ್ ಬರೆಯುತ್ತಾರೆ:

"ಹಝ್ರತ್ ಸಾಹಿಬ್ಜಾದಾ ಪೀರ್ ಮಂಜೂರ್ ಅಹ್ಮದ್ ಸಾಹಿಬ್ ಖಾಯಿದಃ ಯಸ್ಸರ್‌ನಲ್ ಖುರ್‌ಆನ್‌ನ ಕರ್ತೃ ಆಗಿದ್ದರು. ಈ ಖಾಯಿದ ಬಹಳ ಜನಪ್ರಿಯವಾಯಿತು. ಆ ಸಮಯದಲ್ಲಿ ಅವರಿಗೆ ತಿಂಗಳಿಗೆ ನೂರಾರು ರೂಪಾಯಿಗಳ ಆದಾಯವಾಗುತ್ತಿತ್ತು ಆದರೆ ಧರ್ಮಕ್ಕಾಗಿ ನಿಮ್ಮ ತ್ಯಾಗ ಹೇಗಿತ್ತು ಎಂದರೆ ನೀವು ತಿಂಗಳಿಗೆ ಕೇವಲ 30 ರೂಪಾಯಿಗಳನ್ನು ನಿಮ್ಮ ಖರ್ಚಿಗೆ ಮತ್ತು ಉಳಿದ ಹಣವನ್ನು ಹಝ್ರತ್ ಮೊಸ್ಲೇಹ್ ಮೌದ್(ರ) ಅವರ ಸೇವೆಯಲ್ಲಿ ಪವಿತ್ರ ಖುರ್‌ಆನ್‌ನ ಪ್ರಕಟಣೆಗಾಗಿ ಮತ್ತು ಧರ್ಮದ ಪ್ರಕಟಣೆಗಾಗಿ ಕಳುಹಿಸುತ್ತಿದ್ದರು. 1940ರ ನಂತರ, ಹಣದುಬ್ಬರ ಪ್ರಾರಂಭವಾದಾಗ, ಅವರು ತಿಂಗಳಿಗೆ ರೂ 40/- ತಮ್ಮ ಬಳಿ ಇಟ್ಟುಕೊಳ್ಳಲು ಪ್ರಾರಂಭಿಸಿದರು ಮತ್ತು ಒಂದು ವರ್ಷದಲ್ಲಿ 10000/-ರೂಪಾಯಿಯನ್ನು ಧಾರ್ಮಿಕ ಸೇವೆಗಾಗಿ ಕಳುಹಿಸಿದರು." (ಮಾಹ್ ನಾಮ ಅನ್ಸಾರುಲ್ಲ ರಬಾಹ್ ಏಪ್ರಿಲ್ 1969)

ಆತ್ಮೀಯ ಕೇಳುಗರೇ! ಅತ್ಯಂತ ಸೂಕ್ಷ್ಮ ಹಾಗೂ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಮನದಾಳದ ಭಾವನೆಗಳನ್ನು ಬಲಿಕೊಡುವುದು, ಅಲ್ಲಾಹನಿಗೆ ನೈವೇದ್ಯ ಅರ್ಪಿಸುವುದು ಕ್ಷುಲ್ಲಕ ಸಂಗತಿಯಾಗಿದೆ. ಅವುಗಳಲ್ಲಿ ಹಲವಾರು ಅಹ್ಮದೀಯತ್ ಇತಿಹಾಸದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತವೆ. ಹಝ್ರತ್ ಖಾಜಿ ಮುಹಮ್ಮದ್ ಯೂಸುಫ್ ಸಾಹಿಬ್(ರ) ಪೇಶಾವರಿಯವರು ಹಝ್ರತ್ ಮಸೀಹ್ ಮೌದ್ ಅಲೈಹಿಸ್ಸಲಾಮ್ ಅವರ ಕಾಲದ ಒಂದು ಘಟನೆಯನ್ನು ವಿವರಿಸಿದ್ದಾರೆ:

"ವಜೀರಾಬಾದ್‌ನ ಶೇಖ್ ಕುಟುಂಬದ ಯುವಕ ಸಾವನ್ನಪ್ಪಿದನು. ಅವರ ತಂದೆ ಹೆಣದ ಬಟ್ಟೆಗಾಗಿ (ಕಫನ್) 200ರೂ. ಇಟ್ಟಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವು ಲಂಗರ್ ಖಾನದ ವ್ಯಚ್ಚಕ್ಕಾಗಿ ಬರೆದರು. ಆ ಪತ್ರ ಅವರಿಗೂ ತಲುಪಿತು ಅದಕ್ಕೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೇವೆಗೆ ಹಣ ಕಳುಹಿಸಿದ ನಂತರ ಬರೆದರು ನನ್ನ ಮಗು ಪ್ಲೇಗ್‌ನಿಂದ ನಿಧನ ಹೊಂದಿದ್ದಾನೆ ನಾನು ಆತನ ಕಫನ್‌ಗಾಗಿ 200/- ಇಟ್ಟಿದ್ದೆ ಆ ಹಣವನ್ನೇ ನಾನು ಕಳುಹಿಸುತ್ತಿದ್ದೆ ಅವನಿಗೆ ಅವನು ಧರಿಸಿದ ಬಟ್ಟೆಯಲ್ಲೇ ದಫನ್ ಮಾಡಿದ್ದೇನೆ." (ರಿಸಾಲ ಝುಹೂರ್ ಅಹ್ಮದ್, ಪುಟ-70-71, ಮುದ್ರಿತ 30-01-1955)

ಹಝ್ರತ್ ಮುಹಮ್ಮದ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ:

ನಾನು ಆ ದೃಶ್ಯವನ್ನು ಮರೆಯಲು ಸಾಧ್ಯವಿಲ್ಲ ಅದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ನಿಧನರಾಗಿ ಕೆಲವೇ ತಿಂಗಳುಗಳು ಕಳೆದಿತ್ತು, ಒಂದು ದಿನ ಹೊರಗಿನಿಂದ ಯಾರೋ ನನ್ನನ್ನು ಕರೆದರು, ಸೇವಕನೊಬ್ಬನು ಅಥವಾ ಯಾವುದೋ ಮಗು ಒಬ್ಬನೋ ಹೇಳಿದನು ಯಾರೋ ಓರ್ವ ವ್ಯಕ್ತಿ ನಿಮ್ಮನ್ನು ಬಾಗಿಲ ಬಳಿ ಕಾಯುತ್ತಿದ್ದಾರೆ ಎಂದು ಹೇಳಿದರು. ತದನಂತರ ನಾನು ಹೊರಗೆ ಬಂದಾಗ ಹಝ್ರತ್ ಮುನ್‌ಶಿ ಅರೋಡೆ ಖಾನ್ ಸಾಹೇಬರು ನಿಂತಿದ್ದರು. ಅವನು ತುಂಬಾ ಆತ್ಮೀಯತೆಯಿಂದ ಮುಂದಕ್ಕೆ ಬಂದು ನನಗೆ ತಬ್ಬಿಕೊಂಡರು. ತದನಂತರ ಅವರು ತನ್ನ ಜೇಬಿನಿಂದ ಎರಡು ಅಥವಾ ಮೂರು ಪೌಂಡ್‌ಗಳನ್ನು ತೆಗೆದು ಇದು ಅಮ್ಮಾ ಜಾನ್‌ಗೆ ನೀಡಿರಿ ಎಂದು ಹೇಳಿದರು. ಹೀಗೆ ಹೇಳುತ್ತ ಅವರು ಭಾವುಕರಾಗಿ ಅಳಲು ಪ್ರಾರಂಭಿಸಿದರು, ಅವರ ಅಳುವು ಹೇಗಿತ್ತು ಎಂದರೆ ಯಾವುದೋ ಮೇಕೆಯನ್ನು ಕೊಲ್ಲುತ್ತಿರುವಂತೆ ತೋರುತ್ತಿತ್ತು. ನಾನು ಇವರನ್ನು ನೋಡಿ ಬಹಳ ಆಶ್ಚರ್ಯಗೊಂಡೆನು. ಆದರೆ ನಾನು ಸುಮ್ಮನಿದ್ದು ಅವರ ಅಳುವಿನ ಕಾರಣವನ್ನು ಕಂಡುಹಿಡಿಯಬಹುದೆಂದು ಅವರು ಮೌನವಾಗಿರಲು ಕಾಯುತ್ತಿದ್ದೆ.......... ಅವರು ಸ್ವಲ್ಪ ಶಾಂತರಾದಾಗ ನಾನು ಯಾಕೆ ಅಳುತ್ತೀಯ ಅಂತ ಕೇಳಿದೆ. ನಾನು ಬಡವನಾಗಿದ್ದೇನೆ ಎಂದು ಹೇಳಿದರು. ಆದರೆ ರಜೆ ಸಿಕ್ಕಾಗಲೆಲ್ಲ ನಾನು ಖಾದಿಯಾನ್‌ಗೆ ಪ್ರಯಾಣಿಸಲು ಪ್ರಾರಂಭಿಸುತ್ತಿದ್ದೆ ಪ್ರವಾಸದ ಬಹಳಷ್ಟು ದೂರವನ್ನು ನಾನು ಕಾಲ್ನಡಿಗೆಯಲ್ಲಿ ಕಳೆಯುತ್ತಿದ್ದೆ ಇದರ ಕಾರಣ ಜಮಾಅತ್ತಿನ ಸೇವೆಯಲ್ಲಿ ಹಣದ ಉಳಿತಾಯವಾಗಿತ್ತು. ಆದರೂ 1.50 ರೂಪಾಯಿ ಖರ್ಚು ಆಗುತ್ತಿತ್ತು. ಇಲ್ಲಿ ತಲುಪಿದ ನಂತರ ನಾನು ನೋಡುವುದೇನೆಂದರೆ ಅನೇಕ ಶ್ರೀಮಂತರು ಜಮಾಅತ್ತಿನ ಸೇವೆಯಲ್ಲಿ ಬಹಳಷ್ಟು ಹಣ ನೀಡುತ್ತಿದ್ದಾರೆ ಆಗ

ನನ್ನ ಮನಸ್ಸಿನಲ್ಲಿಯೂ ನನ್ನ ಬಳಿಯೂ ಬಹಳಷ್ಟು ಹಣವಿರುತ್ತಿದ್ದರೆ ನಾನು ಹೀಗೆ ತ್ಯಾಗ ಮಾಡಬಹುದಾಗಿತ್ತು ಎಂದು. ಹೀಗೆ ನಾನು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೇವೆಯಲ್ಲಿ ಸೇವೆಯಲ್ಲಿ ಬೆಳ್ಳಿಯ ಉಡುಗೊರೆಗೆ ಬದಲಾಗಿ ಚಿನ್ನದ ಉಡುಗೊರೆಯನ್ನು ನೀಡುತ್ತೇನೆ. ಕೊನೆಗೆ ನನ್ನ ಸಂಬಳ ಸ್ವಲ್ಪ ಹೆಚ್ಚಾಯಿತು. (ಆ ಸಮಯದಲ್ಲಿ ಅವರ ಸಂಬಳ ಬಹುಶಃ ರೂ.25 ತಲುಪಿತ್ತು) ಮತ್ತು ನಾನು ಅದನ್ನು ಮತ್ತೆ ಪ್ರತಿ ತಿಂಗಳು ಸಂಗ್ರಹಿಸಲು ಪ್ರಾರಂಭಿಸಿದೆ. ಮತ್ತು ಈ ಮೊತ್ತವು ನನಗೆ ಬೇಕಾದ ಮೊತ್ತಕ್ಕೆ ಯಾವಾಗ ತಲುಪುತ್ತದೆಯೋ ಆಗ ನಾನು ಅದನ್ನು ಪೌಂಡ್ ರೂಪದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೇವೆಯಲ್ಲಿ ಅರ್ಪಿಸುವೆನು ಎಂದು ನಾನು ನನ್ನ ಹೃದಯದಲ್ಲಿ ನಿರ್ಧರಿಸಿದೆ....... ಈಗ ಆ ಮೊತ್ತವು ಪೌಂಡ್ ತನಕ ತಲುಪಿದೆ. ಇಷ್ಟು ಹೇಳಿದ ಬಳಿಕ ಇಲ್ಲಿಗೆ ಅವರು ಇನ್ನೂ ಭಾವುಕರಾಗಿ ಅಳಲು ಪ್ರಾರಂಭಿಸಿದರು. ಕೋನೆಗೆ ಅವರು ತಮ್ಮ ಮಾತುಗಳನ್ನು ಹೀಗೆ ಮುಕ್ತಾಯಗೊಳಿಸಿದರು 'ನನ್ನ ಬಳಿ ಪೌಂಡ್ ಸಂಗ್ರಹವಾದಾಗ ಹಝ್ರತ್ ಮಸೀಹ್ ಮೌಊದ್(ಅ) ರವರು ನಿಧನಹೊಂದಿದ್ದರು.'

ಈ ನಿಷ್ಠೆಯ ಅದ್ಭುತ ನಮೂನೆಯಾಗಿದೆ ಓರ್ವ ವ್ಯಕ್ತಿ ಚಂದವೂ ನೀಡುತ್ತಾನೆ, ತ್ಯಾಗಗಳನ್ನು ಮಾಡುತ್ತಾನೆ, ಒಂದು ತಿಂಗಳಲ್ಲಿ ಒಮ್ಮೆ, ಅಲ್ಲ ಎರಡು ಬಾರಿ ಅಲ್ಲ, ಮೂರು ಮೂರು ಬಾರಿ ಖಾದಿಯಾನ್‌ಗೆ ಜುಮ ನಿರ್ವಹಿಸಲು ಆಗಮಿಸುತ್ತಾರೆ. ಜಮಾಅತ್ತಿನ ಪತ್ರಿಕೆಗಳನ್ನು ಹಾಗೂ ಪುಸ್ತಕಗಳನ್ನೂ ಸಹ ಖರೀಸುತ್ತಾರೆ. ಒಂದು ಸಾಮಾನ್ಯ ಸಂಬಳ ಇರುವವರು ಆದರೆ ಇಂದಿನ ಪರಿಸ್ಥಿತಿ ವಿಭಿನ್ನವಾಗಿದೆ ಉತ್ತಮ ಸಂಬಳಗಳನ್ನು ಪಡೆಯುವವರು ಇದರ ಶೇ. 10ರಷ್ಟು ಅಲ್ಲ ಬದಲಿಗೆ ಶೇ. 20ರಷ್ಟೂ ಖರ್ಚು ಮಾಡುವುದಿಲ್ಲ. ಆತನ ಮನಸ್ಸಿನಲ್ಲಿ ಯೋಚನೆ ಬರುವುದೇನೆಂದರೆ ಶ್ರೀಮಂತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೇವೆಯಲ್ಲಿ ಚಿನ್ನ ನೀಡುತ್ತಿದ್ದರೆ ನಾನೇಕೆ ಅವರ ಹಿಂದಿರಲು. ಹಾಗಾಗಿ ಅತಿ ಕಡಿಮೆ ಸಂಬಳದಿಂದ ತಿಂಗಳಿಗೆ ಒಂದಿಷ್ಟು ಹಣವನ್ನು ಉಳಿಸುತ್ತಿದ್ದರು. ಮತ್ತು ದೀರ್ಘಕಾಲ ಸಂಗ್ರಹಿಸುತ್ತದ್ದರು. ಈ ಸಮಯದಲ್ಲಿ ಅವರು ತಮ್ಮ ಮನೆಯಲ್ಲಿ ಯಾವ ಕಷ್ಟಗಳನ್ನು ಸಹಿಸಿಕೊಂಡರೋ ನನಗೆ ತಿಳಿದಿಲ್ಲ, ಅದು ಈಡೇರುವ ಸಮಯ ಬಂದಾಗ, ಸರ್ವಶಕ್ತನಾದ ಅಲ್ಲಾಹನ ಹಿಕ್ಮತ್ ಅವರನ್ನು ಅದನ್ನು ನೋಡಲು ಬಯಸಿದ ಬಣ್ಣದಲ್ಲಿ ಸಂತೋಷವನ್ನು ಪಡೆಯುವುದನ್ನು ಕಸಿದುಕೊಳ್ಳುತ್ತಾನೆ. (ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–74–76)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಹೀಗೆ ನಮ್ಮ ಆತ್ಮೀಯ ಮೌಲ್ವಿ ಮುಹಮ್ಮದ್ ಅಹ್ಸನ್ ಸಾಹಿಬ್ ಅಮ್ರೋಹಿ(ರ) ಅವರು ಈ ಜಮಾಅತ್ತನ್ನು ಬೆಂಬಲಿಸಲು ಅನೇಕ ಉತ್ತಮ ಸಂಕಲನಗಳನ್ನು ಸಂಗ್ರಹಿಸುವಲ್ಲಿ ಸಕ್ರಿಯರಾಗಿದ್ದಾರೆ. ಮತ್ತು ಸಾಹಿಬ್ಜಾದಾ ಪೀರ್ ಜೀ ಸಿರಾಜ್–ಉಲ್–ಹಖ್ ಸಾಹೀಬರು ತಮ್ಮ ಸಾವಿರಾರು ಅನುಯಾಯಿಗಳನ್ನು ತ್ಯಜಿಸಿ ಈ ಸ್ಥಳದ ಬಡತನದ ಜೀವನವನ್ನು ಸ್ವೀಕರಿಸಿದರು. ಮತ್ತು ಮಿಯಾಂ ಅಬ್ದುಲ್ಲಾ ಸಾಹಿಬ್ ಸುನ್ನೋರಿ ಮತ್ತು ಮೌಲ್ವಿ ಬುರ್‌ಹಾನ್–ಉದ್–ದೀನ್ ಸಾಹಿಬ್ ಜೆಹಲ್ಮಿ ಮತ್ತು ಮೌಲ್ವಿ ಮುಬಾರಕ್ ಅಲಿ ಸಾಹಿಬ್ ಸಿಯಾಲ್ಕೋಟಿ ಮತ್ತು ಖಾಜಿ ಜಿಯಾ–ಉದ್–ದೀನ್ ಸಾಹಿಬ್ ಖಾಜಿ ಕೋಟಿ ಮತ್ತು ಮುನ್‌ಶಿ ಚೌಧ್ರಿ ನಬಿಬಕ್ಷ್ ಸಾಹಿಬ್ ಬಟಾಲ್ವಿ ಜಿಲ್ಲೆ ಗೋರ್ದಾಸ್ಪುರ, ಮತ್ತು ಮುನ್‌ಶಿ ಜಲಾಲುದ್ದೀನ್ ಸಾಹಿಬ್ ಮತ್ತು ಇತರರು ಅವರವರ ಶಕ್ತಿಗೆ ತಕ್ಕಂತೆ ಸೇವೆಯಲ್ಲಿ ನಿರತರಾಗಿದ್ದಾರೆ. ನಾನು ನನ್ನ ಜಮಾಅತ್ತಿನ ಸದಸ್ಯರ ನಿಷ್ಠೆ ಹಾಗೂ ಪ್ರೀತಿಯನ್ನು ಬಹಳ ಆಶ್ಚರ್ಯದಿಂದ ನೋಡುತ್ತೇನೆ ಅವರನ್ನು ಬಹಳಷ್ಟು ಜನ ಬಹಳ ಕಡಿಮೆ ಆದಾಯದವರಾಗಿದ್ದಾರೆ ಉದಾಹರಣೆಗೆ ಮಿಯಾಂ ಜಮಾಲುದ್ದೀನ್ ಮತ್ತು ಖೈರುದ್ದೀನ್ ಮತ್ತು ಇಮಾಮುದ್ದೀನ್ ಕಾಶ್ಮೀರಿ ಅವರಂತಹ ಕೆಲವೇ ಜನರು ನನ್ನ ಗ್ರಾಮದ ಬಳಿ ವಾಸಿಸುತ್ತಿದ್ದಾರೆ. ಆ ಮೂರು ಬಡ ಸಹೋದರರು, ಮೂರು ಆನೆ ಅಥವಾ ನಾಲ್ಕು ಆನೆಯನ್ನು ಪ್ರತಿದಿನ ಕೆಲಸ ಮಾಡಿ ದುಡಿಯುತ್ತಿರಬಹುದು ಆದರೆ ಅವರು ಮಾಸಿಕ ದೇಣಿಗೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಸ್ನೇಹಿತ ಮಿಯಾಂ ಅಬ್ದುಲ್ ಅಝೀಝ್ ಪಟ್ವಾರಿ ಅವರ ನಿಷ್ಠೆಯಿಂದ ನನಗೆ ಆಶ್ಚರ್ಯವಾಗುತ್ತದೆ ಬಹಳ ಕಡಿಮೆ ದೇಣಿ ಇದ್ದರೂ ಸಹ ಒಂದು ದಿವಸ ನನಗೆ 100 ರೂಪಾಯಿ ನೀಡಿ ಹೇಳಿದರು ನನ್ನ ಈ ಹಣ ಅಲ್ಲಾಹನ ಮಾರ್ಗದಲ್ಲಿ ಖರ್ಚು ಆಗಬೇಕು ಎಂದು ಬಯಸುತ್ತೇನೆ. ಆ ನೂರು ರೂಪಾಯಿ ಆ ಬಡವ ಹಲವು ವರ್ಷಗಳಿಂದ ಕೂಡಿಟ್ಟಿರಬಹುದು. ಆದರೆ ಅಲ್ಲಾಹನಿಗಾಗಿ ಹುಮ್ಮಸ್ಸು ಅಲ್ಲಾಹನ ಸಂಪ್ರೀತಿಯ ಹುಮ್ಮಸ್ಸಾಗಿ ಪರಿವರ್ತನೆಯಾಯಿತು."

(ಝಮೀಮ ಅಂಜಾಮೆ ಆಥಮ್, ರೂಹಾನಿ ಖಝಾಇನ್, ಸಂಪುಟ–11, ಪುಟ–313,314 ಅಡಿಟಿಪ್ಪಣಿ)

ಧರ್ಮದ ಮಾರ್ಗದಲ್ಲಿ ಆರ್ಥಿಕ ತ್ಯಾಗದ ಒಂದು ಶ್ರೇಷ್ಠ ಮತ್ತು ಅದ್ಭುತ ಉದಾಹರಣೆಯೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಹಾಬಿ ಹಝ್ರತ್ ಚೌಧರಿ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್ ಅಗಿದ್ದಾರೆ. ಲಂಡನ್‌ನ ಮಿಶನ್‌ನಲ್ಲಿ ಅರವತ್ತರ ದಶಕದಲ್ಲಿ ಒಂದು ಕೋರಿಕೆ ಇತ್ತು ಅದು ಏನೆಂದರೆ ಲಂಡನ್‌ನ ಕೇಂದ್ರದಲ್ಲಿ ಇರುವ ಎರಡು ಕಟ್ಟಡಗಳನ್ನು (ಅವುಗಳು ಸಾಕಷ್ಟು ಹಳೆಯವು) ಕೆಡವಿದವು ಅದರಲ್ಲಿ ಒಂದು ದೊಡ್ಡ ಕಾಂಪ್ಲೆಕ್ಸ್ ನಿರ್ಮಾಣ ಮಾಡಬೇಕು ಅದರಲ್ಲಿ ಒಂದು ದೊಡ್ಡ ಹಾಲ್, ಕಛಏರಿಗಳು, ಎರಡು ದೊಡ್ಡ ವಸತಿ ಗೃಹಗಳು ಮತ್ತು ಒಂದು ಸಣ್ಣ ವಸತಿ ಫ್ಲಾಟ್ ಇರಬೇಕು. ಈ ನಿರ್ಮಾಣ ಯೋಜನೆಗಾಗಿ ಜಮಾಅತ್ತಿನ ಬಳಿ ಆ ಕಾಲದಲ್ಲಿ ಅಗತ್ಯವಿರುವ ಒಂದು ಲಕ್ಷ ಪೌಂಡ್ ಹೊಂದಿರಲಿಲ್ಲ. ಆಗ ಬಹಳಷ್ಟು ಪರಿಶ್ರಮವಹಿಸಿಯೂ ಹಣ ಸಂಗ್ರಹವಾಗದಿದ್ದಾಗ ಹಝ್ರತ್ ಚೌಧರಿ ಸಾಹಿಬ್ ಅವರಲ್ಲಿ ನೀವು ನಮಗೆ ಈ ಹಣದ ವ್ಯವಸ್ಥೆ ಮಾಡಿಕೊಡಿರಿ ನಾವು ಸದನ್ನು ನಿಮಗೆ ನಂತರ ಕಂತುಗಳಲ್ಲಿ ಮರುಪಾವತಿ ಮಾಡುತ್ತೇವೆ. ತದ ನಂತರ ಅವರು ಇದಕ್ಕೆ ಒಪ್ಪಿಕೊಂಡರು. ನಂತರ ಪವಿತ್ರ ಖುರ್‌ಆನಿನ ಬೋಧನೆಯ ಪ್ರಕಾರ ಜಮಾಅತ್‌ನವರು ಹಝ್ರತ್ ಚೌಧರಿ ಸಅಹಿಬ್ ಅವರನ್ನು ನಿರ್ದಿಷ್ಟ ಸಮಯದಲ್ಲಿ ಒಂದು ಲಕ್ಷ ಪೌಂಡ್ ಹಣ ನೀಡಬೇಕು ಎಂದು ಒಂದು ಒಪ್ಪಂದ ಬರೆಯಲಾಯಿತು. ಸಂಜೆ ಹೊತ್ತು ಈ ಒಪ್ಪಂದದ ಪ್ರತಿಯನ್ನು ಚೌಧರಿ ಸಾಹಿಬ್ ಅವರಿಗೆ ನೀಡಿದಾಗ ಅವರು ಹೇಳಿದರು ನಾನು ಇದನ್ನು ಗಾಂಭೀರ್ಯದಿಂದ ಓದಿದ ನಂತರ ಸಹಿ ಹಾಕಿ ನಂತರ ಈ ಪತ್ರವನ್ನು ನಾಳೆ ನಿಮಗೆ ನೀಡುವನು ಎಂದು ಹೇಳಿದರು.

ಮರುದಿನ ಬೆಳಿಗ್ಗೆ, ಚೌಧರಿ ಸಾಹಿಬ್ ಹೇಳಿದರು, "ನಾನು ಅದರ ಬಗ್ಗೆ ಪ್ರಾಮಾಣಿಕವಾಗಿ ಯೋಚಿಸಿದೆ, ಆಗ ನನ್ನ ಆತ್ಮವು ನನಗೆ, ಝಫರುಲ್ಲಾ ಖಾನ್! ಇಂದು ನೀವು ಏನಾಗಿದ್ದರೂ ಅದು ಅಹ್ಮದೀಯತ್‌ಗೆ ಕಾರಣವಾಗಿದೆ. ನಿನಗೆ ಸಿಕ್ಕಿದ್ದೆಲ್ಲ ಈ ಜಮಾಅತ್ತುನ ಮಹತ್ವದಿಂದಿದೆ, ನೀನು ಈಗ ಈ ಜಮಾಅತ್ತನ್ನು ಮರುಪಾವತಿ ಸಾಲ ಕೊಡಬೇಕೆಯೇ? ಹೀಗೆ ನನ್ನ ಆತ್ಮವು ನನ್ನನ್ನು ಬಹಳವಾಗಿ ಖಂಡಿಸಿತು ಮತ್ತು ನಾನು ನನ್ನ ಉದ್ದೇಶದಿಂದ ತುಂಬಾ ನಾಚಿಕೆಪಟ್ಟೆ ಮತ್ತು ಕ್ಷಮಯಾಚನೆ ಕೇಳಿದೆ. ಆ ಸಮಯದಲ್ಲೇ ನಾನು ಹೀಗೆ ನಿರ್ಧರಿಸಿದೆ: ಜಮಾಅತ್ತಿಗೆ ಬೇಕಾಗಿರುವ ಹಣವನ್ನು ನಾನು ಸಾಲವನ್ನಾಗಿ ನೀಡುವುದಿಲ್ಲ ಬದಲಿಗೆ ವಿನಮ್ರತರಯಿಂದ ದಾನವನ್ನಾಗಿ ನೀಡುತ್ತೇನೆ ಎಂದು ಹೇಳುತ್ತಾ ಆ ಒಪ್ಪಂದವನ್ನು ಹರಿದು ಹಾಕಿ ಪಕ್ಕಕ್ಕೆ ಅಂದು ಒಂದು ಲಕ್ಷ ಪೌಂಡ್‌ಗಳ ಚೆಕ್ ನೀಡಿದರು. ಅದೇ ಸಮಯದಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಹೊರತುಪಡಿಸಿ ನನ್ನ ಜೀವನದಲ್ಲಿ ನನ್ನ ಪಾವತಿಯನ್ನು ಬೇರೆ ಯಾವುದೇ ಪತ್ರದಲ್ಲಿ ನಮೂದಿಸಬಾರದು ಎಂದು ಅವರು ವಿನಂತಿಸಿದರು. ತ್ಯಾಗ, ನಮ್ರತೆ ಮತ್ತು ಪ್ರಾಮಾಣಿಕತೆಗೆ ಎಂತಹ ಅದ್ಭುತ ಉದಾಹರಣೆಯಾಗಿದೆ ಇದು!!

ಆರ್ಥಿಕ ತ್ಯಾಗದ ಮನೋಭಾವವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬರಲ್ಲಿ ಎಷ್ಟು ಬೇರೂರಿತ್ತು ಎಂದರೆ ಅವರು ಅವರ ಹೊಸ ಶೈಲಿಯನ್ನು ಅಳವಡಿಸಿಕೊಳ್ಳುತ್ತಿದ್ದರು. ನಾನು ನಿಮಗೆ ಒಂದು ಸಣ್ಣ ಉದಾಹರಣೆಯನ್ನು ನೀಡುತ್ತೇನೆ, ಇದರಲ್ಲಿ ತ್ಯಾಗ ಮಾಡುವ ಪಹಳಷ್ಟು ಭಾವ ಕಾಣುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬರಾದ ಸಾಈಂ ದಿವಾನ್ ಶಾ ಸಾಹಿಬ್ ಅವರು ಖಾದಿಯಾನ್‌ಗೆ ಆಗಾಗ್ಗೆ ಭೇಟಿ ನೀಡಿದ ಕಾರಣವನ್ನು ವಿವರಿಸುತ್ತಾರೆ. ನಾನು ಬಡವನಾಗಿರುವುದರಿಂದ ನನಗೆ ಚಂದವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಖಾದಿಯಾನದದಗೆ ಹೋಗಿ ಅಲ್ಲಿ ಅತಿಥಿ ಗೃಹದಲ್ಲಿರುವ ಹಾಸಿಗೆಗಳನ್ನಾದರು ಸರಿಪಡಿಸಿವೆನು ಹೀಗೆ ನನ್ನ ತಲೆಯಿಂದ ಚಂದದ ಭಾರ ಇಳಿಯುವುದು." (ಅಸ್‌ಯಾಬೆ ಅಹ್ಮದ್ ಸಂಪುಟ–13, ಪುಟ–9)

ಹಝ್ರತ್ ಬಾಬು ಫಖೀರ್ ಅಲಿ ಸಾಹಿಬ್(ರ) ಅಮೃತ್ಸರಿಯವರು ಇದ್ದರು. ಹುಝೂರ್(ಅ) ಅವರ ಕಡೆಯಿಂದ ಚಂದ ವಸೂಲಿ ಮಾಡುವರು ಅವರ ಬಳಿ ತಲುಪಿದರು ಆ ಸಮಯದಲ್ಲಿ ನಿಮ್ಮ ಬಳಿ ನಗದು ಇರಲಿಲ್ಲ. ನಿಮ್ಮ ಬಳಿ ಅರ್ಧ ಸೇರು ಹಿಟ್ಟು ಇತ್ತು. ನೀವು ಅದನ್ನೆ ನೀಡಿದರು ಮತ್ತು ನೀವು ಮತ್ತು ನಿಮ್ಮ ಕುಟುಂಬದವರು ಇಡೀ ರಾತ್ರಿ ಉಪವಾಸದಲ್ಲಿ ಕಳೆದರು.

ಆರ್ಥಿಕ ತ್ಯಾಗದ ಮೈದಾನದಲ್ಲಿ ಪ್ರವಾದಿ ಮುಹಮ್ಮದ್(ಸ) ರವರ ಸಹಾಬರವರು ಮಾಡಿರುವ ತ್ಯಾಗಗಳು ಧರ್ಮಗಳ ಇತಿಹಾಸದಲ್ಲಿ ಕಾಣುವಿದಿಲ್ಲ. ಪ್ರವಾದಿ(ಸ)ರವರ ಮಾರ್ಗದರ್ಶನದಲ್ಲಿ ಸಹಾಬರವರು ಮಾಡಿರುವ ಜೀವ ಹಾಗೂ ಸಂಪತ್ತಿನ ತ್ಯಾಗಗಳನ್ನು ಅಲ್ಲಾಹನು ಸ್ವೀಕರಿಸಿದ್ದಲ್ಲದೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ವಿಶೇಷ ಉಪನಾಮವನ್ನು ಹೀಗೆ ನೀಡಿದನು: ರಝಿಯಲ್ಲಾಹು ಅನ್‌ಹುಮ್ ವರಝೂ ಅನ್ಹು.

ಅಂದರೆ ನಾನು(ಅಲ್ಲಾಹನು) ಅವರಿಂದ ರಾಜಿಯಾದನು ಮತ್ತು ಅವರು ಅಲ್ಲಹನಿಂದ ರಾಜಿಯಾದರು. ಎಂತಹ ವೈಭವಯುತವಾದ ಗೌರವವಾಗಿದೆ. ಆ ಗೌರವಾನ್ವಿತರ ಬಗ್ಗೆ ಪ್ರವಾದಿ ಮುಹಮ್ಮದ್(ಸ)ರವರು ಹೇಳಿದರು: ಅಸ್‌ಹಬಿ ಕನ್ನುಜೂಮಿ ಬಿಅಯ್ಯಿಹಿಮುಖ್ತದೈತುವಮ್ ಇಹ್‌ತಿದೈತುವಮ್ ನ್ನನ ಸಹಾಬರವರ ಹೋಲಿಕೆಯು ನಕ್ಷತ್ರಗಳ ಹೋಲಿಕೆಯಾಗಿದೆ; ನೀವು ಅವುಗಳಲ್ಲಿ ಯಾವುದನ್ನು ಅನುಸರಿಸುತ್ತೀರೋ, ನೀವು ಮಾರ್ಗದರ್ಶನ ಪಡೆಯುತ್ತೀರಿ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಿಶ್ವಾಸಿಗಳಿಗೆ ಹೇಳುತ್ತಾನೆ:

ಇನ್ನಲ್ಲಾಹ ಶ್ತರ ಮಿನಲ್ ಮುಮಿನೀನ ಅನ್‌ಫುಸಹುಮ್ ವ ಅವ್ವಾಲಹುವ್ ಬಿಅನ್ನಲಹುಮುಲ್ ಜನ್ನ (ಸೂರ: ಅತ್ತೌಬ: 112) ನಿಶ್ಚಯವಾಗಿಯೂ ಅಲ್ಲಾಹನು ವಿಶ್ವಾಸಿಗಳಿಂದ ಅವರ ಆತ್ಮಗಳನ್ನು ಮತ್ತು ಅವರ ಅಂಪತ್ತನ್ನು ಖರೀದಿಸಿದ್ದಾನೆ, ಆದ್ದರಿಂದ ಅವರಿಗೆ ಸ್ವರ್ಗದಲ್ಲಿ ಪ್ರತಿಫಲ ನೀಡಲಿ."

ಯಾವ ವ್ಯಕ್ತಿಯನ್ನು ಸರ್ವಶಕ್ತಾದ ಅಲ್ಲಾಹನಿಂದ ತನ್ನ ಜೀವಿತದಲ್ಲಿ ಸ್ವರ್ಗದ ಸಂತಸದ ಸುದ್ದಿ ಪಡಿದರೆ ನಿಸ್ಸಂದೇಹವಾಗಿಯು ಅವನು ಎಂತಹ ಭಾಗ್ಯಶಾಲಿ ವ್ಯಕ್ತಿಯಾಗಿದ್ದಾನೆ. ಈ ವಚನದ ಕೊನೆಯ ಭಾಗದಲ್ಲಿ, ಸರ್ವಶಕ್ತನಾದ ಅಲ್ಲಾಹನು ಆರ್ಥಿಕ ತ್ಯಾಗ ಮಾಡುವ ಮುಜಾಹಿದೀನ್‌ಗಳಿಗೆ ಸಂತೋಷದ ಸುದ್ದಿಯನ್ನು ನೀಡಿದ್ದಾನೆ. ಅವರ ತಮ್ಮ ರಕ್ತ ಮತ್ತು ಬೆವರಿನಿಂದ ಗಳಿಸಿರುವ ಸಂಪತ್ತನ್ನು ನನ್ನನ್ನು ರಾಜಿಮಾಡಲು ತ್ಯಾಗ ಮಾಡುವವರೇ!! ನಾನು ನಿಮಗೆ ಹೇಳುತ್ತೇನೆ:ಫಸ್ತಬ್‌ಶಿರು ಬಿಬೈಅಕುಮುಲ್ಲಝಿ ಬಾಯಅ್‌ತುಮ್ ಬಿಹೀ ವಝಾಲಿಕ ಹುವಲ್ ಫೌಝುಲ್ ಅಝೀಮ್ (ಸೂರತ್ ಅಲ್–ತೌಬಾ: 112) ವಾಗ್ದಾನವನ್ನು ಈಡೇರಿಸುವುದರಲ್ಲಿ ಅಲ್ಲಾಹನಿಗಿಂತ ಉತ್ತಮನು ಯಾರು? ಆದ್ದರಿಂದ (ಅಲ್ಲಾಹನೊಂದಿಗೆ) ನೀವು ಮಾಡಿದ ವ್ಯಾಪಾರದ ಬ್ಗಗೆ ಸಂತೋಷಪಡೆಯಿರಿ. ಅದೇ ಮಹಾ ವಿಜಯವಾಗಿದೆ.

ಕರುಣಾಮಯಿ, ಸಹಾನುಭೂತಿಯುಳ್ಳ ನಮ್ಮ ಅಲ್ಲಾಹನಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ, ಅವನು ನಮ್ಮನ್ನು ಸೃಷ್ಟಿಸಿದನು, ಅವನು ನಮಗೆ ಜೀವನವನ್ನು ಕೊಟ್ಟನು, ಅವನು ನಮಗೆ ಹಣ ಮಾಡುವ ಶಕ್ತಿಯನ್ನು ಕೊಟ್ಟನು ಮತ್ತು ಅವನು ನೀಡಿದ ಆಕ್ತಿಯಿಂದ ನಾವು ಗಳಿಸುವ ಸಂಪತ್ತಿನಿಂದ ಒಂದು ಭಾಗವನ್ನು ಆತನಿಗೆ ನಿಡಿದರೆ ಅವನು ನಮ್ಮಿಂದ ಎಷ್ಟು ಸಂತೋಷಪಡುತ್ತಾನೆಂದರೆ ಸ್ವರ್ಗದ ಸುವಾರ್ತೆಯನ್ನು ನೀಡುತ್ತಾನೆ. ಓರ್ವ ದಾಸನಿಗೆ ಇದರಿಂದ ಹೆಚಿಚಿನ ವಿಜಯ ಯಾವುದಾಗಿದೆ? ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್(ರ) ತುಂಬಾ ಚೆನ್ನಾಗಿ ಹೇಳಿದ್ದಾರೆ:

ಯೆ ಝರ್ ವಮಾಲ್ ತೊ ದುನಿಯಾ ಮೇಂ ಹೀ ರೆಹ್‌ಜಾಎಗಾ
ಹಶರ್ ಕೆ ರೋಝ್ ಜೊ ಕಾಮ್ ಆಏ ವೊಹ್ ಝರ್ ಪೈದಾ ಕರ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳಿಂದ ಕೇವಲ ಎರಡು ಉಲ್ಲೇಖಗಳನ್ನು ಇಲ್ಲಿ ವಿವರಿಸುತ್ತೇನೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಿಮಗೆ ತಿಳಿದಿದೆ ನೀವು ಎರಡು ವಸ್ತುಗಳನ್ನು ಪ್ರೀತಿಸಲು ಸಾಧ್ಯವಿಲ್ಲ ಅಂದರೆ ಸಂಪತ್ತಿನಿಂದಲೂ ಪ್ರೀತಿಸಿ ಹಾಗೂ ಅಲ್ಲಾಹನಿಂದಲೂ ಪ್ರೀತಿಸಿರಿ ಡಂದು ಕೇವಲ ಒಂದನ್ನು ಮಾತ್ರ ಪ್ರೀತಿಸಲು ಸಾಧ್ಯವಾಗಿದೆ. ಆದ್ದರಿಂದ ಅಲ್ಲಾಹನ್ನನು ಪ್ರೀತಿಸುವವರು ಭಾಗ್ಯಶಾಲಿಯಾಗಿದ್ದಾರೆ ಮತ್ತು ನಿಮ್ಮಲ್ಲಿ ಯಾರಾದರು ಅಲ್ಲಾಹನಿಂದ ಪ್ರೀತಿಸಿದರೆ ಅವನ ಮಾರ್ಗದಲ್ಲಿ ಸಂಪತ್ತನ್ನು ಖರ್ಚುಮಾಡಿದರೆ ಆತನ ಸಂಪತ್ತಿನಲ್ಲಿ ಹೆಚ್ಚಿನ ಅನುಗ್ರಹವನ್ನು ನೀಡಲಾಗುವುದು ಎಂದು ನನಗೆ ವಿಶ್ವಾಸವಿದೆ. ಏಕೆಂದರೆ ಸಂಪತ್ತು ತನ್ನ ತಾನಾಗಿಯೇ ಬರುವುದಿಲ್ಲ ಬದಲಿಗೆ ಅದು ಅಲ್ಲಾಹನ ಚಿತ್ತದಿಂದ ಬರುವುದು." (ಮಜ್‌ಮುಅ ಇಶ್ತಿಹಾರಾತ್, ಸಂಪುಟ–3, ಪುಟ–749)

ಅದೇ ರೀತಿ ಹೇಳುತ್ತಾರೆ:

"ಈ ಕೆಲಸಗಳಿಗೆಲ್ಲ ಬೈಅತ್ ಮಾಡಿದವರು ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಸಹಾಯ ಮಾಡಬೇಕಾಗಿದೆ. ಆಗ ಅಲ್ಲಾಹನು ಸಹ ಅವರಿಗೆ ಸಹಾಯ ನೀಡುವವನು ಪ್ರತಿ ತಿಂಗಳು ತಪ್ಪದೆ ಸ್ವಲ್ಪ ಸಹಾಯ ನೀಡುವುದಾದರೆ ಅದು ದೀರ್ಘಕಾಲ ಮರೆತು ಅನಂತರ ನೆನಪು ಬಂದಾಗ ಮಾಡುವ ಸಹಾಯಕ್ಕಿಂತ ಉತ್ತಮವಾಗಿದೆ. ಪ್ರತಿಯೊಬ್ಬನ ಸತ್ಯ ಸಂಧತೆ ಅವನು ಮಾಡುವ ಸೇವೆಯಿಂದ ಗುರುತಿಸಲ್ಪಡುತ್ತದೆ. ಪ್ರಿಯರೇ ಇದು ಧರ್ಮಕ್ಕೋಸ್ಕರ ಮತ್ತು ಧರ್ಮದ ಉದ್ದೇಶ ಲಕ್ಷಗಳಿಗಾಗಿ ಸೇವೆ ಮಾಡುವ ಸಮಯವಾಗಿದೆ. ಈ ಸಮಯವನ್ನು ನೀವು ಸಂಪತ್ತಾಗಿ ಮನವರಿಕೆ ಮಾಡಿಕೊಳ್ಳಿರಿ. ಇದು ಪುನಃ ಎಂದೂ ನಿಮಗೆ ದೊರಕಲಾರದು." (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಘುಟ–19,ಪುಟ–83)

ಅದೇ ರೀತಿ ನುಡಿದರು:

"ಸಂಪತ್ತನ್ನು ಪ್ರೀತಿಸಬೇಡಿ ಏಕೆಂದರೆ ನೀವು ಸಂಪತ್ತನ್ನು ತ್ಯಜಿಸದಿದ್ದರೆ ಅದು ನಿಮ್ಮನ್ನು ತ್ಯಜಿಸುವ ಸಮಯ ಬರುತ್ತದೆ.

(ಮಜ್‌ಮುಅ ಇಶ್ತಿಹಾರಾತ್, ಸಂಪುಟ–3, ಪುಟ–318)

ಸಯ್ಯದುನ ಹಝ್ರತ್ ಅಮೀರುಲ್ ಮಿಮುನೀನ್ ಖಲೀಫತುಲ್ ಮಸೀ ಅಲ್‌ಖಾಮಿಸ್(ಅತಬಿಅ)ರವರು ಹೇಳುತ್ತಾರೆ: "ಈ ಕಾಲವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲವಾಗಿದೆ. ಇದರಲ್ಲಿ ಒಂದು ಜಿಹಾದ್ ಸಾಂಪತ್ತಿಕ ತ್ಯಾಗಗಳ ಜಿಹಾದ್ ಆಗಿದೆ. ಏಕೆಂದರೆ ಅದು ಇಲ್ಲದೆ ಇಸ್‌ಲಾಮ್ ಧರ್ಮದ ರಕಣದಲ್ಲಿ ಲಿಟರೇಚರ್ ಪ್ರಕಟಗೊಳಿಸಲಾಗುವಿದಿಲ್ಲ, ಪವಿತ್ರ ಖುರ್‌ಆನ್ ಅನ್ನು ವಿವಿಧ ಭಾಷೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಮುಬಲ್ಲಿಗ್‌ಗಳನ್ನು ಸಿದ್ಧಗೊಳಿಸಲು ಸಾಧ್ಯವಗುವುದಿಲ್ಲ, ಅದೇ ರೀತಿ ಮುಬಲ್ಲಿಗ್‌ಗಳನ್ನು ಹಾಗೂ ಮುರಬ್ಬಿಗಳನ್ನು ಜಮಾಅತ್‌ಗಳಲ್ಲಿ ಕಳುಹಿಸಲು ಸಾಧ್ಯವಾಗುವುದಿಲ್ಲ, ಮಸೀದಿಗಳ ನಿರ್ಮಾಣ ಅಸಾಧ್ಯ, ಶಾಲಾ ಕಾಲೇಜುಗಳನ್ನು ನಿರ್ಮಾಣದಿಂದ ಬಡ ಜನರ ಮಕ್ಕಳ ವಿದ್ಯಾಭ್ಯಾಸವನ್ನು ಕಲ್ಪಿಸಿಕೊಡಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಆಸ್ಪತ್ರೆಗಳಿಂದ ಮಾನವೀಯತೆಯ ಸೇವೆ ಮಾಡಲು ಸಆಧ್ಯವಿಲ್ಲ. ಹೀಗೆ ಪ್ರಪಂಚದ ಎಲ್ಲಾ ಮೂಲೆಗಳವರೆಗೆ ಇಸ್ಲಾಂನ ಸಂದೇಶವು ತೀರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ತಲುಪುವವರೆಗೆ ಮತ್ತು ಬಡವರ ಅಗತ್ಯಗಳನ್ನು ಸಂಪೂರ್ಣವಾಗಿ ಪೂರೈಸದವರೆಗೆ ಆರ್ಥಿಕ ಜಿಹಾದ್ ಮುಂದುವರಿಯುತ್ತದೆ. ಹೀಗಾಗಿ ಪ್ರತಿಯೊಬ್ಬ ಅಹ್ಮದಿಯರ ಮೇಲೆ ತಮ್ಮ ತಮ್ಮ ಸಾಮರ್ಥ್ಯಕ್ಕನುಸಾರ ಸಾಂಪತ್ತಿಕ ತ್ಯಾಗಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿದೆ." (ಖುತ್‌ಬ ಜುಮುಅ 31–03–2006, ಅಲ್‌ಫಝ್ಲ್ ಇಂಟರ್‌ನ್ಯಾಶ್ನಲ್ 21–04–2006, ಪುಟ–6)

**ಪಾಸ್‌ಹೋ ಮಾಲ್ ತೊದೋ ಇಸ್‌ಸೆ ಝಕಾತ್‌ವ ಸದಖ**
**ಫಿಕ್ರೆ ಮಿಸ್ಕೀನ್ ರಹೇ ತುಮ್‌ಕೊ ಗಮ್ಮೆ ಅಯ್ಯಾಮ್ ಸ ಹೋ**

ನಿಮ್ಮ ಬಳಿ ಸಂಪತ್ತು ಇದ್ದರೆ ಅದರಿಂದ ಝಕಾತ್ ಮತ್ತು ಸದಖಾವನ್ನು ನೀಡಿ, ಇದರಿಂದ ನಿಮಗೆ ಬಡವರ ಚಿಂತೆ ಇರಲಿ ನಿಮ್ಮ ದಿನಗಳ ಚಿಂತೆ ಇರದಿರಲಿ,

ಪ್ರಿಯ ಶ್ರೋತೃಗಳೇ!! ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವ ಅನ್‌ಫಿಖೂ ಖೈರನ್ ಲಿ ಅನ್‌ಫುಸಿಕುಮ್, ವಮೈಂಯುಖ ಶಹ್ಹ ನಫ್‌ಸಿಹೀ ಫ ಉಲಾಇಕ ಹುಮುಲ್ ಮುಫ್‌ಲಿಹೂನ್** (ಅತ್ತಗಾಬುನ್: 17)

ಗಮನಿಸಿ ಕೇಳಿರಿ; ಅನುಸರಿಸಿರಿ ಮತ್ತು (ಅವನ ಮಾರ್ಗದಲ್ಲಿ) ವೆಚ್ಚಮಾಡಿರಿ. ಅದು ನಿಮಗೆಯೇ ಗುಣಕರವಾಗಿದೆ. ತಮ್ಮ ಮನಸ್ಸಿನ ಲೋಭಿತ್ವದಿಂದ ಯಾರು ಪಾರಾಗುತ್ತಾರೋ ಅವರೇ ಜಯಶಾಲಿಗಳು.

ಮಹನೀಯರೇ! ಈ ವಚನದಲ್ಲಿ, ನಮ್ಮ ಸ್ವಂತ ಒಳಿತಿಗಾಗಿ ಮತ್ತು ಉಪಕಾರಕ್ಕಾಗಿ ಖರ್ಚು ಮಾಡಲು ನಮ್ಮನ್ನು ಆಹ್ವಾನಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಅಲ್ಲಾಹನಿಗಾಗಿ ದಾನ ಕ್ಷೇತ್ರದಲ್ಲಿ ಹೆಚ್ಚು ಖರ್ಚು ಮಾಡುವ ಸಾಮರ್ಥ್ಯವನ್ನು ನಮಗೆ ನೀಡಲಿ ಮತ್ತು ಪರಿಣಾಮವಾಗಿ ನಮಗೆ ಆರ್ಥಿಕ ತ್ಯಾಗದ ಅನುಗ್ರಹಗಳನ್ನು ಅನುಗ್ರಹಿಸಲಿ. **ಆಮೀನ್.**

**ವಆಖಿರುದ್ದಾವನ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಅಲಮೀನ್**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ಸಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

# ಹಝ್ರತ್ ಇಮಾಮ್ ಹಸನ್ ರಝಿಯಲ್ಲಾಹುತಾಲ ಅನ್ಹು ಮತ್ತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ರಝಿಯಲ್ಲಾಹು ಅನ್ಹು ರವರ ಜೀವನ ಚರಿತ್ರೆ:

ಮುಹಮ್ಮದ್ ಶರೀಫ್ ಕೌಸರ್, ಜಾಮಿಯ ಅಹ್ಮದೀಯ ಖಾದಿಯಾನ್‌ನ ಅಧ್ಯಾಪಕರು

ಮಿತ್ರರೇ! ಇಂದು ನಾನು ಸಹಾಬ(ರ) ಅವರ ಜೀವನ ಚರಿತ್ರೆಯ ಪ್ರಾರಂಭ ಕಾಲದಿಂದ ಹಝ್ರತ್ ಹಸನ್(ರ) ಮತ್ತು ಕೊನೆಯಕಾಲದಿಂದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಅವರ ಜೀವನ ಚರಿತ್ರೆಯ ಕೆಲವು ಮುಖ್ಯಾಂಶಗಳನ್ನು ಪ್ರಸ್ತಾಪಿಸುವೆನು.

ನುಬುವ್ವತ್ತಿನ ಖಣಿ ಆದ ಈ ಮುತ್ತಿನ ದೀಪ, ಶಾಂತಿಯ ರಾಜಕುಮಾರ, ಕಿಡಿಗೇಡಿತನ ಮತ್ತು ಗಲಭೆಯನ್ನು ಹತ್ತಿಕ್ಕುವವನು, ಎರಡೂ ಜಗತಿನ ಸರದಾರರ ಸುವಾರ್ತೆಯನ್ನು ಪೂರ್ಣಗೊಳಿಸುವ, ಪ್ರವಾದಿ(ಸ) ಅವರ ಮೊಮ್ಮಗ, ಹಝ್ರತ್ ಅಲಿ ಮತ್ತು ಹಝ್ರತ್ ಫಾತಿಮತು ಝ್ಝಹ್ರ ರವರ ಪುತ್ರ 3ನೇ ಹಿಜರಿಯಲ್ಲಿ ರಮಾಝಾನಿನ ಪವಿತ್ರ ಮಾಸದಲ್ಲಿ ಜನಿಸಿದರು ಮತ್ತು ಪ್ರವಾದಿ(ಸ) ಅವರು ಅವರ ಕಿವಿಯಲ್ಲಿ ಅಝಾನ್ ಹೇಳಿದ್ದರು.

ಹಝ್ರತ್ ಅಲಿ ಬಿನ್ ಅಬಿ ತಾಲಿಬ್(ರ) ಹೇಳುತ್ತಾರೆ: ಹಝ್ರತ್ ಹಸನ್ ಜನಿಸಿದಾಗ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೇಳಿದರು: ನನ್ನ ಮಗನನ್ನು ನನಗೆ ತೋರಿಸಿರಿ ಅವನಿಗೆ ಏನೆಂದು ಹೆಸರಿಸಿದಿರಿ ಎಂದು ಕೇಳಿದರು. ನಾನು ಹೇಳಿದೆ ನಾನು ಅವನಿಗೆ ಹರ್‌ಬ್ ಎಂದು ಹೆಸರಿಸಿದ್ದೇನೆ. ಹುಝೂರ್(ಸ) ಹೇಳಿದರು, ಅವನು ಹರ್‌ಬ್ ಅಲ್ಲ ಅವನ ಹೆಸರು ಹಸನ್ ಆಗಿದೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ತರ್ಜುಕರ ಹಸನ್(ರ) ಬಿನ್ ಅಲಿ ಪುಟ–556–557, ದಾರುಲ್ ಫಿಕರ್ ಲಿತ್ತಬಾಅವತ್ತೌಝೀ, ಬೈರೂತ್ ಲೆಬನಾನ್, 2003)

**ಬಾಲ್ಯ ಮತ್ತು ವಿದ್ಯಾಭ್ಯಾಸ**

ಹಝ್ರತ್ ಅಬುಹುರೈರ(ರ) ಹೇಳುತ್ತಾರೆ: ಪ್ರವಾದಿ(ಸ) ಅವರು ಹಝ್ರತ್ ಹಸನ್(ರ) ಅವರ ಬಗ್ಗೆ ಹೇಳುತ್ತಾರೆ: **ಅಲ್ಲಾಹುಮ್ಮ ಇನ್ನಿ ಉಹಿಬ್ಬುಹು ವ ಅಹ್‌ಬಿಬ್ ಮಯ್ಯುಹಿಬ್ಬುಹು.**

ಓ ಅಲ್ಲಾಹನೇ! ನಾನು ಅವನನ್ನು ಪ್ರೀತಿಸುವೆನು ನೀನು ಸಹ ಅವನನ್ನು ಪ್ರೀತಿಸು ಮತ್ತು ಯಾರು ಅವನೊಂದಿಗೆ ಪ್ರೀತಿಸುತ್ತಾರೊ ನೀನು ಸಹ ಅವನೊಂದಿಗೆ ಪ್ರೀತಿಸು. (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಫಝಾಯೆಲುಸ್ಸಹಾಬ, ಹದೀಸ್ ಸಂಖ್ಯೆ–4431, ಸಂಪುಟ–13, ಪುಟ–51)

**ಹುಝೂರ್(ಸ) ಅವರ ಪ್ರೀತಿ**

ಹಝ್ರತ್ ಇಬ್ನೆ ಅಬ್ಬಾಸ್(ರ) ಹೇಳುತ್ತಾರೆ ನಾನು ಪ್ರವಾದಿ(ಸ) ಅವರು ಹಝ್ರತ್ ಹಸನ್ ಬಿನ್ ಅಲಿ(ರ) ಅವರನ್ನು ತನ್ನ ಕುತ್ತಿಗೆಯ ಮೇಲೆ ಕೂರಿಸಿಕೊಂಡಿದ್ದ ಸಂದರ್ಭದಲ್ಲಿ ನೋಡಿದೆ. ಅವರು ಹೇಳುತ್ತಿದ್ದರು ಒಬ್ಬ ವ್ಯಕ್ತಿಯು ಇದನ್ನು ನೋಡಿ ಓ ಹುಡುಗನೇ! ನಿನ್ನ ಸವಾರಿಯು ಎಂತಹ ಉತ್ತಮವಾಗಿದೆ ಎಂದು ಹೇಳಿದನು ಅದಕ್ಕೆ ಪ್ರವಾದಿ(ಸ) ಅವರು ಹೇಳಿದರು ಅದೇ ರೀತಿ ಸವಾರಿ ಮಾಡುವವನು ಸಹ ಎಷ್ಟು ಚನ್ನಾಗಿದ್ದಾನೆ. (ಅಲ್‌ಮುಸ್ತದ್ರಿಕ್ ಲಿಲ್ ಹಾಕಿಮ್ ಮಾರಿಫತಿಸ್ಸಹಾಬ, ಹದೀಸ್–4859, ದಾರುಲ್ ಹರ್‌ಮಯನ್ ಲಿತ್ತಬಾಅ ವನ್ನಶರ್ ವತ್ತವಾಝಿ 1997)

ಹಝ್ರತ್ ಬರೀದ(ರ) ಅವರಿಂದ ವರದಿ ಆಗಿದೆ ಒಮ್ಮೆ ಪ್ರವಾದಿ(ಸ) ಅವರು ನಮ್ಮೊಂದಿಗೆ ಸಮಾಲೋಚನೆ ಮಾಡುತ್ತಿದ್ದರು ಆಗ ಹಝ್ರತ್ ಹಸನ್ ಮತ್ತು ಹುಸೈನ್(ರ) ಅವರು ಓಡೋಡಿ ಅಲ್ಲಿಗೆ ಬಂದರು ಅವರಿಬ್ಬರು ಕೆಂಪು ಬಣ್ಣದ ಅಂಗಿ ಧರಿಸಿಕೊಂಡಿದ್ದರು. ಆಗ ಪ್ರವಾದಿ(ಸ) ಅವರು ವೇದಿಕೆಯಿಂದ ಇಳಿದು ಬಂದು ಅವರಿಬ್ಬರನ್ನು ಎತ್ತಿಕೊಂಡು ತಮ್ಮ ಮುಂದೆ ಕೂರಿಸಿ ಹೀಗೆ ಹೇಳಿದರು ಅಲ್ಲಾಹನು ನಿಜವಾಗಿಯೇ ಹೇಳಿದ್ದಾನೆ: **ಇನ್ನಮ ಅಮ್ವಾಲುಕುಮ್ ವ ಔಲಾದುಕುಮ್ ಫಿತ್‌ನತುನ್ (ಅತ್ತಗಾಬುನ್–15)** ಅಂದರೆ ನಿಮ್ಮ ಸಂಪತ್ತು ಮತ್ತು ಮಕ್ಕಳು ಪರಿಕ್ಷೆಯ ಮೂಲವಾಗಿದೆ. ನಾನು ಈ ಎರಡು ಮಕ್ಕಳನ್ನು ನೋಡಿದೆ ಇವರಿಬ್ಬರು ನಡೆಯುತ್ತಿದ್ದಾರೆ ಮತ್ತು ಬಿದ್ದಾಗ ನನಗೆ ಸಹಿಸಲಿಕ್ಕಾಗಲಿಲ್ಲ ಆದ್ದರಿಂದ ನಾನು ನನ್ನ ಮಾತನ್ನು ನಿಲ್ಲಿಸಿ ಅವರನ್ನು ಎತ್ತಿಕೊಂಡೆ. (ಜಾಮಿಉತ್ತಿರ್‌ಮಿಝಿ ಕಿತಾಬುಲ್ ಮನಾಖಿಬ್, ಹದೀಸ್–3774)

ಹಝ್ರತ್ ಅನಸ್(ರ) ಅವರಿಂದ ವರದಿ ಆಗಿದೆ ಪ್ರವಾದಿ(ಸ) ಅವರಿಗೆ ಹಸನ್ ಬಿನ್ ಅಲಿ(ರ)ಗಿಂತ ಹೆಚ್ಚು ಯಾರು ಸಮಾನರಿರಲಿಲ್ಲ. (ಬುಖಾರಿ ಕಿತಾಬ್ ಫಝಾಎಲ್ ಅಸ್ಹಾಬುನ್ನಬಿ(ಸ), ಹದೀಸ್–3752)

ಅಬುಬಕ್ಕರ್(ರ) ಹೇಳುತ್ತಾರೆ ನಾನು ಪ್ರವಾದಿ(ಸ) ವೇದಿಕೆಯಿಂದ ಕೇಳಿದೆ ಅವರ ಮಡಿಲಲ್ಲಿ ಹಸನ್(ರ) ಅವರು ಇದ್ದರು ಹುಝೂರ್(ಸ) ಅವರು ಜನರ ಕಡೆ ನೊಡುತಿದ್ದರು ಕೆಲವೊಮ್ಮೆ ಹಸನ್(ರ)ನ ಕಡೆ ನೊಡುತ್ತಿದ್ದರು. ಪ್ರವಾದಿ(ಸ) ಅವರು ಹೇಳಿದರು ಇವನು ನನ್ನ ಮಗ ಸರದಾರನಾಗುವನು.

ಇವನು ಅಲ್ಲಾಹನಿಗೋಸ್ಕರ ಮುಸ್ಲಿಮರ ಎರಡು ಗುಂಪುಗಳ ಮಧ್ಯೆ ಸಂಧಾನ ಮಾಡಿಸುವನು ಎಂಬ ಆಶಯವಿದೆ. (ಸಹೀಹ್ ಅಲ್‌ಬುಖಾರಿ, ಹದೀಸ್–3746)

**ಪ್ರೀತಿ ಮತ್ತು ದಯೆ**

ಓರ್ವ ಸಹಾಬಿಯಿಂದ ವರದಿ ಆಗಿದೆ ಒಮ್ಮೆ ಪ್ರವಾದಿ(ಸ) ನಮಾಝ್ ಅನುಷ್ಠಿಸುತ್ತಿದ್ದರು. ತಾವು(ಸ) ಸಜ್‌ದ ಮಾಡಿದಾಗ ಬಹಳ ಹೊತ್ತಿನ ತನಕ ಸಜ್‌ದದಿಂದ ಏಳಲಿಲ್ಲ ಬಹಳ ದೀರ್ಘಕಾಲ ಸಜ್‌ದದಲ್ಲಿದ್ದರು ನನ್ನ ಮನಸ್ಸಿನಲ್ಲಿ ಭಯವುಂಟಾಯಿತು ಏನಾದರು ಸಮಸ್ಯೆ ಉಂಟಾಯಿತ ಎಂದು. ಆದ್ದರಿಂದ ನಾನು ಸ್ವಲ್ಪ ಮೇಲಕ್ಕೆ ಎದ್ದು ನೋಡಿದಾಗ ಹಝ್ರತ್ ಹಸನ್(ರ) ಪ್ರವಾದಿ(ಸ)ರ ಕುತ್ತಿಗೆ ಮೇಲೆ ಒಬ್ಬ ಸವಾರನು ಕುದುರೆ ಸವಾರಿ ಮಾಡಿದ ಹಾಗೆ ಕುಳಿತುಕೊಂಡಿದ್ದಾರೆ. ಇದನ್ನು ನಾನು ನೋಡಿ ಶೀಘ್ರವಾಗಿ ಪುನಃ ಸಜ್‌ದಕ್ಕೆ ಹೋದೆನು. ನಮಾಝ್ ಮುಗಿದ ನಂತರ ಉಳಿದ ಸಹಾಬರವರು ಕೇಳಿದರು ಎಲ್ಯೆ ಪ್ರವಾದಿ ವರ್ಯರೇ! ಸಜ್‌ದದ ಸಂದರ್ಭದಲ್ಲಿ ನಿಮ್ಮ ಮೇಲೆ ಯಾವುದಾದರು ದಿವ್ಯವಾಣಿ ಅವತೀರ್ಣವಾಯಿತೆ? ಅಥವಾ ಇಷ್ಟು ದೀರ್ಘ ಸಜ್‌ದದಿಂದ ಏನಾದರು ತೊಂದರೆ ಆಯಿತೇ. ನಾವು ಬಹಳ ಹೆದರಿಕೊಂಡಿದ್ದೆವು. ಪ್ರವಾದಿ(ಸ) ನುಡಿದರು ಯಾವ ದಿವ್ಯವಾಣಿಯು ಅವತರಿಸಲಿಲ್ಲ ಮತ್ತು ಅಲ್ಲಾಹನ ದಯೆಯಿಂದ ಯಾವ ತೊಂದರೆಯು ಆಗಲಿಲ್ಲ. ನನ್ನ ಈ ಮಗು ನನ್ನ ಕುತ್ತಿಗೆಯ ಮೇಲೆ ಕುಳಿತುಕೊಂಡಿದ್ದನು ಆದ್ದರಿಂದ ನಾನು ಇವನಿಗೆ ಸವಾರಿ ಮಾಡಲಿ ಎಂದು ಅವನನ್ನು ಅಲ್ಲಿಂದ ಇಳಿಸಲಿಲ್ಲ ಇಳಿಸಿದರೆ ಇವನಿಗೆ ತೊಂದರೆ ಆಗಬಹುದು ಎಂದು. (ಖುತಬಾತೆ ಮಹ್‌ಮೂದ್ ಸಂಪುಟ–18 ಪುಟ–633)

ಹಝ್ರತ್ ಅಬುಬಕ್ಕರ್ ಸಿದ್ದೀಖ್(ರ) ಮತ್ತು ಸಯ್ಯದುನಾ ಹಝ್ರತ್ ಉಮರ್(ರ) ಅವರ ಖಿಲಾಫತ್ತಿನ ಕಾಲದಲ್ಲಿ ಅವರು ಚಿಕ್ಕ ಪ್ರಾಯದವರಾದ್ದರಿಂದ ಅವರ ಪ್ರೀತಿ ಮತ್ತು ದಯೆಯಿಂದ ಬಹಳಷ್ಟು ಪಾಲು ಪಡೆದರು. ಹಝ್ರತ್ ಉಸ್ಮಾನ್(ರ) ಅವರು ತಮ್ಮ ಕಾಲದಲ್ಲಿ ದಯೆವುಳ್ಳ ವರ್ತನೆಯನ್ನು ತೋರಿಸಿದರು. ಹಝ್ರತ್ ಉಸ್ಮಾನ್(ರ) ಅವರ ಕಾಲದಲ್ಲಿ ಅವರು ಯೌವ್ವನಕ್ಕೆ ಸೇರಿದ್ದರು ದ್ರೋಹಿಗಳು ಹಝ್ರತ್ ಉಸ್ಮಾನ್(ರ) ಅವರ ಮನೆಯನ್ನು ಆವರಿಸಿಕೊಂಡಾಗ ಅವರು ತಮ್ಮ ಸಂಗಡಿಗರೊಂದಿಗೆ ಈ ಗಲಭೆಯ ಪರಿಸ್ಥಿತಿಯಲ್ಲಿ ಬಹಳ ಧೈರ್ಯ ಮತ್ತು ಶೌರ್ಯದಿಂದ ದಾಳಿಮಾಡುವವರನ್ನು ಎದುರಿಸಿದರು ಹೀಗೆ ವಿದರೋಹಿಯರನ್ನು ಮನೆಯೊಳಗೆ ನುಗ್ಗುವುದರಿಂದ ತಡೆಗಟ್ಟಿದರು. ಈ ತಡೆಗಟ್ಟುವಿಕೆಯಲ್ಲಿ ಸ್ವತಃ ಅವರಿಗೆ ಬಹಳ ಗಾಯಗಳಾದವು. ಇಡೀ ದೇಹವು ರಕ್ತದಿಂದ ಬಣ್ಣವಾಯಿತು. (ಸೂರುಸ್ಸಹಾಬ ಮುಯೀನುದ್ದೀನ್ ಅಹ್ಮದ್ ನದವಿ ಸಂಪುಟ–4, ಪುಟ–14–15, ಪ್ರಕಾಶನ ಇದಾರ ಇಸ್ಲಾಮಿಯಾತ್ ಅನಾರ್‌ಕಲಿ ಲಾಹೋರ್) (ತಾರೀಖಿಲ್ ಖಿಲಫಾ ಲಿಸ್ಸುಯೂತಿ ಪುಟ–124, ದಾರುಲ್‌ಕುತುಬ್ ಅಲ್‌ಅರಬಿ ಬೈರೂತ್ ಲೆಬನಾನ್ 1999)

ಹಝ್ರತ್ ಅಲಿ(ರ) ಅವರ ನಿಧನದ ನಂತರ 40 ಹಿಜರಿಯಲ್ಲಿ ಹಸನ್ ಬಿನ್ ಅಲಿ(ರ) ಯಿಂದ ಖಿಲಾಫತ್ತಿನ ಬೈಅತ್ ಆಯಿತು. ಕೆಲವು ತಿಂಗಳ ನಂತರ ಮುಸ್ಲಿಮರ ರಕ್ತದ ರಕ್ಷಣೆಗಾಗಿ, ಕಿಡಿಗೇಡಿತನ ಮತ್ತು ಗಲಭೆಯನ್ನು ಮುಗಿಸಲು ಖಿಲಾಫತ್ತನ್ನು ತ್ಯಜಿಸಿದ್ದಾರೆ ಎಂದು ಘೋಷಿಸಿ ಮುಆವಿಯವಿಂದ ಆಶ್ರಯ ಪಡೆದರು.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಹಝ್ರತ್ ಹಸನ್(ರ) ಅವರು ನನ್ನ ಪ್ರಕಾರ ಖಿಲಾಪತ್ತಿನಿಂದ ಅಗಲಿ ಹೋಗಿದ್ದು ಬಹಳ ಉತ್ತಮ ಕೆಲಸ ಮಾಡಿದ್ದರು ಏಕೆಂದರೆ ಮೊದಲಿಗೇ ಸಾವಿರಾರು ಕೊಲೆಗಳಾಗಿದ್ದವು. ಅವರು ಇನ್ನಷ್ಟು ಕೊಲೆಗಳಾಗಲಿ ಎಂದು ಇಷ್ಟ ಪಡಲಿಲ್ಲ. ಆದ್ದರಿಂದ ಮುಆವಿಯಾನ ಆಶ್ರಯ ಪಡೆದರು. ಹಝ್ರತ್ ಹಸನ್(ರ) ಅವರ ಈ ಕೃತ್ಯದಿಂದ ಶಿಯಾವಿನ ಮೇಲೆ ಆಪತ್ತುಂಟಾಗುತ್ತದೆ ಆದ್ದರಿಂದ ಇಮಾಮ್ ಹಸನ್(ರ) ಅವರಿಂದ ಇವರು ಸಂಪೂರ್ಣವಾಗಿ ರಾಜಿ ಆಗಲಿಲ್ಲ. ನಾವು ಇವರಿಬ್ಬರನ್ನು ಪ್ರಶಂಸಿಸುತ್ತೇವೆ. ಮೂಲ ವಿಷಯವೇನೆಂದರೆ ಪ್ರತಿಯೊಬ್ಬನ ಯೋಚನೆಯು ಬೇರೆ ಬೇರೆಯದ್ದಾಗಿತ್ತು. ಹಝ್ರತ್ ಇಮಾಮ್ ಹಸನ್(ರ) ಅವರು ಮುಸ್ಲಿಮರ ಮಧ್ಯೆ ಯಾವುದೇ ಅಂತಯುದ್ಧ ಮತ್ತು ಕೊಲೆಗಳಾಗುವುದು ಇಷ್ಟ ಪಡಲಿಲ್ಲ. ಅವರು ಶಾಂತಿಯನ್ನು ಬಯಸಿದರು ಮತ್ತು ಹಝ್ರತ್ ಇಮಾಮ್ ಹುಸೈನ್(ರ) ಅವರು ಒಬ್ಬ ಕೆಟ್ಟ ಮತ್ತು ದುಷ್ಟನ ಕೈ ಮೇಲೆ ಬೈಅತ್ ಮಾಡಲು ಇಷ್ಟಪಡಲಿಲ್ಲ ಏಕೆಂದರೆ ಇದರಿಂದ ಧರ್ಮದಲ್ಲಿ ಹಾನಿವುಂಟಾಗುವುದು ಎಂದು. ಇವರಿಬ್ಬರ ನಿಯ್ಯತ್ತು ಒಳ್ಳೆಯದ್ದಾಗಿತ್ತು. **–ಇನ್ನಮಲ್ ಆಮಾಲು ಬಿನ್ನಿಯಾತಿ–** (ಮಲ್ಫೂಝಾತ್ ಸಂಪುಟ–8, ಪುಟ–278–279)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಈ ಸಂಬಂಧದಲ್ಲಿ ಯಾವ ನಿಷ್ಠಾವಂತನಿಗೆ ಸಂಶಯವಿದೆ ಹಝ್ರತ್ ಇಮಾಮ್ ಹಸನ್(ರ) ಮತ್ತು ಇಮಾಮ್ ಹುಸೈನ್(ರ) ಇವರಿಬ್ಬರು ಅಲ್ಲಾಹನ ಕಡೆಯಿಂದ ಆಯ್ಕೆಯಾಗಿದ್ದರು, ಪವಾಡ ಪುರುಷರು, ನಿಷ್ಕಲಂಕ, ಸುಶೀಲ ಮತ್ತು ಆಯಿಮ್ಮತುಲ್ ಹುದಾ ಎಂದು. (ತಿರ್‌ಯಾಖಿಲ್ ಖಿಯಲೂಬ್, ರೂಹಾನಿ ಖಝಾಯೀನ್ ಸಂಪುಟ–15, ಪುಟ–364 ಅಡಿಟಿಪ್ಪಣಿ)

**ಆರಾಧನೆ**

ದೇವರಾರಾಧನೆಯು ಅವರಿಗೆ ಬಹಳ ಪ್ರೀಯವಾಗಿತ್ತು ಆದ್ದರಿಂದ ಗರಿಷ್ಠ ಪ್ರಮಾಣದ ಸಮಯವು ಇದರಲ್ಲಿ ಕಳೆಯುತ್ತಿದ್ದರು. ಅಮೀರ್ ಮುಆವಿಯ ಓರ್ವ ವ್ಯಕ್ತಿಯಿಂದ ಇವರ ಬಗ್ಗೆ ಪರಿಶಿಸಿದರು. ಆ ವ್ಯಕ್ತಿಯು ಹೇಳಿದನು: ಫಜರ್ ನಮಾಝಿನ ನಂತರ ತಾವು ಮುಸಲ್ಲ (ನಮಾಝ್ ನಿರ್ವಹಿಸಲು ಆಯ್ದುಕೊಂಡಿರುವ ಜಾಗ) ಮೇಲೆ ಕುಳಿತಿಕೊಳ್ಳುತ್ತಾರೆ ತದನಂತರ ಗೋಡೆಯ ಸಹಾಯದಿಂದ ಕುಳಿತುಕೊಳ್ಳುತ್ತಾರೆ. ಮುಂಬರುವ ಜನರನ್ನು ಭೇಟಿ ಆಗುತ್ತಾರೆ. ಸೂರ್ಯ ಉದಯಿಸಿದ ನಂತರ ಚಾಷ್ತ್‌ನ ನಮಾಝ್ ನಿರ್ವಹಿಸಿದ ನಂತರ ಉಮ್ಮಹಾತುಲ್ ಮುಮಿನೀನರಿಗೆ ಸಲಾಮ್ ಹೇಳುವುದಕ್ಕಾಗಿ ಹೋಗುತ್ತಾರೆ ನಂತರ ಮನೆಗೆ ಬಂದು ಮಸೀದಿಗೆ ತೆರಳುತ್ತಾರೆ.

ಮಕ್ಕದಲ್ಲಿ ಸಾಮಾನ್ಯವಾಗಿ ಅಸರ್ ನಮಾಝ್ ಖಾನ ಕಾಬದಲ್ಲಿ ಬಾಜಮಾಅತ್ ನಿರ್ವಹಿಸುತ್ತಿದ್ದರು ನಮಾಝಿನ ನಂತರ ತವಾಫ್‌ನಲ್ಲಿ ಮಗ್ನರಾಗುತ್ತಿದ್ದರು. ಅಬು ಸಯೀದ್ ವರದಿಗಾರರಾಗಿದ್ದಾರೆ ಹಸನ್ ಮತ್ತು ಹುಸೈನ್ ಇಮಾಮಿನೊಂದಿಗೆ ನಮಾಝ್ ನಿರ್ವಹಿಸಿದ ನಂತರ ಹಜ್ರೆ ಅಸ್ವದನ್ನು ಚುಂಬಿಸಿ ತವಾಫಿನ ಐದು ಸುತ್ತನ್ನು ಪೂರ್ಣಗೊಳಿಸಿದರು ನಂತರ ಎರಡು ರಕತ್ ನಮಾಝ್ ನಿರ್ವಹಿಸಿದರು. ಜನರಿಗೆ ಇವರಿಬ್ಬರು ಪ್ರವಾದಿ(ಸ) ಅವರ ಕುಟುಂಬಕ್ಕೆ ಸೇರಿದ್ದಾರೆ ಎಂದು ತಿಳಿದಾಗ ಪ್ರೇಮಿಗಳೆಲ್ಲರು ನಾಲ್ಕು ದಿಕ್ಕಿನಲ್ಲಿಯು ಪತಂಗಗಳ ರೀತಿಯಲ್ಲಿ ಸೇರಿಕೊಂಡರು. ಹೀಗೆ ಸೇರುವಿಕೆಯಿಂದ ದಾರಿಯು ನಿಂತಿಹೊಯಿತು. ಹಝ್ರತ್ ಹಸನ್ ಈ ಜನಸಮೂಹದಲ್ಲಿ ಸಿಕ್ಕಿಕೊಂಡರು. ಆಗ ಹಝ್ರತ್ ಹಸನ್(ರ) ಅವರು ಓರ್ವ ಅರ್ಕಾನಿಯ ಸಹಾಯದಿಂದ ಆ ಜನಸಮೂಹದಿಂದ ತಪ್ಪಿಸಿಕೊಂಡರು. ಒಂದು ಹಲಗೆಯ ಮೇಲೆ ಸೂರ ಕಹಫ್ ಬರೆಸಿದರು ದಿನಾ ಮಲಗುವ ಸಮಯ ತಿಲಾವತ್ ಮಾಡುತ್ತಿದ್ದರು.

ಪ್ರಿಯೊಂದು ರೀತಿಯ ಸವಾರಿಗಳು (ವಾಹನಗಳು) ಇದ್ದರೂ ಕಾಲ್ನಡಿಗೆಯಿಂದ ಹಜ್ಜ್ ಅನುಷ್ಠಿಸುತ್ತಿದ್ದರು. ಇಮಾಮ್ ನೂವಿ ಬರೆಯುತ್ತಾರೆ: ಇಮಾಮ್ ಹಸನ್ ಅವರು ಅನೇಕ ಹಜ್ಜ್ ಯಾತ್ರೆಗಳು ಕಾಲ್ನಡಿಗೆಯಲ್ಲಿಯೇ ಮಾಡಿದ್ದಾರೆ. ಅವರು ಹೇಳುತ್ತಿದ್ದರು: ನಾನು ಅಲ್ಲಾಹನನ್ನು ಭೇಟಿಯಾದಾಗ ಅವರ ಮನೆಗೆ ಕಾಲ್ನಡುಗೆಯಿಂದ ಹೋಗಲಿಲ್ಲ ಎಂದರೆ ನನಗೆ ಅಲ್ಲಾಹನಂದ ನಾಚಿಗೆ ಉಂಟಾಗುತ್ತದೆ. (ಸೀರತುಸ್ಸಹಾಬ ಸಂಪುಟ–4, ಪುಟ–38, ಲೇಖಕರು: ಮುಯೀನುದ್ದೀನ್)

### ಸಂಪತ್ತಿನ ಬಲಿದಾನ

ಹಝ್ರತ್ ಇಮಾಮ್ ಹಸನ್(ರ) ಅವರು ಮೂರು ಸಲ ತಮ್ಮ ಸಂಪತ್ತಿನ ಅರ್ಧ ಭಾಗ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದಾರೆ, ಎಷ್ಟರ ಮಟ್ಟಿಗೆ ಅರ್ಧ ಸಂಪತ್ತನ್ನು ನೀಡಿದರೆಂದರೆ ಅವರು ತಮ್ಮ ಎರಡು ಪಾದರಕ್ಷಗಳಲ್ಲಿ ಒಂದನ್ನು ಅರ್ಪಿಸಿದರು ಮತ್ತು ಎರಡನೇ ಬಾರಿಗೆ ತಮ್ಮ ಸಂಪೂರ್ಣ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ನೀಡಿದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಪುಟ–560, ದಾರುಲ್‌ಫಿಕರ್ ಲಿತ್ತಬಾಅ ಎನದನಶರ್ ವತ್ತಝೀಇ ಬೈರೂತ್ ಲೆಬನಾನ್ 2003)

### ನಿಮ್ಮ ದಾನಧರ್ಮ

ಓಮ್ಮೆ ಓರ್ವ ಸೀರಿಯಾದ ವ್ಯಕ್ತಿಯೋರ್ವನು ಮದೀನಕ್ಕೆ ಬಂದನು ಇವನು ಹಝ್ರತ್ ಅಲಿ(ರ) ಅವರ ಬಗ್ಗೆ ಅಗೌರವಿತ ಮಾತುಗಳನ್ನು ಉಪಯೋಗಿಸುತ್ತಿದ್ದನು ಅವನಿಗೆ ಯಾವುದೋ ದೂರದ ಪ್ರಯಾಣಕ್ಕೆ ಹೋಗ ಬೇಕಾಗಿತ್ತು ಆದರೆ ಅವನ ಬಳಿ ದಾರಿವೆಚ್ಚವು ಇರಲಿಲ್ಲ ಮತ್ತು ಸವಾರಿಯು ಇರಲಿಲ್ಲ. ಅವನು ತನ್ನ ಪರಿಸ್ಥಿತಿಯ ಬಗ್ಗೆ ಮಕ್ಕದ ಅನೇಕ ಜನರನ್ನು ತಿಳಿಸಿದನು. ಆದರೆ ಏನೂ ಉಪಯೋಗ ಆಗಲಿಲ್ಲ ಆಗ ವ್ಯಕ್ತಿಯೊಬ್ಬನು ಅವನಿಗೆ ಹಝ್ರತ್ ಹಸನ್(ರ)ವಿನ ಬಗ್ಗೆ ತಿಳಿಸಿದನು. ಅವನು ಹಝ್ರತ್ ಹಸನ್(ರ) ಅವರ ಬಳಿ ಹಾಜರಾಗಿ ತನ್ನ ಸಂಕಷ್ಟವನ್ನು ತಿಳಿಸಿದನು. ಹಝ್ರತ್ ಹಸನ್(ರ) ಅವರು ಆಗಿಂದಾಗಲೆ ಅವನಿಗೋಸ್ಕರ ಸವಾರಿಯ ವ್ಯವಸ್ಥೆ ಮಾಡಿ ಅವನಿಗೆ ದಾರಿವೆಚ್ಚಗಾಗಿ ಹಣವನ್ನು ನೀಡಿದರು. ಜನರು ಆಕ್ಷೇಪಿಸಿದರು ಇಂತಹ ವ್ಯಕ್ತಿಗೆ ಸಹಾಯ ಮಾಡಬಾರದಾಗಿತ್ತು ಅವನು ನಿಮ್ಮಿಂದ ಮತ್ತು ನಿಮ್ಮ ತಂದೆಯವರಿಂದ ಅಸೂಯೆ ಪಡುತ್ತಾನೆ. ಇದಕ್ಕೆ ಹಝ್ರತ್ ಹಸನ್(ರ) ಉತ್ತರಿಸಿದರು ನಾನು ನನ್ನ ಮರ್ಯಾದೆಯನ್ನು ಉಳಿಸಿಕೊಳ್ಳಬಾರದೆ. (ತಾರೀಖೆ ಮದೀನ ಬ ದಮಿಷ್ಕ್, ಸಂಪುಟ–13, ಪುಟ–247, ದಾರುಲ್ ಫಿಕರ್ ಬೈರೂತ್ ಲೆಬನಾನ್ 1995)

ಓಮ್ಮೆ ಹಝ್ರತ್ ಹಸನ್(ರ) ಅವರು ಮದೀನದ ಒಂದು ಖರ್ಜೂರದ ತೊಟದ ಕಡೆಯಿಂದ ಹೋಗುತ್ತಿದ್ದಾಗ ನೋಡಿದರು, ಓರ್ವ ಹಬ್ಶಿ ಗುಲಾಮನ ಹತ್ತಿರ ಒಂದು ರೊಟ್ಟಿ ಇದೆ. ಅವನು ಅದರಿಂದ ಒಂದು ತುತ್ತು ತಾನು ತಿನ್ನುತ್ತಿದ್ದನು ಇನ್ನೊಂದು ತುತ್ತನ್ನು ತನ್ನ ನಾಯಿಗೆ ತಿನ್ನಿಸುತ್ತಿದ್ದನು. ಹೀಗೆ ಅವನು ಅರ್ಧ ಭಾಗ ನಾಯಿಗೆ ತಿನ್ನಿಸಿದ್ದನ್ನು ನೋಡಿ ಅವನಿಗೆ ಕೇಳಿದರು ನೀನು ಆ ನಾಯಿಯನ್ನು ಏಕೆ ಬೈದು ಓಡಿಸುತ್ತಿಲ್ಲ ಎಂದು. ಗುಲಾಮನು ಉತ್ತರಿಸಿದನು: ನಾನು ಆ ನಾಯಿಯನ್ನು ಓಡಿಸಿದರೆ ನನ್ನ ಕಣ್ಣುಗಳನ್ನು ಅವನ ಕಣ್ಣುಗಳಿಂದ ನಾಚಿಕೆ ಉಂಟಾಗುತ್ತದೆ. ಆಗ ಅವರು ಆ ಗುಲಾಮನಲ್ಲಿ ವಿಚಾರಿಸಿದರು ನೀನು ಯಾರು? ಇದಕ್ಕೆ ಅವನು ಹೇಳಿದನು, ನಾನು ಅಬಾನ್ ಬಿನ್ ಉಸ್ಮಾನಿನ ಗುಲಾಮನಾಗಿದ್ದೇನೆ. ಮತ್ತು ಪ್ರಶ್ನಿಸಿದರು ಈ ತೋಟಯಾರದ್ದು? ಅವನು ಹೇಳಿದನು ಇದು ಅಬಾನ್ ಅವರದು. ಹಝ್ರತ್ ಹಸನ್(ರ) ಹೇಳಿದರು ನಾನು ಹಿಂತಿರುಗಿ ಬರುವುದಕ್ಕು ಮುಂಚೆ ನೀನು ಇಲ್ಲಿಂದ ಎಲ್ಲೂ ಹೋಗದಿರು. ಸ್ವಲ್ಪ ಸಮಯದ ನಂತರ ಅವರು ಹಿಂದಿರುಗಿ ಬಂದು ಹೇಳಿದರು ನಾನು ನಿನ್ನನ್ನು ಖರೀದಿಸಿದ್ದೇನೆ ಅದಕ್ಕೆ ಅವನು ಗೌರವದಿಂದ ಎದ್ದು ನಿಂತು ಹೇಳಿದನು ಈ ನನ್ನ ಓಡೆಯನೇ! ನಾನು ಅಲ್ಲಾಹನ, ಪ್ರವಾದಿ ಮತ್ತು ಒಡೆಯನ ವಿಧೇಯತೆಗೋಸ್ಕರ ಹಾಜರಾಗಿದ್ದೇನೆ. ನಂತರ ಅವರು ಹೇಳಿದರು ನಾನು ಈ ತೋಟವನ್ನು ಸಹ ಖರೀದಿಸಿದ್ದೇನೆ. ನೀನು ಅಲ್ಲಾಹನ ಮಾರ್ಗದಲ್ಲಿ ಸ್ವತಂತ್ರನಾಗಿದ್ದೀಯ ಮತ್ತು ಈ ತೋಟವನ್ನು ನಾನು ನಿನಗೆ ಉಡುಗೋರೆಯಾಗಿ ನೀಡುತ್ತಿದ್ದೇನೆ. ಗುಲಾಮನು ಹೇಳಿದನು ಓ ನನ್ನ ಓಡೆಯನೇ ನೀವು ಯಾರ ಹೆಸರಿನಲ್ಲಿ ನನ್ನನ್ನು ಸ್ವತಂತ್ರಗೊಳಿಸಿದ್ದೀರೋ ಅವನ ಮಾರ್ಗದಲ್ಲಿ ನಾನು ಈ ತೋಟವನ್ನು ಉಡುಗೋರೆಯಾಗಿ ಅರ್ಪಿಸುತ್ತೇನೆ. (ತಾರೀಖ್ ಮದೀನ ವ ದಮಿಶ್ಖ್, ಸಂಪುಟ–13, ಪುಟ–246, ದಾರುಲ್‌ಫಿಕರ್ ಬೈರೂತ್ ಲೆಬನಾನ್ 1995)

### ಸೃಷ್ಟಿ ಸೇವೆ

ಒಮ್ಮೆ ವ್ಯಕ್ತಿಯೋರ್ವನು ಹಝ್ರತ್ ಹುಸೈನ್(ರ) ಅವರ ಬಳಿ ಹೋಗಿ ತನ್ನ ಅವಶ್ಯಕತೆಗೊಸ್ಕರ ಅವರಿಂದ ಸಹಾಯ ಯಾಚಿಸಿದನು. ಆಗ ಅವರು ಮೊತಕಿಫ್ (ಉಪಾಸಕ) ಆಗಿದ್ದರು. ಅವರು ಹೇಳಿದರು ನಾನು ಮೊತಕಿಫ್ ಆಗಿರದಿದ್ದರೆ ನಿನ್ನ ಜೋತೆ ಬಂದು ನಿನ್ನ ಅವಶ್ಯಕತೆಯನ್ನು ಪೂರೈಸುತ್ತಿದ್ದೆ. ಈ ಉತ್ತರವನ್ನು ಪಡೆದು ಅವನು ಹಝ್ರತ್ ಹಸನ್(ರ) ಬಳಿ ಬಂದನು. ಅವರು ಸಹ ಮೊತಕಿಫ್ ಆಗಿದ್ದರು ಆದರೆ ಅವರು "ಎಹತ ಕಾಫ್" ನಿಂದ ಹೊರಬಂದು ಅವನ ಅವಶ್ಯಕತೆಯನ್ನು ಪುರೈಸಿದರು. ಕೆಲವರು ಹಝ್ರತ್ ಹಸನ್(ರ) ಅವರ ಬಗ್ಗೆ ಈ ಮಾತನ್ನು ಹೇಳಿದ್ದಾರೆ (ಅಂದರೆ ಹಝ್ರತ್ ಹುಸೈನ್(ರ) ಅವರು ಈ ವ್ಯಕ್ತಿಗೆ ಸಹಾಯ ಮಾಡಲು ಎಹ್ತ ಕಾಫಿನ ಆಕ್ಷೇಪ ನೀಡಿದ್ದರು) ಅವರು(ರ) ಹೇಳಿದರು, ನನ್ನ ಪ್ರಕಾರ ಅಲ್ಲಾಹನ ಮಾರ್ಗದಲ್ಲಿ ಓರ್ವ ಸಹೋದರನಿಗೆ ಸಹಾಯ ಮಾಡುವುದು ಒಂದು ತಿಂಗಳ ಎಹ್ತ ಕಾಫಿಗಿಂತ ಹೆಚ್ಚು ಉತ್ತಮವಾಗಿದೆ.

ಒಂದು ದಿವಸ ಅವರು ತವಾಫ್ ಮಾಡುತ್ತಿದ್ದರು. ಆಸ್ಥಿತಿಯಲ್ಲಿಯೆ ಓರ್ವ ವ್ಯಕ್ತಿ ತನ್ನ ಅವಶ್ಯಕತೆಗೋಸ್ಕರ ಅವರನ್ನು ತನ್ನ ಜೊತೆ ಕರೆದುಕೊಂಡು ಹೊಗಲು ಬಯಸಿದನು. ಆಗ ಅವರು ತವಾಫನ್ನು ತ್ಯಜಿಸಿ ಅವನೊಂದಿಗೆ ಹೊರಟರು, ಅವನ ಅವಶ್ಯಕತೆಯನ್ನು ಪೂರೈಸಿ ಹಿಂದಿರುಗಿ ಬಂದಾಗ ಇದರ ಬಗ್ಗೆ ಒಬ್ಬ ಆಕ್ಷೇಪಿಸಿದನು, ಓ ಅಬು ಮುಹಮ್ಮದ್! ನೀನು ತವಾಫ್ ತ್ಯಜಿಸಿ ಆ ವ್ಯಕ್ತಿಯೊಂದಿಗೆ ಹೊರಟು ಹೋಗಿದ್ದು ಸರಯೇ? ಹಝ್ರತ್ ಹಸನ್(ರ) ಹೇಳಿದರು ನಾನು ಅವನೊಂದಿಗೆ ಏಕೆ ಹೋಗಬಾರದು? ಪ್ರವಾದಿ(ಸ) ಹೇಳಿದರು ಯಾವ ವ್ಯಕ್ತಿಯು ತನ್ನ ಮುಸ್ಲಿಮ್ ಸಹೋದರನ ಅವಶ್ಯಕತೆಗೋಸ್ಕರ ಹೋಗುತ್ತಾನೊ ಮತ್ತು ಆ ಅವಶ್ಯಕತೆಯು ಪೂರೈಸುತ್ತದೆಯೋ ಅವನ ಜೊತೆ ಹೋಗುವವನಗೆ ಒಂದು ಹಜ್ಜ್‌ನ ಮತ್ತು ಒಂದು ಉಮ್‌ರಾದ ಪುಣ್ಯ ಸಿಗುತ್ತದೆ ಮತ್ತು ಅವನ ಅವಶ್ಯಕತೆ ಪೂರೈಸಲಿಲ್ಲದಿದ್ದರೂ ಸಹ ಒಂದು ಉಮ್‌ರಾ ಮಾಡಿದಷ್ಟು ಪುಣ್ಯ ಅವನಿಗೆ ಲಭಿಸುತ್ತದೆ, ಹೀಗೆ ನಾನು ಒಂದು ಹಜ್ಜ್‌ನ ಮತ್ತು ಒಂದು ಉಮ್‌ರಾದಷ್ಟು ಪುಣ್ಯಗಳಿಸಿದೆ ಮತ್ತೆ ಹಿಂದಿರುಗಿ ತವಾಫ್ ಸಹ ಪೂರ್ಣಗೊಳಿಸಿದರು. (ತಾರೀಖ್ ಮದೀನ ವ ದಮಿಷ್ಕ್, ಸಂಪುಟ–13, ಪುಟ–247–248, ದಾರುಲ್‌ಫಿಕರ್ ಬೈರೂತ್ ಲೆಬನಾನ್ 1995)

### ಸಹಿಷ್ಣುತೆ

ಹಝ್ರತ್ ಆಯಿಷ ಸಿದ್ದೀಖ(ರ) ಹೇಳುತ್ತಾರೆ: ಓರ್ವ ವ್ಯಕ್ತಿ ಸೀರಿಯಾದಿಂದ ಮದೀನಕ್ಕೆ ಬಂದು ಹೇಳಿದನು: ಬಹಳ ಸೂಕ್ಷ್ಮ ಸ್ವಭಾವದ ಅರಬಿ ಸವಾರನೊಬ್ಬನು ಹೊಗುತ್ತಿದ್ದನ್ನು ನೋಡಿದೆ. ನಾನು ನನ್ನ ಜೀವನಪರಿಯಂತ ಇಂತಹ ಸವಾರನನ್ನು ನೊಡಿರಲಿಲ್ಲ. ಅವನ ಅಸಾಧಾರಣ ನಡತೆಯಿಂದ ನನ್ನ ಮನಸ್ಸನ್ನು ನನ್ನ ಹತೋಟಿಯಲ್ಲಿಡಲು ಸಾಧ್ಯವಾಗುತ್ತಿರಲಿಲ್ಲ ಬದಲಾಗಿ ಅವನ ಕುದುರೆಯ ಗೋರಸಿನ ಶಬ್ದವು ನನ್ನ ಆತ್ಮವನ್ನು ಮೆಟ್ಟಿ ಹಾಕುತ್ತಿತ್ತು. ನಾನು ಆ ಸವಾರ ಬಗ್ಗೆ ಜನರೊಂದಿಗೆ ವಿಚಾರಿಸಿದಾಗ ಜನರು ಆವನು ಹಝ್ರತ್ ಹಸನ್ ಬಿನ್(ರ) ಎಂದು ಹೇಳಿದರು. ಈ ಎರಡು ಹೆಸರನ್ನು ಕೇಳಿದ ತಕ್ಷಣ ನನಗೆ ಬಹಳ ಸಿಟ್ಟು ಆವರಿಸಿತು ನನ್ನಲ್ಲಿದ್ದ ಅಸೂಯೆಯ ಅಗ್ನಿಯು ನನ್ನ ಕಾಲಿನಿಂದ ತಲೆಯ ತನಕ ಉರಿಯಿತು. ಅಲಿ(ರ) ಅವರ ಮಗ ಹೀಗೆ ಬೇಳೆದಿದ್ದಾನೆಯೇ ಎಂದು. ನಾನು ಅವನಿರುವಲ್ಲಿಗೆ ತಲುಪಿ ರಸ್ತೆಯಲ್ಲಿಯೆ ಆ ಕುದುರೆಯನ್ನು ಹಿಡಿದು ಕೇಳಿದೆ ಓ ಸವಾರನೇ ನೀನು ಅಲಿ(ರ) ರವರ ಮಗನಾಗಿದ್ದಿಯೇ ಎಂದು ಕೇಳಿದೆ. ಹಝ್ರತ್ ಹಸನ್ ಹೇಳಿದರು ಹೌದು. ಅದಕ್ಕೆ ನಾನು ಹಝ್ರತ್ ಅಲಿ(ರ) ಅವರ ಬಗ್ಗೆ ಬಹಳ ಕೆಟ್ಟ ಕೆಟ್ಟ ಮಾತುಗಳನ್ನಾಡಿದೆ. ವಾಹ್ ಅವರ ಸಹನೆ ಬಹಳ ಉನ್ನತ ಮಟ್ಟದ್ದಾಗಿತ್ತು, ನಾನು ಹಝ್ರತ್ ಅಲಿ(ರ) ಅವರಿಗೆ ಎಲ್ಲಿಯ ತನಕ ಅಗೌರವದ ಮಾತುಗಳನ್ನಾಡುತ್ತಿದ್ದೆನೋ ಅಲ್ಲಿಯ ತನಕ ಅವರು ನಿಶ್ಶಬ್ದವಾಗಿ ನಿಂತಿದ್ದರು. ನಾನು ಕೊನೆಗೆ ನಾಚಿಗೇಡಾದೆ. ನನ್ನ ಮಾತುಗಳು ಮುಗಿದ ನಂತರ ಅವರು ಮುಗುಳ್ನಗುತ್ತ ಹೇಳಿದರು ನೀನು ಪ್ರಯಾಣಿಕನಾಗಿದ್ದೀಯ ಅನಿಸುತ್ತದೆ ಮತ್ತು ಸೀರಿಯಾದಿಂದ ಬಂದಿದ್ದೀಯ? ನಾನು ಹೇಳಿದೆ ಹೌದು. ಹೇಳಿದರು ನನ್ನೊಂದಿಗೆ ಮನೆಗೆ ಬಾ ನಾನು ನಿನ್ನ ಅತಿಥಿ ಸತ್ಕಾರ ಮಾಡ ಬಯಸುತ್ತೇನೆ. ನಿನಗೆ ಸ್ವಲ್ಪ ದಾರಿವೆಚ್ಚ ನೀಡುವೆನು ಮತ್ತು ನಿನ್ನ ಅವಶ್ಯಕತೆಯನ್ನು ಪೂರೈಸುವೆನು.

ನಾನು ಈ ಮಾತುಗಳನ್ನು ಕೇಳಿ ಇನ್ನು ನಾಚಿಕೆಕೆ ಒಳಗಾದೆ. ಮತ್ತು ಅವರ ನೈತಿಕತೆಯ ಗುಣಲಕ್ಷಣ ಮತ್ತು ಒಳ್ಳೆಯ ವರ್ತನೆಯನ್ನು ಕಂಡು ಬಹಳ ಆಶ್ಚರ್ಯ ಚಕಿತನಾದೆ. ಈ ಮಾತುಗಳು ನನ್ನ ಮೇಲೆ ಎಂತಹ ಪ್ರಭಾವ ಬೀರಿತೆಂದರೆ ನನಗೆ ಅದನ್ನು ಮುಚ್ಚಿಡಲು ಸಾಧ್ಯವಾಗಲಿಲ್ಲ. ನಾನು ಅವರಲ್ಲಿ ಬೈಅತ್ ಮಾಡಿದೆನು. ಆಗಿನಿಂದ ನಾನು ಪ್ರತಿಯೊಂದು ವಸ್ತುವಿಗಿಂತ ಹೆಚ್ಚು ಅವರನ್ನು ಪ್ರೀತಿಸಲು ತೊಡಗಿದೆನು. (ಸಾದಾತ್ ಅಲ್ಬವಾನೀನ್ ಫೀ ಘರ್ಘಾಎಲುಲ್ ಹಸ್‌ನೈನ್ ಪುಟ–84, ಖದರಿ ರಝ್ವಿ ಕುತುಬ್ ಖಾನ ಲಾಹೋರ್ 2010)

**ಹಝ್ರತ್ ಹಸನ್ ರಝಿಯಲ್ಲಾಹು ಅನಹುರವರ ಕ್ಷಮಾದಾನ**

ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಹೀಗೆ ಹೇಳಲಾಗುತ್ತದೆ, ಒಮ್ಮೆ ಓರ್ವ ಸೇವಕನು ಇಮಾಮ್ ಹಸನ್(ರ) ಅವರ ಬಳಿ ಚಹಾದ ಲೋಟ ತಂದನು. ತಮ್ಮ ಸಮೀಪಕ್ಕೆ ಅವನು ಬಂದಾಗ ನಿರ್ಲಕ್ಷ್ಯದಿಂದಾಗಿ ಅವನ ಕೈಯಿಂದ ಆ ಲೋಟ ಅವರ ತಲೆಯ ಮೇಲೆ ಉರುಳಿತು. ತೊಂದರೆ ಅನುಭವಿಸಿ ಆ ಸೇವಕನನ್ನು ದಿಟ್ಟಿಸಿ ನೋಡಿದರು. ಆ ಗುಲಾಮನು ನಿಧಾನವಾಗಿ ಉಚ್ಛರಿಸಿದ–**ವಲ್‌ಕಾಝಿಮೀನಲ್‌ಗೈಝು (ಆಲಿ ಇಮ್ರಾನ್: 135) ಕಝಿಮ್**ನಲ್ಲಿ ಮನುಷ್ಯ ತನ್ನ ಕೋಪವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಾನೆ ಅದನ್ನು ವ್ಯಕ್ತ ಪಡಿಸುವುದಿಲ್ಲ ಆದರೆ ಒಳಗಿನಿಂದ ಅವನು ರಾಜಿ ಆಗಿರುವುದಿಲ್ಲ, ಆದ್ದರಿಂದ ಕ್ಷಮಾದಾನದ ಶರತ್ತು ಇರಿಸಲಾಗಿದೆ. ಅವರು ಹೇಳಿದರು ನಾನು ಕ್ಷಮಿಸಿದ್ದೇನೆ. ಮತ್ತೆ ಹೀಗೆ ಉಚ್ಛರಿಸಿದ– **ವಲ್ಲಾಹು ಯುಹಿಬ್ಬುಲ್ ಮುಹ್‌ಸಿನೀನ್** ಅಲ್ಲಾಹನ ಪ್ರೀತಿಗೆ ಪಾತ್ರರಾಗುವರು ಜಝಿಮ್ ಮತ್ತು ಅಫುನ ನಂತರ ಒಳ್ಳೆಯದನ್ನು ಮಾಡುತ್ತಾರೆ. ಅವರು ಹೀಗೆ ಹೇಳಿದರು ಹೋಗು ನಾನು ನಿನ್ನನ್ನು ಇಂದು ಸ್ವತಂತ್ರಗೊಳಿಸುತ್ತೇನೆ. ನೀತಿವಂತರ ಉದಾಹರಣೆಯು ಹೀಗಿದೆ ಚಹಾದ ಲೋಟ ಬೀಳಿಸಿ ಸ್ವತಂತ್ರನಾದನು. ಈ ಉದಾಹರಣೆಗಳು ಶ್ರೇಷ್ಠ ತತ್ವಗಳಿಂದ ಹುಟ್ಟಿದವು." (ಮಲ್‌ಫೂಝಾತ್ ಸಂಪುಟ–1, ಪುಟ–115. ಮುದ್ರಣ ರಬ್ವಾಹ್)

**ಜಮಾಅತ್ತಿನ ಪ್ರಗತಿ ಹಸನ್ ಮತ್ತು ಹುಸೇರ ಜೀವನ ಚರಿತ್ರೆಯ ಪ್ರಕಾಶನದಲ್ಲಿ**

ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ:

"ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಅಲ್ಲಾಹನು ಆಗಾಗ್ಗೆ ಹೇಳಿದನು, ಅಹ್ಮದಿಯ ಜಮಾಅತ್ತಿನವರಿಗೂ ಸಹ ಮೊದಲಿನ ಪ್ರವಾದಿಗಳ ಜಮಾಅತ್ತುಗಳು ನೀಡಿದಂತಹ ಬಲಿದಾನಗಳನ್ನು ನೀಡಲೇ ಬೇಕಾಗಿದೆ. ಆದ್ದರಿಂದ ಒಮ್ಮೆ ಅವರು ಸ್ವಪ್ನದಲ್ಲಿ ಹೀಗೆ ನೋಡಿದ್ದರು, ಅವರು ನಿಝಾಮುದ್ದೀನಿನ ಮನೆಗೆ ಪ್ರವೇಶಿಸಿದ್ದೇನೆ. ನಿಝಾಮುದ್ದೀನಿನ ಅರ್ಥ "ದೀನಿನ ವ್ಯವಸ್ಥೆ" ಆ ಸ್ವಪ್ನದ ಅರ್ಥ ಕೊನೆಗೆ ಒಮ್ಮೆ ಅಹ್ಮದಿಯಾ ಜಮಾಅತ್ ನಿಝಾಮ್ ದೀನ್ ಆಗುವುದು ಎಂದಾಗಿದೆ. ವಿಶ್ವದ ಇನ್ನಿತರರ ವ್ಯವಸ್ಥೆಗಳ ಮೇಲೆ ಪ್ರಾಬಲ್ಯ ಹೊಂದುತ್ತದೆ. ಆದರೆ ಈ ಪ್ರಾಬಲ್ಯ ಹೇಗೆ ಹೊಂದಬಹುದು? ಇದರ ಬಗ್ಗೆ ಸ್ವಪ್ನದಲ್ಲಿ ನಾವು ಆ ಮನೆಯಲ್ಲಿ ಕೆಲವು ಹಸನಿ ಮಾರ್ಗವನ್ನು ಅನುಸರಿಸಿ ಪ್ರವೇಶಿಸಬಹುದು ಮತ್ತು ಕೆಲವು ಹುಸೈನಿ ಮಾರ್ಗವನ್ನು ಅನುಸರಿಸಿ ಪ್ರವೇಶಿಸ ಬಹುದು. (ತಝ್‌ಕರ 2ನೇ ಎಡಿಷನ್ ಪುಟ–188–189) ಈ ಮಾತು ಜನರೆಲ್ಲರು ಅರಿತಿದ್ದಾರೆ, ಹಝ್ರತ್ ಹಸನ್(ರ) ಅವರು ಶಾಂತಿಯಿಂದ ವಿಜಯಗಳನ್ನು ಸಾದಿಸಿದ್ದಾರೆ. ಅದೇ ರೀತಿ ಹಝ್ರತ್ ಹುಸೈನ್(ರ) ಅವರು ಗಳಿಸಿದ ವಿಜಯವು ಶಹಾದತ್‌ನಿಂದಾಗಿದೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಹೇಳಲಾಗಿದೆ ನಿಝಾಮುದ್ದೀನ್‌ನ ತನಕ ಜಮಾಅತ್ ತಲುಪುತ್ತದೆ ಆದರೆ ಶಾಂತಿ, ಪ್ರೀತಿ, ಶಹಾದತ್‌ನಿಂದ, ಮತ್ತು ಬಲಿದಾನಗಳಿಂದ ಸಾಧ್ಯ. ಒಂದು ವೇಳೆ ನಮ್ಮಲ್ಲಿ ಯಾರಾದರು ಶಾಂತಿ, ಪ್ರೀತಿಯನ್ನು ಬಿಟ್ಟು ಪ್ರಗತಿ ಹೊಂದುತ್ತಾನೆ ಎಂದು ಭಾವಿಸಿದರೆ ಅವನು ತಪ್ಪಾಗಿದ್ದಾನೆ. ಒಂದು ವೇಳೆ ಯಾರಾದರು ಬಲಿದಾನ ಮತ್ತು ಶಹಾದತ್‌ಗಳಿಲ್ಲದೇ ಪ್ರಗತಿ ಹೊಂದುತ್ತಾನೆ ಎಂದು ಭಾವಿಸಿದರೆ ಅವನೂ ಸಹ ತಪ್ಪಾಗಿದ್ದಾನೆ. ನಾವು ಕೆಲವೊಮ್ಮೆ ಸಂಧಾನ ಮತ್ತು ಶಾಂತಿಯ ಕಡೆ ಬಾಗಿದರೆ ಕೆಲವೊಮ್ಮೆ ಹುಸೈನಿನ ಮಾರ್ಗವನ್ನು ಅನುಸರಿಸಬೇಕಾಗಿದೆ ಅದರ ಅರ್ಥ ನಾವು ಶತ್ರುಗಳ ಮುಂದೆ ಸಾಯ ಬೇಕು ಆದರೆ ಅವನ ಮಾತನ್ನು ಒಪ್ಪಬಾರದು. ಈ ಎರಡು ಮಾರ್ಗಗಳನ್ನು ನಮಗೋಸ್ಕರ ವಿಧಿ ಆಗಿದೆ. ನಮಗೆ ಕೇವಲ ಕ್ರೈಸ್ತರ ವರ್ತನೆ ಹಾಗೆ ವಿಧಿ ಆಗಲಿಲ್ಲ ಅಥವಾ ಕೇವಲ ಮಹ್‌ದವೀಯರ ಹಾಗೆ ವಿಧಿ ಆಗದೆ, ಬದಲಿಗೆ ನಾವು ಮಧ್ಯದ ಮಾರ್ಗವನ್ನು ಅನುಸರಿಸಿವುದಾಗಿದೆ. ಸಂಧಾನ, ಶಾಂತಿ ಮತ್ತು ಪ್ರೀತಿಯಿಂದ ಒಂದು ಜಯವಾಗಿರುವುದು ಇನ್ನೊಂದು ವಿಜಯವು ಬಲಿದಾನಗಳಿಂದಾಗುವುದು. ಅದಾದ ನಂತರ ಜಮಾಅತ್ ನಿಝಾಮುದ್ದೀನಿರ ಮನೆಗೆ ಪ್ರವೇಶಿಸುತ್ತದೆ ಮತ್ತು ಅವರು ಯಶಸ್ಸುಗಳಿಸ ಬಹುದು." (ತಫ್‌ಸೀರೆ ಕಬೀರ್ ಸಂಪುಟ–7, ಪುಟ–583)

**ಹಝ್ರತ್ ಸಾಹೆಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಅವರ ಜೀವನ ಚರಿತ್ರೆ:**

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಅವರಿಗೆ ದಿವ್ಯವಾಣಿಯಲ್ಲಿ ಖಮರುಲ್ ಅಮ್ಬಿಯಾ ಎಂದು ಹೆಸರಿಸಲಾಗಿದೆ. 20 ಎಪ್ರೆಲ್ 1893ರಲ್ಲಿ ಜನಿಸಿದರು ಮತ್ತು 2 ಸೆಪ್ಟೆಂಬರ್ 1963ರಲ್ಲಿ ನಿಧನ ಹೊಂದಿದರು. ಈ ಮುಖ್ವಾಲು ಶತಮಾನದ ಕಾಲದಲ್ಲಿ ಅವರು ಎಲ್ಲಾ ಪ್ರವಾದಿಗಳ ಆಗಮನದ ಶ್ರೇಷ್ಠತೆ ಹಾಗೂ ಅವರನನ್ನು ಮಾದರಿಯಾಗಿ ಅನುಸರಿಸಿವುದನ್ನು ಪ್ರಕಟಗೊಳಿಸಿದರು ಅದೇ ರೀತಿ ತೊಂದರೆಗೆ ಸಿಲುಕಿರುವಂತಹ ಮಾನವಕುಲಕ್ಕೆ ಒಂದು ತಂಪಾದ ಬೆಳದಿಂಗಳನ್ನು ಸೃಷ್ಟಿಸಿ ನಿಜಕ್ಕು ತಾವು ಖಮರುಲ್ ಅಮ್‌ಬಿಯಾ ಎಂದು ಸಾಬಿತುಪಡಿಸಿದರು.

ಖಮರುಲ್ ಅಮ್‌ಬಿಯಾ ಅಂದರೆ ಪ್ರವಾದಿಗಳಿಂದ ಪ್ರಕಾಶವನ್ನು ಪಡೆಯುವವನು. ಅವರ ಶ್ರೇಷ್ಠತೆ ಮತ್ತು ಗುಣಗಳನ್ನು ಹರಡಿಸುವವನು ಮತ್ತು ಅವರ ಪ್ರಕಾಶನದಲ್ಲಿ ಜೀವನ ಕಳಿಯುವವನಾಗುವನು ಆದ್ದರಿಂದ ಹೀಗೇಯೆ ಆಯಿತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ)ರಲ್ಲಿ ತಖ್ವಾ ಅನೇಕ ಅಂಶಗಳಲ್ಲಿ ವ್ಯಕ್ತವಾಗುತ್ತದೆ ವಿನಮ್ರತೆ, ತನ್ನನ್ನು ಪ್ರದರ್ಶಿಸುವುದರಿಂದ ದೂರವಿರುವುದು, ತನಗೆ ಆದ್ಯತೆಯನ್ನೀಡುವುದರಿಂದ ಬಹಳ ದೂರವಿರುತ್ತಿದ್ದರು, ಊಟೋಪಚಾರ, ಉಡುಪುಗಳು ಮತ್ತು ವಸತಿಯಲ್ಲಿ ಒಂದು ಮನಸೆಳೆಯುವ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದರು. ಲೌಕಿಕ ವಸ್ತುಗಳನ್ನು ಕೇವಲ ಅಂತಿಮ ಸವಾರಿಗೋಸ್ಕರ ಉಪಯೋಗಿಸುತ್ತಿದ್ದರು ಮತ್ತು ಅದನ್ನು ದೀನಿನ ಸೇವೆಗೋಸ್ಕರ ನಿರತವಾಗಿಸುತ್ತಿದ್ದರು, ತೊಂದರೆಗಳನ್ನು ಖುಷಿಯಿಂದ ಸಹಿಸುತ್ತಿದ್ದರು, ಸಹನೆಯ ಉನ್ನತ ಮಟ್ಟವನ್ನು ವ್ಯಕ್ತ ಪಡಿಸುತ್ತಿದ್ದರು, ಎಲ್ಲಾ ಸೃಷ್ಠಿಯೊಂದಿಗೆ ಬಹಳ ಸಹಾನುಭೂತಿ ತೋರಿಸುತ್ತಿದ್ದರು, ಅಲ್ಲಾಹನ ಸ್ಮರಣೆಯನ್ನು ಆಹಾರವನ್ನಾಗಿಸುವುದು ಮತ್ತು ಅಲ್ಲಾಹನ ಪ್ರೀತಿಯಲ್ಲಿ ಮಗ್ನವಾಗಿರುವುದು. ಈ ಎಲ್ಲಾ ಅವರಲ್ಲಿ ವ್ಯಕ್ತವಾಗುತಿದ್ದಂತಹ ವಿಷಯಗಳು ಅಲ್ಲಾಹನೊಂದಿಗಿನ ತಖ್ವದ ಪವಾಡಗಳಗಿವೆ.

ಹಝ್ರತ್ ಮಿಯಾಂ ಸಾಹೆಬರ ಜೀವನವನ್ನು ನಾವು ಅಧ್ಯಾಯನ ಮಾಡಿದರೆ ಈ ನೈಜ್ಯತೆಯು ಅರಿವಾಗುತ್ತದೆ ಅಂದರೆ ಹಝ್ರತ್ ಮಿಯಾಂ ಸಾಹೆಬರು ತಮ್ಮ ಇಡೀ ಜೀವನದ ಪ್ರತಿಯೊಂದು ಕ್ಷಣ ಮತ್ತು ತಮ್ಮ ಎಲ್ಲಾ ದೇವ ಸಾಮರ್ಥ್ಯಗಳನ್ನು ಅಲ್ಲಾಹನಗೋಸ್ಕರ ನಿರತಗೊಳಿಸಿದ್ದರು ಎಂದು ಅರ್ಥವಾಗುತ್ತದೆ. ಅವರು ತಮ್ಮ ಎಲ್ಲಾ ದೈವ ಸಾಮರ್ಥ್ಯಗಳನ್ನು ಧರ್ಮ ಸೇವೆಯಲ್ಲಿ ನಿರತಗೊಳಿಸಿದರು. ಅವರ ಧಾರ್ಮಿಕ ಸೇವೆಯಲ್ಲಿ ಬಹಳ ವೈವಿದ್ಯತೆ ಇತ್ತು. ಶೈಕ್ಷಣಿಕವಾಗಿ ನೂರಾರು ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಆಧ್ಯಾತ್ಮಿಕ ಮತ್ತು ಸಾಹಿತ್ಯಿಕ ನಿಧಿಯನ್ನು ಒಳಗೊಂಡಿದ್ದವು. ಅವರ ಬರಹಗಳಿಗೆ ಕೃತಜ್ಞರಾಗಿದ್ದೇವೆ. ಜಮಾಅತ್ತಿನ ತರಬೇತಿಗಾಗಿ ಚಿಕ್ಕ ಚಿಕ್ಕ ಲೇಖನಗಳನ್ನು ಬರೆಯುವುದು ಸತತವಾಗಿ ಜಾರಿಯಲ್ಲಿರುತ್ತಿತ್ತು. ಯುವಕರನ್ನು ಮತ್ತು ಜಮಾಅತ್ತಿನ ಇನ್ನಿತರ ಸದಸ್ಯರನ್ನು ಧರ್ಮ ಸೇವೆ ಮಾಡಲು ವಿಶೇಷವಾಗಿ ಬರಹಗಳಿಂದ ಸೇವೆ ಮಾಡುವುದಕ್ಕೆ ಪ್ರೋತ್ಸಾಹಿಸುತ್ತಿದ್ದರು ಮತ್ತು ತಮ್ಮ ಅತ್ಯಮೂಲ್ಯವಾದ ಸೂಚನೆಗಳನ್ನು ಹೇಳುತ್ತಿದ್ದರು. ಪ್ರತಿಯೋರ್ವ ವ್ಯಕ್ತಿಯ ಪರಿಸ್ಥಿತಿಯಲ್ಲಿ ವೈಯುಕ್ತಿಕ ಆಸಕ್ತಿಯಿಂದ ಎಂತಹ ಪ್ರೀತಿ ಮತ್ತು ದಯೇತೋರಿಸುತ್ತಿದ್ದರು ಎಂದರೆ ಅವನು ಬೆಲೆಯಿಲ್ಲದ ಗುಲಾಮನಾಗುತ್ತಿದ್ದನು. ಒಟ್ಟಾಗಿ ಹೇಳುವುದಾದರೆ ತಾವು ತಮ್ಮ ಎಲ್ಲಾ ಪರಿಶ್ರಮದಿಂದ ಮತ್ತು ತಮ್ಮ ಇಡೀ ಸಮಯವನ್ನು ಧರ್ಮ ಮತ್ತು ದೇಶದ ಎಲ್ಲಾ ತರಹದ ಸೇವೆಗಳಲ್ಲಿ ಮತ್ತು ಅಲ್ಲಾಹನ ಸೃಷ್ಟಿಯೊಂದಿಗೆ ಸಹಾನುಭೂತಿ ತೋರುವುದರಲ್ಲಿ ನಿರತರಾದರು.

ತಾವು ಯುವಕರಿಗೆ ಧಾರ್ಮಿಕ ಸೇವೆ ಮತ್ತು ಜೀವನ ಸಮರ್ಪಣೆ (ವಖಫೆ ಝಿಂದಗಿ) ಗೆ ಒಂದು ಉನ್ನತ ಮಾದರಿ ಆಗಿದ್ದರು ದೈಹಿಕ ತೊಂದರೆ, ಅನಾರೋಗ್ಯರಾಗಿದ್ದರೂ ಸಹ ದರ್ಮ ಸೇವೆಯಲ್ಲಿ ತಮ್ಮನ್ನು ತೊಡಗಿಸುತ್ತಿದ್ದರು. ಅವರು ಮುಂಬರುವ ಪೀಳಿಗೆಗೆ ಒಂದು ಉತ್ತಮ ಮಾದರಿ ಆಗಿದ್ದಾರೆ.

ಹಝ್ರತ್ ಮಿಯಾಂ ಸಾಹೆಬ್(ರ) ಹೆಚ್ಚಾಗಿ ಕಲಾತ್ಮಕವಾಗಿ ತರಬೇತಿ ಮಾಡುತ್ತಿದ್ದರು. ಖಮರುಲ್ ಅಮ್‌ಬಿಯಾದಲ್ಲಿಯು ಇದರ ಬಗ್ಗೆ ಸೂಚನೆ ಇದೆ.

**ಅಲ್ಲಾಹನೊಂದಿಗೆ ಪ್ರೀತಿಯ ಒಂದು ಶೈಲಿ**

**ಬಿಸ್ಮಿಲ್ಲಾಹ್ ಬರೆಯುವ ವ್ಯವಸ್ಥೆ. ಪ್ರತಿ ಕೆಲಸವೂ ಅಲ್ಲಾಹನ ನಾಮದಿಂದ ಪ್ರಾರಂಭಿಸುವುದು.**

ಮಾನ್ಯ ಮುಖ್ತಾರ್ ಅಹ್ಮದ್ ಹಾಶ್ಮಿ ಸಾಹೆಬರು ಬರೆಯುತ್ತಾರೆ:

ಒಮ್ಮೆ ಹಝ್ರತ್ ಮಿಯಾಂ ಸಾಹೆಬ್(ರ) ಅವರ ಮನೆಗೆ ಕಚೇರಿಯ ಪತ್ರಗಳನ್ನು ತೆಗೆದು ಕೊಂಡು ಹಾಜರಾದೆನು. ಅವರು ಕೆಲಸ ಮುಗಿದ ನಂತರ ಹೇಳಿದರು ನನ್ನ ಪೆನ್ನಿನ ನಿಬ್(PEN NIB) ಕೆಟ್ಟುಹೋಗಿದೆ ನೀವು ನನಗೋಸ್ಕರ ಬಾಜಾರಿನಿಂದ ಒಂದು ಪೆನ್ನನ್ನು(PEN) ಖರೀದಿಸಿ ತಂದುಕೊಡಿ. ನಾನು ಬಾಝಾರಿನಿಂದ ಎರಡು ಮೂರು ತರಹದ ಪೆನ್ ತೆಗೆದುಕೊಂಡು ಬಂದೆನು. ತಾವು ಪ್ರತಿಯೊಂದು ಪೆನ್ನಿನಿಂದ ಒಂದೊಂದಾಗಿ ಒಂದು ಹಾಳೆಯ ಮೇಲೆ ಬರೆದರು ಕೊನೆಗೆ ಒಂದು ಪೆನ್ ಇಷ್ಟವಾಯಿತು. ಅವರು ಆ ಪೆನ್ನಿನ ಬರಹ ತೋರಿಸಿದರು. ನಾನು ಆ ಕಾಗದವನ್ನು ನೋಡಿದಾಗ ಅದರ ಮೇಲೆ ಅನೇಕ ಬಾರಿ ಬಿಸ್ಮಿಲ್ಲಾಹ್ ಎಂದು ಬರೆಯಲಾಗಿತ್ತು. ನಾನು ಎಂದೂ ಹೊಸ ಪೆನ್ನನ್ನು ಖರೀದಿಸಿದರೆ ಮೊಟ್ಟ ಮೊದಲು ನಾನು ಬಿಸ್ಮಿಲ್ಲಾಹ್ ಬರೆಯುತ್ತೇನೆ. ಪೆನ್ನಿನ ವೇಗದ ಮಿತಿ ಮತ್ತು ಬರವಣಿಗೆಯನ್ನು ಪರಿಶೀಲಿಸಬೇಕಾದರೆ ಏನಾದರೂ ಬರೆಯುವುದಕ್ಕೆ ಉತ್ತಮ ವಾದದ್ದು ಅಲ್ಲಾಹನ ನಾಮವನ್ನು ಬರೆದು ಪ್ರಾರಂಭಿಸಿದರೆ ಉತ್ತಮವಾಗಿದೆ ಎಂದರು. ಅದೇ ರೀತಿ ಸರಕಾರದ ಕಚೇರಿಗಳಿಗೆ ಆಂಗ್ಲ ಭಾಷೆಗಳಲ್ಲಿ ಖಾದಿಯಾನಿನ ಬಗ್ಗೆ ಬರೆಯುವಂತಹ ಪತ್ರಗಳ ಬಗ್ಗೆ ತಾವು ಕಚೇರಿಯ ಸಿಬ್ಬಂಧಿಗಳಿಗೆ ಶಾಶ್ವತವಾಗಿ ಅದನ್ನು ಪ್ರಾರಂಭಿಸುವಾಗ **–ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್.**

**ನಹ್ಮದಹೂ ವ ನುಸಲ್ಲಿ ಅಲಾ ರಸೂಲಿಹಿಲ್ ಕರೀಮ್** ಎಂದು ಬರೆಯಬೇಕೆಂದು ಸೂಚಿಸಿದ್ದರು. ಅದೇ ರೀತಿ ಪತ್ರದಲ್ಲಿ ಯಾರಿಗಾದರೂ ಉದ್ದೇಶಿಸಿ ಮಾತನಾಡಬೇಕಾದರೆ ಅಲ್ಲಿ –**ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾ ಹಿ ವಬರಕಾತಹು** ಎಂದು ಬರೆಯಬೇಕು. ಆದರಿಂದ ಕಚೇರಿಗಳಲ್ಲಿ ಇದನ್ನು ಅನುಸರಿಸಲಾಯಿತು.

**ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಪ್ರೀತಿ**

ಒಮ್ಮೆ ಹಝ್ರತ್ ಮಿಯಾಂ ಸಾಹೇಬ್(ರ) ಅವರು ನನಗೆ ಒಂದು ಮಸೂದೆಯನ್ನು ಬರೆಯಲು ನೀಡಿದರು ಅದರಲ್ಲಿ ಒಂದು ವಾಜ್ಯವೂ ಹೀಗಿತ್ತು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೀಗೆ ಹೇಳಿದರು ಎಂದು. ನಾನು ಅವಸರದಲ್ಲಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಎಂದು ಬರೆಯುವ ಬದಲು ಕೇವಲ ಸಲ್ಲಮ್ ಎಂದು ಬರೆದೆ. ಸಹಿ ಮಾಡುವ ಸಂದರ್ಭದಲ್ಲಿ ಹೇಳಿದರು ಸಲ್ಲಮ್ ಎಂದು ಬರೆಯುವುದು ಇಷ್ಟಪಡುವುದಿಲ್ಲ. ಇಷ್ಟು ದೊಡ್ಡ ದೊಡ್ಡ ಪಂಕ್ತಿಗಳು ಬರೆಯಬಹುದಾದರೆ ಕೇವಲ ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಹೆಸರಿಗೆ ಮಾತ್ರ ಏಕೆ ಚಿಕ್ಕದಾಗಿ ಬರಿಯುವುದು ಎಂದು ಅವರು ತಮ್ಮ ಪೆನ್ನಿನಿಂದ ಸಲ್ಲಲ್ಲಾಹು ಅಲೈಹಿವಸಲ್ಲಮ್ ಎಂದು ಸಂಪೂರ್ಣವಾಗಿ ಬರೆದರು. ತದನಂತರ ನಾವು ಎಂದೂ ಆ ರೀತಿ ಚಿಕ್ಕದಾಗಿ ಪ್ರವಾದಿ(ಸ) ಅವರ ಹೆಸರು ಬರೆಯಲಿಲ್ಲ. ಆ ಸಂದರ್ಭದಲ್ಲಿ ತಾವು ಇನ್ನೊಂದು ಮಾತನ್ನು ಹೇಳಿದರು: ನನಗೆ ಮುಹಮ್ಮದ್ ಎಂದು ಆಂಗ್ಲ ಭಾಷೆಯಲ್ಲಿ ಚಿಕ್ಕದಾಗಿ Mohd ಎಂದು ಬರೆಯುವುದು ಸಹ ಇಷ್ಟವಿಲ್ಲ. ನಾನು ಹೀಗೆ Mohd ಎಂದು ಬರೆಯುವವರ ಮೇಲೆ ಬಹಳ ಆಶ್ಚರ್ಯ ಮತ್ತು ದುಃಖವಾಗುತ್ತದೆ. ಯಾರು ಇಂತಹ ಕೆಟ್ಟ ಮಾತನ್ನು ಸೃಷ್ಟಿಸಿದ್ದಾನೆ ಎಂದು ಗೊತ್ತಿಲ್ಲ ಚಿಕ್ಕದಾಗಿ ಬರಿಯುವುದನ್ನು ಕೇವಲ ಮುಹಮ್ಮದ್(ಸ) ಅವರ ಹೆಸರಲ್ಲೆ ಬರೆದಿದ್ದಾನೆ.

ಒಮ್ಮೆ ಹಝ್ರತ್ ಮಿಯಾಂ ಸಾಹೇಬ್(ರ) ಅವರು ಪಾಕಿಸ್ತಾನದ ಹೊರಗೆ ಮುಬಲ್ಲಿಗರಿಗೆ ಒಂದು ಬಿಳಿ ಕಾಗದ ಮೇಲೆ ಪತ್ರ ಬರೆಯಲು ಹೇಳಿದೆ. ನಾನು ಆ ಪತ್ರಗಳ ಪ್ರಾರಂಭದಲ್ಲಿ–**ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್– ನಹ್ಮದಹೂ ವ ನುಸಲ್ಲಿ ಅಲಾ ರಸೂಲಿಹಿಲ್ ಕರೀಮ್– ವಸ್ಸಲಾತು ವಸ್ಸಲಾಮು ಅಲಾ ಅಬ್‌ದಿಹಿಲ್ ಮಸೀಹಿಲ್ ಮೌಊದ್**. ಎಂದು ಬರೆದರು. ಸಹಿ ಮಾಡುವ ಸಂದರ್ಭದಲ್ಲಿ ಹೇಳಿದರು ನೀವು ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗೆ ಸಲಾತ್ ಮತ್ತು ಸಲಾಮ್ ಎರಡನ್ನು ಬರೆದಿದ್ದೀರಿ ಮತ್ತು ಹಝ್ರತ್ ರಸೂಲೆ ಕರೀಮ್ ಅವರೊಂದಿಗೆ ಕೇವಲ ಸಲಾತ್ ಎಂದು. ಈ ರೀತಿ ಬರೆಯೋದು ಸರಿಯಲ್ಲ. ಅವರು ಸರದಾರರಾಗಿದ್ದರು ಮತ್ತು ಇವರು ಗುಲಾಮರಾಗಿದ್ದರು. ಈ ಸಂದರ್ಭದಲ್ಲಿ ಕೇವಲ –**ವಅಲಾ ಅಬ್ದಿಹಿಲ್ ಮಸೀಹಿಲ್ ಮೌಊದ್** ಎಂದು ಬರೆದರೆ ಸಾಕು. ಎಲ್ಲಾದರು ಪ್ರತ್ಯೇಕವಾಗಿ ಬರೆಯಬೇಕಾದರೆ ವಸ್ಸಲಾತು ವಸ್ಸಲಾಮ್ ಎಂದು ಬರೆಯುವುದರಲ್ಲಿ ಏನು ತಪ್ಪಿಲ್ಲ.

**ಹಝ್ರತ್ ಅಮೀರುಲ್ ಮುಮಿನೀನ್ ಅವರೊಂದಿಗೆ ಪ್ರೀತಿ**

ಮುಖ್ತಾರ್ ಹಾಶ್ಮಿ ಸಾಹೇಬ್ ಹೇಳುತ್ತರೆ:

ಅವರು ತಮ್ಮ ಸ್ವಂತ ಮನೆ ಅಲ್‌ಬುಶ್ರ ನಿರ್ಮಾಣ ಮಾಡಿದಾಗ ಅವರು ಸದರ್ ಅನ್‌ಜುಮನ್ ಅಹ್ಮದಿಯಾದ ಕ್ವಾಟರ್ ಬಿಟ್ಟು ಹೋಗುತ್ತಿರುವಾಗ ಹೇಳಿದರು "ನನ್ನ ಮನಸ್ಸು ಇಲ್ಲಿಯೇ ಇರಬೇಕೆಂದು ಬಯಸುತ್ತದೆ ಇಲ್ಲಿ ನಾವು ಹಝ್ರತ್ ಸಾಹೆಬ್ ಅವರ ಸಮೀಪ ಕುಳಿತಿದ್ದೇವೆ ಅಲ್ಲಿ ದೂರ ಆಗುವೆವು ಇದು ಒಂದು ಚಿಕ್ಕದಾದ ವಾಕ್ಯವಾಗಿದೆ, ಆದರೆ ಇದರಿಂದ ನಾನು ಹಝ್ರತ್ ಮಿಯಾಂ ಸಾಹೇಬರು ಹಝ್ರತ್ ಅಮೀರುಲ್ ಮೂಮಿನೀನ್ ರವರಿಂದ ಎಷ್ಟು ಕಷ್ಟದಿಂದ ದುಃಖದಿಂದ ದೂರ ಹೋಗುತ್ತಿದ್ದಾರೆಂದು ಊಹಿಸಬಹುದು.

**ಖಮರುಲ್ ಅಮ್ಬಿಯಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರ ಜೀವನ ಚರಿತ್ರೆಯ ಕೆಲವು ಘಟನೆಗಳು**

ಒಂದು ಪ್ರಸಿದ್ಧ ಮಾತಿದೆ ಖಮರುಲ್ ಅಂಬಿಯಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬರ ಬಾಗಿಲು ಬಡವರಿಗಾಗಿ ಸದಾ ತೆರೆದಿರುತ್ತಿತ್ತು ಎಂದು. ಅನೇಕ ಬಡ ವಿದ್ಯಾರ್ಥಿಗಳು ಪುಸ್ತಕಗಳಿಗೆ ಮತ್ತು ಫೀಸ್‌ಗೋಸ್ಕರ ತಮ್ಮ ಅರ್ಜಿಗಳನ್ನು ಅವರಿಗೆ ನೀಡುತ್ತಿದ್ದರು. ಹೀಗೆ ಅವರು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದರು.

ಪಾಕಿಸ್ತಾನದಲ್ಲಿ ಖಾದಿಯಾನಿನ ದರ್‌ವೇಶರ ಕುಟುಂಬದವರಿಗೆ ಅವರು ಓರ್ವ ತಂದೆಯ ಸ್ಥಾನ ಪಡೆದಿದ್ದರು. ಯಾರಾದರು ದರವೇಶರ ಮಕ್ಕಳು ತಮ್ಮ ಹತ್ತಿರ ಬಂದು ತಮ್ಮ ಸಂಕಷ್ಟಗಳನ್ನು ವ್ಯಕ್ತಪಡಿಸಿದರೆ ಅವರ ಕಷ್ಟಗಳನ್ನು ಕೇಳಿ ಅವರ ಮನಸ್ಸು ಮೃದುಗೊಳ್ಳುತ್ತಿತ್ತು. ಅವರು ಅವರ ಸಂಕಷ್ಟಗಳಿಗೆ ಪರಿಹಾರ ಒದಗಿಸಿ ಕೊಡುತ್ತಿದ್ದರು. ಮತ್ತು ಅವರಿಗೋಸ್ಕರ ದುಆ ಸಹ ಮಾಡುತ್ತಿದ್ದರು. ಅದರಿಂದ ಆ ಬಡವನ ಸಂಕಷ್ಟವು ದೂರವಾಗುತ್ತಿತ್ತು.

**ಹಝ್ರತ್ ಖಮರುಲ್ ಅಮ್‌ಬಿಯಾ ಮತ್ತು ವಾಖಿಫೀನೆ ಝಿಂದಗೀ**

ಮಾನ್ಯ ಮೌಲಾನ ಮುಹಮ್ಮದ್ ಮುನವ್ವರ್ ಅಹ್ಮದ್ ಸಾಹೇಬ್ ಆಫ್ರಿಕಾ ದೇಶದ ಮುಬಲ್ಲಿಗರಾಗಿದ್ದರು ಅವರು ಹೇಳುತ್ತಾರೆ:

ನವೆಂಬರ್ 1952ರಲ್ಲಿ ನಾನು ರಜೆ ಪಡೆದು ಪಾಕಿಸ್ತಾನಕ್ಕೆ ತೆರಳಿದಾಗ ಅಕಸ್ಮಿಕವಾಗಿ ರಬ್ವಾದ ಮುಬಾರಕ್ ಮಸೀದಿಯ ಹತ್ತಿರ ಅವರ ಭೇಟಿ ಆಯಿತು. ನಾನು ಹಸ್ತಲಾಘವವನ್ನು ಮಾಡಿ ಹೀಗೆ ಹೇಳಿದೆ ನಾನು ಪೂರ್ವ ಆಫ್ರಿಕಾದಲ್ಲಿ 4 ವರ್ಷಗಳ ಕಾಲ ತಬ್ಲೀಗ್ ಮಾಡಿ ಈಗ ಹಿಂದಿರುಗಿದ್ದೇನೆ ಎಂದು. ಇದನ್ನು ಕೇಳಿದ ತಕ್ಷಣ ಅವರು ನನ್ನನ್ನು ಆಲಂಘಿಸಿ ನನ್ನ ಯೋಗಕ್ಷೇಮ ವಿಚಾರಿಸಿದರು. ಈ ಆಲಂಘನೆಯಿಂದ ನನಗೆ ಉಂಟಾದ ಆನಂದದ ಬಗ್ಗೆ ನನಗೆ ಹೇಳಲು ಅಸಾಧ್ಯ ಬಹುಶಃ ಹಝ್ರತ್ ಮಿಯಾಂ ಸಾಹೆಬರು ನನ್ನನ್ನು ವೈಯುಕ್ತಿಕವಾಗಿ ಗುರುತಿಸಲಿಲ್ಲವೇನೋ. ಮತ್ತು ನನ್ನ ಪೂರ್ವಜರು ಯಾವುದೇ ಅಂತಹ ಧಾರ್ಮಿಕ ಸೇವೆಯಲ್ಲಿ ಇರಲಿಲ್ಲವಾದ್ದರಿಂದ ಅವರು ನನ್ನನ್ನು ಗುರುತಿಸಲಿಲ್ಲ. ಮತ್ತು ಹಝ್ರತ್ ಮಿಯಾಂ ಸಾಹೇಬರು ಯಾರನ್ನು ಹೀಗೆ ರಸ್ತೆಗಳಲ್ಲಿ ಆಲಂಘಿಸುತ್ತಿರಲಿಲ್ಲ. ನನಗೂ ಸಹ ಅವರಿಗೆ ಹಸ್ತಾಲಾಘವ ಮಾಡಲು ಧೈರ್ಯವಗಲಿಲ್ಲ ಆದರೆ ಕೇವಲ ನಾನು ಕೆಲವು ವರ್ಷ ಆಫ್ರಿಕಾದಲ್ಲಿ ದೀನನ ಸೇವೆಸಲ್ಲಿಸುತ್ತಿದ್ದೇನೆ ಎಂದು ಹೇಳಿದ ಕಾರಣ ತಾವು ನನಗೆ ಪ್ರೋತ್ಸಾಹಿಸುವುದಕ್ಕಾಗಿ ಹೀಗೆ ಭೇಟಿ ಆದರು ಆದರೆ ಇದನ್ನು ನಾನು ಎಂದೂ ಮರೆಯಲಾರೆನು. ಇದು ನನಗೋಸ್ಕರ ಜೀವನದ ಹೂಡಿಕೆ ಸಾಗಿದೆ. ದೀನಿನ ಪ್ರಕಟಣೆಗಾಗಿ ಶ್ರಮಿಸುತ್ತಿರುವ ಎಲ್ಲಾ ಸೇವಕರೊಂದಿಗೆ ನಮ್ಮ ಪ್ರೀಯ ಹಝ್ರತ್ ಮಿಯಾಂ ಸಾಹೇಬರು ವಿಶೇಷವಾಗಿ ಪ್ರೀತಿಸುತ್ತಿದ್ದರು ಮತ್ತು ಅವರಿಗೋಸ್ಕರ ಸದಾ ದುಆ ಮಾಡುತ್ತಿರುತ್ತಿದ್ದರು.

ಮತ್ತೆ ಮಾನ್ಯ ಮೌಲಾನ ಮುಹಮ್ಮದ್ ಮುನವ್ವರ್ ಅಹ್ಮದ್ ಸಾಹೇಬರು ಬರೆಯುತ್ತಾರೆ:

ಆಗಷ್ಟ್ 1960ರಲ್ಲಿ ನಾನು 8 ವರ್ಷ ನಂತರ ಪುನಃ ರಬ್ವಾಗೆ ಬಂದಾಗ ಹಝ್ರತ್ ಅಕದಸ್ ಖಲೀಫ ಸಾನಿ(ರ) ಅವರನ್ನು ಭೇಟಿ ಆಗಿ ಹಝ್ರತ್ ಮಿಯಾಂ ಸಾಹೆಬ್ ಅವರನ್ನು ಭೇಟಿ ಆಗಲು ಅವರ ಮನೆಗೆ ತೆರಳಿದೆ ಅಲ್ಲಿ ಅವರ ಓರ್ವ ಸೇವಕ ಮಹಮ್ಮದ್ ಶರೀಫ್ ಸಾಹೆಬ್ ಅವರು ಒಳಗೆ ವಿಷಯ ತಿಳಿಸಿದರು ಅಲ್ಲಿಂದ ಸಂದೇಶ ಬಂತು ಹಝ್ರತ್ ಅವರ ಅರೋಗ್ಯ ಸರಿ ಇಲ್ಲವಾದ್ದರಿಂದ ಅವರಿಗೆ ಭೇಟಿ ಆಗಲು ಸಾಧ್ಯವಿಲ್ಲ ಎಂದು. ನಾನು ನಿರಾಶಿತನಾಗಿ ಹಿಂದಿರುಗಿದೆ ಇನ್ನು ಸ್ವಲ್ಪ ದೂರ ಹೋಗಿರಲಿಲ್ಲ ಇನ್ನೊಂದು ಸೇವಕ ಓಡಿ ಓಡಿ ಬಂದು ಹೇಳಿದ ಹಝ್ರತ್ ಸಾಹೆಬರು ನನಗೆ ಕೇಳುತ್ತಿದ್ದಾರೆ ಎಂದು, ನಾನು ಇದನ್ನು ಕೇಳಿ ಸಂತೋಷಗೊಂಡು ಅವರ ಬಳಿ ಭೇಟಿ ಆಗಲು ಹೋದೆ. ಅಲ್ಲಿ ಹೋದಾಗ ಅವರು ಹಾಸಿಗೆಯ ಮೇಲೆ ಮಲಗಿದ್ದಾರೆ ಅವರ ಬಣ್ಣ ಹಳದಿ ಆಗಿದೆ, ಮುಖದ ಮೇಲೆ ಆಯಾಸ ಮತ್ತು ದೌರ್ಬಲ್ಯ ವ್ಯಕ್ತವಾಗುತ್ತಿತ್ತು. ತನ್ನ ಬಳಿ ಕೂರಲು ಸಂಜ್ಞೆ ಮಾಡಿ ಹೇಳಿದರು: "ರಾತ್ರಿ ಉಮ್ಮೆ ಮುಝಫ್ಫರ್ ಅವರಿಗೆ ಪೆಟ್ಟು ಬಿದ್ದಿದ್ದರಿಂದ ಬಹಳ ಅಸಮಾಧನವಿತ್ತು ಆದ್ದರಿಂದ ರಾತ್ರಿ ಮಲಗಲು ಸಾಧ್ಯವಾಗಲಿಲ್ಲ. ಈಗ ದೌರ್ಬಲ್ಯ ಮತ್ತು ಆಯಾಸ ಸಹ ಇದೆ. ಈ ಮಾತುಗಳನ್ನು ಆಲಿಸಿದಾಗ ನನಗೆ ಬಹಳ ನಾಚಿಕೆ ಯಂಟಾಯಿತು ಹಝ್ರತ್ ಮಿಯಾಂ ಸಾಹೆಬರನ್ನು ನಾನು ಬೇಟಿ ಆಗಿ ತೊಂದರೆ ನೀಡಿದೆ ಎಂದು. ಆದರೆ ನನಗೆ ಇದರ ಬಗ್ಗೆ ಅರಿವಿರಲಿಲ್ಲ ನಂತರ ಅಲ್‌ಫಝಲ್‌ನಿಂದ ನನಗೆ ತಿಳಿಯಿತು ಸ್ನಾನಗೃಹದಲ್ಲಿ ಕಾಲು ಜಾರಿದ ಕಾರಣ ಮೂಳೆ ಮುರಿದು ಹೋಗಿತ್ತೆಂದು. ಅಲ್ಲಾಹ್! ಅಲ್ಲಾಹ್! ನನ್ನ ಮನಸ್ಸಿಗೆ ನೋವಾಗ ಬಾರದೆಂದು ಅವರು ನನ್ನೊಂದಿಗೆ ಬೇಟಿ ಆಗಿದ್ದರು. ಅವರು ತಮ್ಮ ನೋವನ್ನು ಮರೆತು ಬಿಟ್ಟರು. ನಂತರ ನಾನು ಅವರಿಗೆ ಕಾಣಿಕೆಯನ್ನು ನೀಡಿದಾಗ ಅವರು ನೀವು ದೀನಿನ ಸೇವಕರಾಗಿದ್ದೀರಿ ಇದನ್ನು ನೀವು ನಿಮ್ಮ ಹತ್ತಿರವೇ ಇರಿಸಿರಿ ಎಂದರು.

**ಉರ್ದು ಭಾಷೆಯ ಓರ್ವ ಶ್ರೇಷ್ಠ ಗದ್ಯ ಬರಹಗಾರರು**

ಹಝ್ರತ್ ಮಸಿಮೌಊದ್(ಅ) ಅವರ ಜ್ಞಾನದಿಂದ ಪ್ರಭಾವಿತವಾದ ಜಮಾಅತಿನ ಕೆಲವು ದಿಗ್ಗಜ ವಿದ್ವಾಂಸರಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಅವರ ಹೆಸರು ಇದೆ. ಅವರು ತಮ್ಮ ಗದ್ಯ ಬರವಣಿಗೆಯಲ್ಲಿ ಅನೇಕ ಶ್ರೇಷ್ಠ ಗ್ರಂಥಗಳನ್ನು ರಚನೆ ಮಾಡಿ ಎಂದಿಗೂ ಮುಕ್ತಾಯವಾಗದ ನಿಧಿಯನ್ನು ನೀಡಿದ್ದಿರಿ ಅದರಲ್ಲಿ **"ಸೀರತ್ ಖಾತಮುನ್ನಬಿಯೀನ್(ಸ)"** ಬಹು ಮುಖ್ಯವಾದ ಐತಿಹಾಸಿಕ ರಚನೆ ಉರ್ದು ಬಾಷೆಯಲ್ಲಿ ಆಗಿದೆ. ಹಝ್ರತ್ ಮಿಯಾಂ ಸಾಹೇಬರನ್ನು ಅಲ್ಲಾಹನು ಒಂದು ವಿಶಿಷ್ಟ ಶೈಲಿಯಲ್ಲಿ ಮಾತನ್ನು ರಚನೆ ಮಾಡುವುದನ್ನು ನೀಡಿದ್ದನು. ನಿಮ್ಮ ಗದ್ಯ ಭಾಗವನ್ನು ಒಂದು ಸುಂದರವಾದ ಬೇರೆ ಬೇರೆ ರೀತಿಯ ಹೂಗಳುಳ್ಳ ಉದ್ಯಾನಕ್ಕೆ ಹೋಲಿಸಬಹುದು ಇದರಲ್ಲಿ ಯಾವ ಸಂಶಯವು ಇಲ್ಲ ಅದು ಬಹಳ ಸರಳತೆಯಿಂದ ಕೂಡಿದ್ದು, ಉನ್ನತ ಆಳವಾದ ಅರ್ಥವುಳ್ಳ ಮಾತುಗಳುಳ್ಳ, ಬಹಳ ಸುಂದರವಾದ ಪದಗಳ ಜೋಡಣೆ, ಉತ್ತಮ ರೂಪಕಗಳು, ಉತ್ತಮ ವಿಶ್ಲೇಷಣೆ, ಉತ್ತಮ ರಿತಿಯಲ್ಲಿ ಉಪಮೆಗಳನ್ನು ಉಪಯೋಗಿಸುವುದು ಮುಂತಾದವುಗಳು ಅವರ ಗದ್ಯ ಭಾಗವನ್ನು ಶ್ರೇಷ್ಠಿಸುತ್ತದೆ.

ಜಮಾಅತಿನ ಸಂಸ್ಥಾಪಕರಾದ ಹಝ್ರತ್ ಮಸಿಹ್ ಮೌಊದ್(ಅ) ಅವರು ನಿಧನ ಹೊಂದಿದಾಗ. ಜಮಾಅತಿನ ಮೇಲೆ ಬಹಳ ದುಃಖದ ಸಂಗತಿ ಆಗಿತ್ತು. ಇಂತಹ ಸಂದರ್ಭದಲ್ಲಿ ಜಮಾಅತಿನ ಸದಸ್ಯರ ಭಾವನೆಗಳನ್ನು ಈ ರೀತಿ ವ್ಯಕ್ತ ಪಡಿಸಿದರು:

"ಈ ವಾರ್ತೆಯು ಜಮಾಅತ್ತಿನ ಸದಸ್ಯರಿಗೆ ದುಃಖದ ಕಾರಣ ಹುಚ್ಚುಹಿಡಿಸಿದಂತೆ ಮಾಡಿದೆ ಅವರ ಮುಂದೆ ಲೋಕವೂ ಕತ್ತಲಲ್ಲಿ ಮುಳುಗಿದೆ ಮತ್ತು ಮುತ್ತಿನಂತಹ ಮನಸ್ಸುಗಳು ದುಃಖದಿಂದ ಹೊಡೆದು ಹೋಗುತ್ತಿದೆ ಮತ್ತು ಪ್ರತಿಯೊಬ್ಬನ ಕಣ್ಣುಗಳು ತನ್ನ ಪ್ರೀಯೆಯು ಅಗಲಿ ಹೋಗಿದ ಕಾರಣ ಕಂಬನಿ ಸುರಿಯುತ್ತಿತ್ತು ಪ್ರತಿಯೊಂದು ಮನಸ್ಸು ಈ ವಲಸೆಯಿಂದ ಉರಿಯುತ್ತಿತ್ತು."

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 07,14 July 2022, Issue No. 27-28

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಭಾವನೆಗಳ ಲೋಕದ ಸಂಬಂಧವೂ ಕೇವಲ ಮೂರು ಅಂಗಗಳ ಮೇಲೆ ಆಧರಿತವಾಗಿದೆ ಹೃದಯ, ಕಣ್ಣುಗಳು ಮತ್ತು ಮನಸ್ಸು. ತಾವು ಎಂತಹ ಅದ್ಭುತವಾಗಿ ಈ ಮೂರು ಅಂಗಗಳನ್ನು ಉಪಯೋಗಿಸಿ ಬಹಳ ಸಂಕ್ಷಿಪ್ತವಾಗಿ ವಿವರಿಸಿದರು. ಮುಂದೆ ಹೇಳುತ್ತಾರೆ:

"ಜನರಲ್ಲಿ ಬಹಳಷ್ಟು ಜನರು ಚಿಕ್ಕ ಮಕ್ಕಳ ಹಾಗೆ ಉಕ್ಕಿ ಉಕ್ಕಿ ಅಳುತ್ತಿದ್ದರು ಮತ್ತು ಕೆಲವರು ಈ ಮಾತನ್ನು ಒಪ್ಪಲು ಸಿದ್ಧವೇ ಇರಲಿಲ್ಲ ಅಂದರೆ ನಿಜಕ್ಕು ಅವರ ಪ್ರೀಯ ಇಮಾಮ್ ಅವರು ಪ್ರೀಯ ಸರದಾರ, ಅವರ ಕಣ್ಣುಗಳ ಪ್ರಕಾಶ, ಅವರ ಮನಸ್ಸಿನ ಸಂತೋಷ, ಅವರ ಜೀವನದ ಬೆಂಬಲ, ಅವರ ವ್ಯಕ್ತಿತ್ವದ ಬೆಳಗುತ್ತಿರುವ ನಕ್ಷತ್ರ ಅವರಿಂದ ನಿಜಕ್ಕು ಅಗಲಿ ಹೋಗಿದ್ದಾರೆ ಎಂದು ನಂಬುತ್ತಿರಲಿಲ್ಲ"

**"ಪ್ರೀಯ ಇಮಾಮ್" "ಪ್ರೀಯ ಸರದಾರ" "ಕಣ್ಣುಗಳ ಪ್ರಕಾಶ" "ಮನಸ್ಸಿನ ಸಂತೋಷ" "ಜೀವನದ ಬೆಂಬಲ" "ವ್ಯಕ್ತಿತ್ವದ ಬೆಳಗುತ್ತಿರುವ ನಕ್ಷತ್ರ"** ಈ ಎಲ್ಲಾ ಪದಗಳನ್ನು ನಾವು ಆಲಿಸಿ ನೋಡಿದರೆ ನಮಗೆ ಎಂತಹ ಅದ್ಭುತವಾದ ಪದಜೋಡಣೆ ಮತ್ತು ಈ ಪದಗಳಿಂದ ವ್ಯಕ್ತವಾಗುವ ಪ್ರೀತಿಯ ಭಾವನೆ ಎಂದು ಅರ್ಥವಾಗುತ್ತದೆ.

ಮತ್ತು ಈ ದೃಶ್ಯದ ಇನ್ನೊಂದು ಭಾಗವನ್ನು ವ್ಯಕ್ತಪಡಿಸುತ್ತ ಹೇಳುತ್ತಾರೆ:

"ಹಝ್ರತ್ ಮಸೀಹ್‌ಮೌಊದ್(ಅ) ಅವರ ನಿಧನದ ಸುದ್ದಿಯು ವಿರೋಧಿಗಳಿಗೆ ತಲುಪಿದಾಗ........ ಅವರು ನಮ್ಮ ಮುಂದೆ ನಿಂತು ಸಂತೋದಿಂದ ಗೀತೆಗಳನ್ನು ಹಾಡುತ್ತಿದ್ದರು, ಖುಷಿಯಿಂದ ನೃತ್ಯ ಮಾಡುತ್ತಿದ್ದರು, ಸಂತೋಷದ ಘೋಷಣೆಗಳನ್ನು ಕೂಗುತ್ತಿದ್ದರು ಮತ್ತು ಕಾಲ್ಪನಿಕ ಜನಾಝಗಳನ್ನು ತಯಾರಿಸಿ ಪ್ರದರ್ಶನಗಳ ಮೆರವಣಿಗೆಗಳನ್ನ ಮಾಡಿದರು."

ಈ ಪದಗಳಿಂದ ಓದುಗನಿಗೆ ಸರಿಯಾದ ಚಿತ್ರವೂ ಅವನ ಮುಂದೆ ಬರುತ್ತದೆ ಮತ್ತು ಇದೇ ಒಂದು ಒಳ್ಳೆಯ ಸಾಹಿತಿಯ ಗುಣಲಕ್ಷಣವಾಗಿದೆ.

ತದನಂತರ ಜಮಾಅತ್ತಿನ ಸದಸ್ಯರಿಗೆ ತಿಳಿಮಾತು ಹೇಳುತ್ತಾ ನುಡಿಯುತ್ತಾರೆ:

"ನಮ್ಮ ದುಃಖಿತ ಕಣ್ಣುಗಳು ಈ ದೃಶ್ಯವನ್ನು ಕಂಡಿದೆ ಮತ್ತು ನಮ್ಮ ದುಃಖಭರಿತ ಮನಸ್ಸುಗಳು ಒಳ ಒಳಗೇ ರಕ್ತವಾಗಿ ಹರಿದಿದೆ ಆದರೆ ನಾವು ಈ ಹಿಂಸೆಯನ್ನು ಬಹಳ ತಾಳ್ಮೆ ಮತ್ತು ಸಹನೆಯಿಂದ ಸಹಿಸಿಕೊಂಡಿದ್ದೇವೆ..... ನಾವು ನಮ್ಮ ಮುಂಬರುವ ಪೀಳಿಗೆಗೂ ಹೇಳುತ್ತೇವೆ ಯಾರ ತಲೆಯ ಮೇಲೆ ರಾಜನ ಕಿರಿಟವು ಧರಿಸಿದ್ದಾರೋ ಅವರು ನಗೆದಾಡಲಿ ಏಕೆಂದರೆ ಅಲ್ಲಾಹನು ನಿಮಗೆ ಜಗತ್ತಿನಲ್ಲಿ ಶಕ್ತಿ ನೀಡಿದಾಗ ಮತ್ತು ನೀವು ನಿಮ್ಮ ಶತ್ರುವಿನ ತಲೆಯನ್ನು ಪಚ್ಚಿಹಾಕುವುದಕ್ಕೆ ಸಾಮರ್ಥ್ಯ ಹೊಂದಿದಾಗ ನಿಮ್ಮ ಕೈಗಳನ್ನು ಯಾವುದೇ ಮಾನವ ಶಕ್ತಿಯು ತಡೆಗಟ್ಟದಿದ್ದರೆ ನೀವು ನಿಮ್ಮ ಪೂರ್ವಜರ ಮೇಲೆ ಆದ ಹಿಂಸೆಗಳನ್ನು ನೆನಪಿಸಿಕೊಂಡು ನಿಮ್ಮ ರಕ್ತವನ್ನು ಕುದಿಸಿಕೊಳ್ಳದಿರಿ ಮತ್ತು ನಮ್ಮ ದೌರ್ಬಲ್ಯದ ಕಾಲದ ಮಾನವನ್ನಾಡಿರಿ ಏಕೆಂದರೆ ಹೀಗೆ ಮಾಡದಿದ್ದಲ್ಲಿ ಜನರು ಹೇಳುತ್ತಾರೆ ಇವರು ದೌರ್ಬಲ್ಯರಾಗಿದ್ದಾಗ ಶತ್ರುಗಳ ಮುಂದೆ ಸುಮ್ಮನಿದ್ದರು ಆದರೆ ಇಂದು ಇವರು ಶಕಿಯುತವಾದಲ್ಲಿ ಸೇಡನ್ನು ತೀರಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ಆದ್ದರಿಂದ ನೀವು ಇಂತಹ ಕಾಲದಲ್ಲಿಯೂ ಸಹ ತಾಳ್ಮೆ ವಹಿಸಿರಿ ಮತ್ತು ತಮ್ಮ ಸೇಡನ್ನು ಅಲ್ಲಾಹನ ಮೇಲೇಯೇ ಇರಿಸಿರಿ. ಓ ಆಕಾಶವೇ ನೀನು ಸಾಕ್ಷಿಯಾಗಿರು ನಾವು ಮುಂಬರುವ ನಮ್ಮ ಪೀಳಿಗೆಗೆ ಅಲ್ಲಾಹನ ನಿಜವಾದ ಮಸೀಹರ ಕರುಣೆಯ ಮತ್ತು ಕ್ಷಮಿಸುವಂತಹ ಸಂದೇಶವನ್ನು ನೀಡಿದ್ದೇವೆ."

ಹಝ್ರತ್ ಚೌಧರಿ ಝಫ್‌ರುಲ್ಲಾಹ್ ಖಾನ್ ಸಾಹೆಬ್(ರ) ಹೇಳುತ್ತಾರೆ:

ನಾನು ಇದನ್ನು ಹೇಳುವುದನ್ನು ಬಯಸುತ್ತೇನೆ ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹೆಬ್(ರ) ತಮ್ಮ ಜೀವನ ಪರ್ಯಂತ ಮಾನವೀಯ ಸೇವೆ, ಇಸ್ಲಾಮ್, ಮತ್ತು ಜಮಾಅತ್ತಿನ ಸೇವೆಯಲ್ಲಿ ನಿರತಗೊಳಿಸಿದ್ದರು ಮತ್ತು ಅಲ್ಲಾಹನ ಅನುಗ್ರಹದಿಂದ ತಮಗೆ ಇಂತಹ ಸೇವೆಗಳ ಅವಕಾಶಗಳು ಬಹಳಷ್ಟು ಬಾರಿ ಒದಗಿ ಬಂತು ಆ ಅವಕಾಶಗಳಿಂದ ಅವರು ಸಂಪೂರ್ಣ ಲಾಭವನ್ನು ಬಹಳ ಹೃತ್ಪೂರ್ವಕವಾಗಿ ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಸ್ಥಿರತೆಗೋಸ್ಕರ ಪಡೆದುಕೊಂಡರು. ಆದ್ದರಿಂದ ಜಮಾಅತ್ತಿನ ಶೈಕ್ಷಣಿಕ ಮತ್ತು ನೈತಿಕ ತರಬೇತಿಯು ಸದಾ ನಿರತವಾಗಿ ನಡೆಯುತ್ತಲೇ ಇರುತ್ತದೆ. ನೈಜ್ಯವಾಗಿ ಇದು ಅವರ ಸ್ಮರಣೀಯ ಕಾರ್ಯವಾಗುವುದು. ಆದರೆ ಈ ಎಲ್ಲದ್ದರಿಂದ ಬಹಳ ಅತ್ಯುತ್ತಮ ಮತ್ತು ಬಹಳ ಪ್ರಮುಕವಾದ ಸೇವೆ ಮತ್ತು ಬಲಿದಾನ ಆಗಿದೆ ಅದು ತಾವು ಹಝ್ರತ್ ಅಮೀರುಲ್ ಮೂಮಿನೀನ್ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಅನಾರೋಗ್ಯದ ಕಾಲದಲ್ಲಿ ಪ್ರತಿಕ್ಷಣ ನೀಡಿದರು ಅದನ್ನು ಅವರು ನಿಸ್ವಾರ್ಥತೆಯಿಂದ ಪೂರ್ಣಗೊಳಿಸಿದರು. ಈ ಕಾಲವು ಇಡೀ ಜಮಾ ಅತ್ತಿನವರಿಗೆ ಕ್ರಮೇಣ ಜಮಾಅತ್ತಿನ ನಿಷ್ಠಾವಂತರಿಗೆ ಮತ್ತು ಖುದ್ದಾಮರಿಗೆ ಆದರೆ ಎಲ್ಲದಕ್ಕಿಂದ ಹೆಚ್ಚು ಹಝ್ರತ್ ಸಾಹೆಬ್‌ಝಾದ ಸಾಹೆಬರಿಗೆ ತಳ್ಮೆ ವಹಿಸಬೇಕಾದ ಮತ್ತು ಬಹಳ ದುಃಖಕರವಾದ ಸಂಗತಿ ಆಗಿತ್ತು. ಈ ಎಲ್ಲಾ ಕಾಲದಲ್ಲಿ ಅವರು ತಮ್ಮ ದೇಹ, ತಮ್ಮ ಆತ್ಮ, ತಮ್ಮ ಶಕ್ತಿ, ಸಾಮರ್ಥ್ಯ, ತಮ್ಮ ಸಮಯ, ಆಸೆ ಆಕಾಂಕ್ಷೆಗಳು, ತಮ್ಮ ಜೀವನ ಅಲ್ಲಾಹನಿಗೋಸ್ಕರ ಅರ್ಪಿಸಿದ್ದು ಅವೆಲ್ಲವೂ ಅವರಿಂದ ಸಾಧ್ಯವಾಯಿತೆ ಹೊರತು ಬೇರೆಯವರಿಂದ ಸಾಧ್ಯವಾಗುತ್ತಿರಲಿಲ್ಲ. ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹುತಆಲ ರವರ ಅನಾರೋಗ್ಯ ಮತ್ತು ತೊಂದರೆ ಸಮಕಷ್ಟಗಳ ಭಾವನೆ ಒಂದು ಕಡೆ ಆದರೆ ಜಮಾಅತ್ತಿನ ಪ್ರತಿಯೊಬ್ಬರ ದುಃಖ, ತೊಂದರೆ, ಸಂಕಷ್ಟಗಳ ಭಾವನೆ ಮತ್ತು ಪ್ರತಿಯೊಬ್ಬರಿಗೆ ತಾಳ್ಮೆ ನೀಡುವುದು ಮತ್ತು ಅವರ ದುಃಖವನ್ನು ಸಹಿಸಲು ಅವರಿಗೆ ಧೈರ್ಯ ತುಂಬುವುದು ಇನ್ನೊಂದು ಕಡೆ ಜಮಾಅತ್ತಿನ ಪ್ರಗತಿಗೊಸ್ಕರ, ಜಮಾಅತ್ತಿನ ಬೇರೆ ಬೇರೆ ಭಾಗಗಳ ಕೆಲಸಕಾರ್ಯದ ಬಗ್ಗೆ ಚರ್ಚಿಸುವುದು ಮತ್ತು ತಿಳಿಹೇಳುವ ಹೊಣೆಗಾರಿಕೆ ಆಗಿತ್ತು. ಮೂರನೇಯ ಕಡೆ ಸೂಕ್ಷ್ಮ ಯೋಚನೆ ಮತ್ತು ಭಾವನೆಗಳ ರಕ್ಷಣೆ. ನಾಲ್ಕನೆಯ ಕಡೆ ಉದ್ದೇಶ. ಹೃದಯ, ಮನಸ್ಸು, ಆತ್ಮ ಎಲ್ಲಾದರ ಮೇಲೆ ಅಲ್ಲಾಹನ ಕೆಲಸಗಳು ಆವರಿಸಿತ್ತು ಯಾವ ಸಂಬಂಧಿಕರ ಕೆಲಸಕ್ಕೆ ಅವಕಾಶವಿರಲಿಲ್ಲ. ನಿಜವೇನೆಂದರೆ ಅಲ್ಲಾಹನ ಕೆಲಸಗಳೆ ಸಂಬಂಧಿಕರ ಕೆಲಸಗಳಾಗಿದ್ದವು. ಇಡೀ ಜೀವವು ಅವನಿಗೋಸ್ಕರ ನಿರತಗೊಳಿಸಿದರು ಅದರಲ್ಲೆ ನಿರತರಾಗಿದ್ದರು. ಮನಸ್ಸು ಉಕ್ಕಿ ಬರುತ್ತಿತ್ತು. ಕಂಬನಿ ಸುರಿಯುತ್ತಾ ಇತ್ತು ಹೃದಯವೂ ರಕ್ತವಾಗಿತ್ತು ಮತ್ತು **ಲಾಕಿನ್ ಲಾ ನಕೂಲು ಇಲ್ಲ ಮಾ ಯರ್‌ಝಾಬಿಹಿ ರಬ್ಬನಾ** ಎಂಬ ಸ್ಥಿತಿಯಾಗಿತ್ತು. ತಮ್ಮ ಪಿತ ಮಹಾತ್ಮರಾದ ಅಲೈಹಿಸ್ಸಲಾಮ್ ಅವರ ನುಡಿಮುತ್ತು ಪ್ರತಿಕ್ಷಣ ಮುಂದೆ ಇತ್ತು.

**ಅನ್‌ದರೀಂ ರಾಹ್ ದರ್‌ದೆ ಸರ್ ಬಸಿಯಾರ್ ನೇಸ್ತ್**
**ಜಾನ್ ಬಖಿವಾಹಿದ್ ದಾದನಿಶ್ ಬಸಿಯಾರ್ ನೇಸ್‌ತ್**

ಮಿಯಾಂ ಬಶೀರ್ ಅಹ್ಮದ್ ಸಾಹೆಬ್ ಅವರು ಅದನ್ನು ತಮ್ಮ ಕಾರ್ಯಗಳ ಮುಖಾಂತರ ಒಂದು ನೈಜ್ಯತೆಯನ್ನು ಸಾಬಿತ್ ಪಡಿಸಿದರು, ಪ್ರತಿ ಕ್ಷಣ ಜೀವ ಅರ್ಪಿಸಿದರು ಮತ್ತು ಮುಗುಳುನಗುತ್ತಾ ಪುನಃ ಜೀವ ಅರ್ಪಿಸಿದರು, ಅರ್ಪಿಸುತ್ತಾ ಹೋದರು ಕೊನೇಗೆ

**ಯಾ ಅಯ್ಯುಹನ್ನಫ್ಸುಲ್ ಮುತ್ಮಿನ್ನ. ಇರ್ಜಿಯೀ ಇಲಾ ರಾಝಿಯತನ್ ಮರ್ಝೀಯ. ಫದ್‌ಖುಲೀ ಇಬಾದಿ. ವದ್‌ಖುಲೀ ಜನ್ನತಿ.**

ಈ ಶುಭ ಸಮಾಚಾರ ಕೇಳಿದ ತಕ್ಷಣ

**ಲಬ್ಬೈಕ್ ಅಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ್ ಲಾಶರೀಕಲಕ ಲಬ್ಬೈಕ್**

ಅದರೊಂದಿಗೆ ಕೊನೆಗೆ ಅವನ ಉಡುಗೋರೆಯನ್ನು ಅವನಿಗೆ ಅರ್ಪಿಸಿ ಎಲ್ಲಾ ಹೊಣೆಗಾರಿಕೆಯ ಯಶಸ್ಸುಗಳೊಂದಿಗೆ ವಿರಕ್ತಿಯನ್ನು ಪಡೆದರು.

(ಮುನ್ನುಡಿ "ಹಯಾತೆ ಬಶೀರ್" ಪುಟ–6–7)

*************

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.